ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ.ಅಮರನಾಥ.ಎಸ್.ಎಸ್. ಭಂಡಾರಿ, ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:22–2–2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:6–8–2003 ರಿಂದ ದಿ:17–6–2006 ರವರೆಗೆ ಅಬಕಾರಿ ನಿರೀಕ್ಷಕರಾಗಿ ಬಂಟ್ವಾಳ ಉಪ ವಿಭಾಗದಲ್ಲಿ ಕರ್ತವ್ಯನಿರ್ವಹಿಸುತ್ತಿದ್ದು, ತನಗೆ ದಿ:16–10–2004 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ತಾಲೂಕು ಕಲ್ಲಡ್ಕ ಮಾಣಿ ರಾಷ್ಟ್ರೀಯ ಹೆದ್ದಾರಿ–48 ರಲ್ಲಿ ತಮ್ಮ ಸಿಬ್ಬಂದಿಯವರೊಂದಿಗೆ ರಸ್ತೆಗಾವಲು ನಡೆಸುತ್ತಿದ್ದಾಗ, ಬೆಳಿಗ್ಗೆ 10–00 ಗಂಟೆ ಸಮಯಕ್ಕೆ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ರ ಲಾರಿಯು ಬಂಟ್ವಾಳ ಕಡೆಗೆ ಬರುತ್ತಿದ್ದು, ತನಗೆ ಮೊದಲೇ ಬಂದ ಮಾಹಿತಿಯಂತೆ ಸದರಿ ವಾಹನವನ್ನು ತಡೆದು ನಿಲ್ಲಿಸಿ ಚಾಲಕನಲ್ಲಿ ವಾಹನದಲ್ಲಿದ್ದ ಸರಕಿನ ಬಗ್ಗೆ ವಿಚಾರಿಸಲಾಗಿ, ಸದರಿ ವಾಹನದಲ್ಲಿ ಕಾಫಿ ಬೀಜ ಇದೆ ಎಂದು ತಿಳಿಸಿರುತ್ತಾನೆ. ವಾಹನಕ್ಕೆ ಅಳವಡಿಸಿದ ಕಂಟೈನರ್ ಬಾಗಿಲನ್ನು ತೆರೆಯಲು ಚಾಲಕನು ನಿರಾಕರಿಸಿರುವುದರಿಂದ, ಸಂಶಯದ ಮೇರೆಗೆ ಸದರಿ ಕಂಟೈನರ್‌ನ ಬಾಗಿಲನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದ್ದು, ವಾಹನವನ್ನು ಪರಿಶೀಲಿಸಲು ಮಾನ್ಯ ನ್ಯಾಯಾಲಯದಿಂದ ವಾರಂಟ್ ಪಡೆಯಲು ಕಾಲಾವಕಾಶಯಿಲ್ಲದಿರುವ ಕಾರಣಗಳನ್ನು ನಮೂದಿಸಿ ಸ್ಥಳದಲ್ಲಿಯೇ ಸರ್ಚ್ ಮೆಮೊವನ್ನು ತಯಾರಿಸಿದೆವು. ಸದರಿ ಕಂಟೈನರ್‌ನ ಬಾಗಿಲಿಗೆ ಸೀಲ್ ಮಾಡಲಾಗಿದ್ದು, ಸದರಿ ಸೀಲನ್ನು ಸಾಕ್ಷಿದಾರರ ಸಮಕ್ಷಮ ಒಡೆದು ಬಾಗಿಲನ್ನು ತೆರೆದು ನೋಡಲಾಗಿ, ಖಾಲಿ ರಟ್ಟಿನ ಪೆಟ್ಟಿಗೆಗಳನ್ನು ಮೇಲ್ನೋಟಕ್ಕೆ ಜೋಡಿಸಿದ್ದು, ಸದರಿ ರಟ್ಟಿನ ಪೆಟ್ಟಿಗೆಗಳನ್ನು ಕೆಳಗಿಳಿಸಿ ನೋಡಲಾಗಿ, ಕಂಟೈನರ್‌ನಲ್ಲಿ 35 ಲೀಟರ್ ಗಾತ್ರದ ಬಿಳಿ ಬಣ್ಣದ ದ್ರವ್ಯ ತುಂಬಿದ ಪ್ಲಾಸ್ಟಿಕ್ ಕ್ಯಾನುಗಳು ಇದ್ದದ್ದು ಕಂಡು ಬಂತು. ಅವುಗಳಲ್ಲಿ ಒಂದು ಕ್ಯಾನಿನ ಮುಚ್ಚಳವನ್ನು ತೆರೆದು ನೋಡಲಾಗಿ, ಅದು ಘಾಟು ವಾಸನೆಯಿಂದ ಕೂಡಿಕೊಂಡು ಅದರಲ್ಲಿದ್ದ ದ್ರವ್ಯವು ಮದ್ಯಸಾರವೆಂದು ಖಚಿತವಾದುದರಿಂದ, ಒಟ್ಟು 272 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಮದ್ಯಸಾರ ತುಂಬಿರುವುದು ಖಚಿತವಾಯಿತು. ಸದರಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿದ್ದ ಮದ್ಯಸಾರವನ್ನು ಸಾಗಿಸಲು ಪರ್ಮಿಟ್ ಇದೆಯೇ ಎಂದು ಚಾಲಕನಲ್ಲಿ ವಿಚಾರಿಸಲಾಗಿ, ಆತನು ಯಾವುದೇ ಪರ್ಮಿಟ್ ಅಥವಾ ದಾಖಲೆ ಪತ್ರವನ್ನು ಹಾಜರುಪಡಿಸದಿರುವ ಕಾರಣಕ್ಕೆ, ಒಂದು ಕ್ಯಾನಿನಿಂದ ರಾಸಾಯನಿಕ ಪರೀಕ್ಷೆಗಾಗಿ 5 ಲೀಟರ್ ಮದ್ಯಸಾರವನ್ನು ಒಂದು 5 ಲೀಟರ್ ಬಿಳಿ ಪ್ಲಾಸ್ಟಿಕ್ ಕ್ಯಾನಿನಲ್ಲಿ ಮಾದರಿಗಾಗಿ ತೆಗೆದು, ಕ್ಯಾನಿಗೆ ಬಟ್ಟೆ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ನಂತರ ಮಾದರಿ ಕ್ಯಾನಿಗೆ ಪಂಚರ ಸಹಿಯಿರುವ ವಿವರವುಳ್ಳ ಚೀಟಿಯನ್ನು ಅಂಟಿಸಿದರು. ಎಲ್ಲಾ ಕ್ಯಾನುಗಳಿಗೂ ಕ್ರಮ ಸಂಖ್ಯೆ: 1 ರಿಂದ 272 ಎಂದು ಕ್ರಮ ಸಂಖ್ಯೆ ನೀಡಲಾಯಿತು. ಸದರಿ ಚಾಲಕ ಮತ್ತು ಕ್ಲೀನರ್‌ಗಳ ಹೆಸರು ಮತ್ತು ವಿಳಾಸವನ್ನು ಪಡೆದುಕೊಂಡು, ವಶಪಡಿಸಿಕೊಂಡ ಲಾರಿಯ ಚಾಸೀಸ್ ನಂಬರು ಮತ್ತು ಇಂಜಿನ್ ನಂಬರನ್ನು ಪರಿಶೀಲಿಸಲಾಯಿತು. ಸದರಿ ಲಾರಿಗೆ ಸಂಬಂಧಿಸಿದ ನೋಂದಣಿ ಪುಸ್ತಕದ ಜೆರಾಕ್ಸ್ ಪ್ರತಿ ಲಾರಿಯ ಕ್ಯಾಬಿನ್‌ನಲ್ಲಿ ದೊರೆತ್ತಿದ್ದು, ಬೇರೆ ಯಾವುದೇ ದಾಖಲಾತಿಗಳು ದೊರೆತ್ತಿರುವುದಿಲ್ಲ. ಸ್ಥಳದಲ್ಲಿಯೇ ಮಹಜರನ್ನು ತಯಾರಿಸಲಾಯಿತು. ಅದನ್ನು ನಿಶಾನೆ ಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಮತ್ತು ಸ್ಥಳದಲ್ಲಿಯೇ ಜಪ್ತುಪಡಿಸಿಕೊಂಡ ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ–2 ಎಂದು, ಸರ್ಚ್ ಮೆಮೊವನ್ನು ನಿಶಾನೆ ಪಿ–3 ಎಂದು ಗುರುತಿಸಲಾಯಿತು. ನಂತರ ಸ್ಥಳದಲ್ಲಿಯೇ ಸೊತ್ತುಗಳನ್ನು ಹಾಗೂ ಆರೋಪಿಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಬಂಟ್ವಾಳ ಉಪ ವಿಭಾಗ ಕಚೇರಿಗೆ ತಂದು, ಆರೋಪಿಗಳ ವಿರುದ್ದ ಪ್ರಥಮ ಮಾಹಿತಿ ತಯಾರಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆಂದು, ಸದರಿ ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–4ಎ ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾದಂತಹ ಸೊತ್ತುಗಳಾಗಿರುವುದರಿಂದ ಸದರಿ ವರದಿಯನ್ನು ನಿಶಾನೆ ಪಿ–5 ಎಂದು ಗುರುತಿಸಲಾಯಿತು. ದಿ:18–10–2004 ರಂದು ಮಾದರಿಯಾಗಿ ತೆಗೆದ ಪ್ಲಾಸ್ಟಿಕ್ ಕ್ಯಾನನ್ನು ತನ್ನ ಅಬಕಾರಿ ರಕ್ಷಕರಾದ ಶ್ರೀ.ರಾಜ ನಾಯ್ಕ್ ಇವರ ಮುಖಾಂತರ ರಾಸಾಯನಿಕ ಪರೀಕ್ಷೆಗಾಗಿ ರಾಸಾಯನಿಕ ತಜ್ಞರು, ಬೆಂಗಳೂರು ಇವರಿಗೆ ಕಳುಹಿಸಲಾಗಿದ್ದು, ಅವರಿಂದ ದಿ:19–10–2004 ರಂದು ವರದಿ ತಲುಪಿರುತ್ತದೆ. ಸದರಿ ವರದಿಯನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಲಾರಿಯ ಮಾಲಿಕತ್ವದ ಬಗ್ಗೆ ಮಾಹಿತಿ ನೀಡುವಂತೆ ಕೋರಿ ಆರ್.ಟಿ.ಓ. ಕಚೇರಿಗೆ ಪತ್ರ ಬರೆಯಲಾಗಿದ್ದು, ಅವರಿಂದ ವರದಿ ಪಡೆದು ಸದರಿ ವರದಿಯಲ್ಲಿ ಶ್ರೀ.ಪಿ.ವಿ.ಜಾರ್ಜ್ ತಾರಕ್ಕನ್ ಅಂಡ್ ಕಂಪೆನಿ ಎಂಬುವರು ಆರ್.ಸಿ. ಮಾಲೀಕರಾಗಿದ್ದು, ಈ ಬಗ್ಗೆ ವರದಿಯನ್ನು ದಿ:19–1–2005 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–7 ಎಂದು ಗುರುತಿಸಲಾಯಿತು.

ಅರ್ಜಿದಾರರ ಪಾಟೀ ಸವಾಲಿಗೆ ದಿ: 10–9–2008 ರಂದು ಉತ್ತರಿಸುತ್ತಾ, ತನಗೆ ದಿ:16–10–2004 ರಂದು ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಟವಾಗುವ ಬಗ್ಗೆ ಬೆಳಿಗ್ಗೆ 7–00 ಗಂಟೆಗೆ ಮಾಹಿತಿ ತಲುಪಿರುತ್ತದೆ. ತಾನು ಅದೇ ದಿನ

ಬೆಳಿಗ್ಗೆ 8–30 ಗಂಟೆಯಿಂದ ಅಕ್ರಮ ಸಾಗಾಣಿಕೆಯ ವಾಹನದ ಬಗ್ಗೆ ನಿಗಾವಹಿಸಲು ಕಾಯುತ್ತಿದ್ದೆ. ಸದರಿ ಪ್ರಕರಣದಲ್ಲಿ ಜಪ್ತಾದ ಮದ್ಯಸಾರಕ್ಕೆ ಸಂಬಂಧಿಸಿ ಸುಳ್ಳು ಪ್ರಕರಣ ದಾಖಲಿಸಿರುವುದು ಎಂದರೆ ಸರಿಯಲ್ಲ. ವಶಪಡಿಸಿಕೊಳ್ಳಲಾದ ಮದ್ಯಸಾರಕ್ಕೂ ಹಾಗೂ ಜಪ್ತಾಗಿರುವ ವಾಹನಕ್ಕೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆಗಿದ್ದ ಶ್ರೀ.ರಾಜ ನಾಯ್ಕ್, ಅಬಕಾರಿ ರಕ್ಷಕ, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:22–2–2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:18–10–2004 ರಂದು ತಕ್ಷೀರಿಗೆ ಸಂಬಂಧಪಟ್ಟ ಮಾದರಿ ಕ್ಯಾನನ್ನು ಬಂಟ್ವಾಳ ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಬೆಂಗಳೂರು ರಾಸಾಯನಿಕ ತಜ್ಞರಿಗೆ ತಲುಪಿಸಿರುತ್ತೇನೆ. ಮರುದಿವಸ ದಿ:19–10–2004 ರಂದು ತಜ್ಞರು ಪರಿಶೀಲಿಸಿದ ಮಾದರಿ ಕ್ಯಾನು ಮತ್ತು ತಜ್ಞರ ವರದಿಯನ್ನು ಪಡೆದುಕೊಂಡು ಮಾರನೇಯ ದಿನ ತನ್ನ ಮೇಲಾಧಿಕಾರಿಯವರಿಗೆ ತಲುಪಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ವಾಹನ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಯಾರೂ ಹಾಜರಾಗದಿರುವುದರಿಂದ, ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಪ್ರಕರಣದ ಪಿಡಬ್ಲ್ಯೂ–1 ಸಾಕ್ಷಿ ವಿಚಾರಣೆಯಲ್ಲಿ ಅರ್ಜಿದಾರರ ಪಾಟೀ ಸವಾಲಿನ ಉತ್ತರಕ್ಕೆ ಅನುಗುಣವಾಗಿ ವಿಚಾರಣೆಯಲ್ಲಿ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:16–10–2004 ರಂದು ಜಪ್ತುಪಡಿಸಿಕೊಂಡಿರುವ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ರಲ್ಲಿ ಅಕ್ರಮವಾಗಿ 9520 ಲೀಟರ್ ಮದ್ಯಸಾರವನ್ನು ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಡಿಡಬ್ಲ್ಯೂ–1:

ಶ್ರೀ.ಟೋನಿ ತಾರಕ್ಕನ್, ತಾರಕ್ಕನ್ ಹೌಸ್, ಕೊಚ್ಚಿನ್, ಕೇರಳ ಇವರು ದಿ:9–9–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಿದ್ದು, ತಾನು ಜಾರ್ಜ್ ತಾರಕ್ಕನ್ ಕಂಪೆನಿಯ ಮ್ಯಾನೇಜಿಂಗ್ ಪಾರ್ಟ್‌ನರ್ ಆಗಿದ್ದು, ತನ್ನ ಸಂಸ್ಥೆಯು ಕೇಂದ್ರ ಕಚೇರಿ ಕೇರಳದ ಕೊಚ್ಚಿಯಲ್ಲಿದ್ದು, ತಾವುಗಳು ಶಿಪ್ಪಿಂಗ್ ಯಾರ್ಡ್‌ನಲ್ಲಿ ಕ್ಲಿಯರಿಂಗ್ ಮತ್ತು ಪಾರ್ವಡಿಂಗ್ ಉದ್ಯೋಗ ಮಾಡುತ್ತಿದ್ದು, ಇದಕ್ಕಾಗಿ ತನಗೆ ಅಧಿಕೃತ ಸನ್ನದು ಪರವಾನಿಗೆ ಹೊಂದಿರುತ್ತೇನೆ. ಈ ಉದ್ಯಮಕ್ಕೆ ಬಳಸಲು ತನ್ನಲ್ಲಿ ಸುಮಾರು 6 ಕಂಟೈನರ್ ಲಾರಿಗಳಿದ್ದು, ತಾನು ದಿ:14–10–04 ರಂದು ಈ ತಕ್ಷೀರಿಗೆ ಸಂಬಂಧಿಸಿದ ಕಂಟೈನರ್ ಲಾರಿಯನ್ನು ಕಾರ್ಕಳ ಸಂಸ್ಥೆಯಿಂದ ಬಾಡಿಗೆಗೆ 560 ಗೋಣಿ ಚೀಲಗಳಲ್ಲಿ ತುಂಬಿಸಿಡಲಾದ ಫೈನ್ ಪೆರಿಲೈಟ್ ಓರ್ ಎಂಬ ಸರಕನ್ನು ಕೊಚ್ಚಿ ಬಂದರಿನಿಂದ ಸದರಿ ಸಂಸ್ಥೆಗೆ ಸಾಗಾಟ ಮಾಡಲು ಪಡೆದಿರುತ್ತೇನೆ. ತಾನು ದಿ:16–10–2004 ರಂದು ಸದರಿ ಸರಕನ್ನು ಕಾರ್ಕಳ ಉದ್ಯಮದಾರರಿಗೆ ಕೊಚ್ಚಿಯಿಂದ ರವಾನಿಸಿದ ಸರಕರನ್ನು ಡೆಲಿವರಿ ಮಾಡಿ ಪುನ: ದಿ:16–10–2004 ರವರೆಗೆ ಹಿಂದೆ ಬಾರದ ಕಾರಣ ಸಂಶಯಗೊಂಡು ವಾಹನವು ಎಲ್ಲಿರಬಹುದೆಂದು ವಿಚಾರಿಸಿ, ನಂತರ ಸದರಿ ವಾಹನವನ್ನು ಬಂಟ್ವಾಳ ಅಬಕಾರಿ ಇಲಾಖೆಯವರು ವಶಪಡಿಸಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ವಾಹನಕ್ಕೆ ಸಂಬಂಧಿಸಿ ಅಪರಾಧಿಯನ್ನಾಗಿ ಮಾಡಿರುವ ಬೆನ್ಸನ್, ಬಿನ್: ಲೂಯಿಸ್ ಎಂಬವವನ್ನು ಸದ್ರಿ ವಾಹನದ ಚಾಲಕನಾಗಿ ನೇಮಕಗೊಂಡಿದ್ದು, ಅವನಿಗೆ ಇತರೆ ಅಕ್ರಮ ಸೊತ್ತುಗಳನ್ನು ಸಾಗಾಟ ಮಾಡಲು ನಿಷೇಧಿಸಿರುವ ಬಗ್ಗೆ ತಿಳುವಳಿಕೆ ನೀಡಿರುತ್ತೇನೆ. ಅಕ್ರಮ ಮದ್ಯಸಾರಕ್ಕೂ ಹಾಗೂ ತನಗೆ ಯಾವುದೇ ಸಂಬಂಧವಿರುವುದಿಲ್ಲ. ತನ್ನ ಸಂಸ್ಥೆಯ ಇಬ್ಬರು ಪಾಲುದಾರರ ಪಾಲುದಾರಿಕೆ ಪತ್ರ ದಿ: 1–7–2001 ರಲ್ಲಿ ಮಾಡಿಕೊಂಡಿದ್ದು, ಇದರ ನೋಟರಿ ದೃಢೀಕೃತ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸಿದ್ದು, ಸದರಿ ವರದಿಯನ್ನು ನಿಶಾನೆ ಡಿ–2 ಎಂದು ಗುರುತಿಸಲಾಯಿತು. ಸದರಿ ಟ್ಯಾಂಕರ್‌ನಲ್ಲಿ ಕೊಚ್ಚಿನ್‌ನ ಕಾರ್ಕಳ ಸಂಸ್ಥೆಗೆ ದಿ:13–10–2004 ರಂದು ರವಾನಿಸಿರುವ ಇನ್‌ವಾಯ್ಸ್ ಪ್ರತಿ ಮತ್ತು ಆಮದು ಮಾಡಿಕೊಂಡಿರುವ ಟರ್ಕಿಯ ಸಂಸ್ಥೆ ಇವರ ಬಿಲ್ಲು ಆಫ್ ಲೇಡಿಂಗ್‌ನ್ನು ನಿಶಾನೆ ಡಿ–3 ಎಂದು,ಕಸ್ಟಮರ್ ಕ್ಲಿಯರಿಂಗ್ ಬಿಲ್ಲಿನ ಪ್ರತಿಯನ್ನು ನಿಶಾನೆ ಡಿ–4 ಎಂದು ಮತ್ತು ಗೇಟ್‌ಪಾಸನ್ನು ನಿಶಾನೆ ಡಿ–5 ಎಂದು ಗುರುತಿಸಲಾಯಿತು. ತಾನು ಈ ಅಪರಾಧಕ್ಕೆ ಒಳಪಟ್ಟಿರುವ ಅಕ್ರಮ ಸ್ಪಿರಿಟನ್ನು ತನ್ನ ಸಂಸ್ಥೆಯವರ ತಿಳುವಳಿಕೆಯಿಂದಲೇ ಅಥವಾ ತನ್ನ ತಿಳುವಳಿಕೆಯಿಂದಲೇ ನಡೆದಿರುವುದಿಲ್ಲ. ಈ ಬಗ್ಗೆ ತನಗೆ ಯಾವುದೇ ಸಂಬಂಧವಿರುವುದಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ.

ಎ.ಡಿ.ಪಿ.ಯವರ ಪಾಟೀ ಸವಾಲಿಗೆ ದಿ:5–1–2010 ರಂದು ಉತ್ತರಿಸುತ್ತಾ, ಮುಖ್ಯ ವಿಚಾರಣೆಗಳು ತನ್ನ ಸ್ವಂತ ತಿಳುವಳಿಕೆಯಿಂದಲೇ ಆಗಿರುವುದಿಲ್ಲ. ಬೇರೆಯವರಿಂದಲೇ ತಿಳಿದುಕೊಂಡು ವಿಚಾರಣೆಯಲ್ಲಿ ಸಾಕ್ಷಿ ನೀಡಿರುತ್ತೇನೆ. ತಾನು ವೈಯಕ್ತಿಕವಾಗಿ ತನ್ನ ವಾಹನದಲ್ಲಿ ಎಷ್ಟು ಅಕ್ರಮ ಮದ್ಯಸಾರ ಇತ್ತು ಎಂದು ತನಗೆ ಹೇಳಲಾಗುವುದಿಲ್ಲ. ತಾನು ಸ್ವತ: ಸದರಿ ಲಾರಿಯಲ್ಲಿ ಯಾವುದೇ ಅನಧಿಕೃತ ಕಾನೂನುಬಾಹಿರ ಸ್ಪಿರಿಟನ್ನು ಸಾಗಿಸದೆ ಇರಲು ಯಾವುದೇ ಮುಂಜಾಗ್ರತ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ತಾನು ಈ ಪ್ರಾಧಿಕಾರಕ್ಕೆ ತನ್ನ ಸಂಸ್ಥೆಯ ಮ್ಯಾನೇಜಿಂಗ್ ಪಾರ್ಟ್‌ನರ್ ನೆಲೆಯಲ್ಲಿ ಪತ್ರ ಬರೆದಿರುತ್ತೇನೆ ಹಾಗೂ ಸದರಿ ಪತ್ರವನ್ನು ಅದರ ಆರ್.ಸಿ. ಮಾಲೀಕನಾಗಿ ಕೂಡಾ ಬರೆದಿರುತ್ತೇನೆ. ಸದರಿ ಪತ್ರದ ಪ್ರಕಾರ ಈಗಾಗಲೇ ಬ್ಯಾಂಕ್

ಗ್ಯಾರಂಟಿ ಮುಖಾಂತರ ಈ ಪ್ರಾಧಿಕಾರದ ಮಧ್ಯಂತರ ಆದೇಶದ ಪ್ರಕಾರ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ನ್ನು ಪ್ರಾಧಿಕಾರಕ್ಕೆ ಪುನ: ತಾನು ಸರೆಂಡರ್ ಮಾಡಲು ಸಿದ್ದ ಅಥವಾ ಇಲಾಖೆಯವರು ತಾನು ನೀಡಿದ ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಲು ಅವಕಾಶ ನೀಡಿರುತ್ತೇನೆ. ಆದ ಕಾರಣ ಮೇಲೆ ಹೇಳಿದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನ್ನಿಂದ ಹಾಗೂ ತನ್ನ ಸಂಸ್ಥೆಯಿಂದ ಯಾವುದೇ ಅಭ್ಯಂತರವಿರುವುದಿಲ್ಲ. ತಾನು ದಿ:16–10–2004 ರಂದು ಸದರಿ ಲಾರಿಯಲ್ಲಿ ಅಕ್ರಮ ಮದ್ಯಸಾರವನ್ನು ಸಾಗಾಟ ಮಾಡಲಾಗುತ್ತಿರುವ ವಿಷಯ ತನಗೆ ಗೊತ್ತಿದ್ದು, ತಾನು ಉದ್ದೇಶಪೂರ್ವಕವಾಗಿ ಯಾವುದೇ ಮುಂಜಾಗ್ರತ ಕ್ರಮವನ್ನು ಜರುಗಿಸಿರುವುದಿಲ್ಲವೆಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಶ್ರೀ.ಪಿ.ವಿ.ಜಾರ್ಜ್ ತಾರಕನ್ ಅಂಡ್ ಕಂಪೆನಿ ಇದರ ಮ್ಯಾನೇಜಿಂಗ್ ಪಾರ್ಟನರ್ ಆದ ಶ್ರೀ.ಟೋನಿ ತಾರಕನ್ ಇವರು ಈ ಪ್ರಾಧಿಕಾರಕ್ಕೆ ದಿ:20–10–2009 ರ ಅರ್ಜಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ: ಕೆಎಲ್–07–ವೈ–5751 ನ್ನು ಈ ಪ್ರಾಧಿಕಾರದ ಮಧ್ಯಂತರ ಆದೇಶಾನುಸಾರ ರೂ.4,00,000/– ಬ್ಯಾಂಕ್ ಗ್ಯಾರಂಟಿಯ ಆಧಾರದ ಮೇಲೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ. ತನ್ನ ವಶ ಮಧ್ಯಂತರ ಆದೇಶದ ಪ್ರಕಾರ ನೀಡಿರುವ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ನ್ನು ತಾನು ಈ ಪ್ರಾಧಿಕಾರಕ್ಕೆ ಒಪ್ಪಿಸಲು ಅಥವಾ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ ಮೊತ್ತ ರೂ.4,00,000/– ಮೌಲ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನ್ನಿಂದ ಹಾಗೂ ತನ್ನ ಸಂಸ್ಥೆಯ ಪರವಾಗಿ ಯಾವುದೇ ಅಭ್ಯಂತರವಿರುವುದಿಲ್ಲ. ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತಕ್ಷೀರು ಸಂಖ್ಯೆ:7/2004–05 ದಿ:16–10–2004 ರಂದು ವಶಪಡಿಸಿಕೊಂಡ ಮದ್ಯಸಾರಕ್ಕೂ ಹಾಗೂ ತನ್ನ ಸಂಸ್ಥೆಗೂ ಯಾವುದೇ ಸಂಬಂಧವಿರುವುದಿಲ್ಲ. ಸದರಿ ಅಂಶವನ್ನು ದಿ:5–1–2010 ರ ಎ.ಡಿ.ಪಿ.ಯವರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ದಿನಾಂಕ:16–10–2004 ರಂದು ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ರಲ್ಲಿ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಗಳ ಮತ್ತು ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ರಾಸಾಯನಿಕ ವಿಶ್ಲೇಷಕರ ವರದಿ ಮತ್ತು ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ರಲ್ಲಿ ಅಕ್ರಮವಾಗಿ 9520 ಲೀಟರ್ ಮದ್ಯಸಾರವನ್ನು ಸಾಗಾಟ ಮಾಡಲು ಬಳಸಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ:ಎಸ್‌ಡಿಕೆ/95/ಡಿಟಿಸಿಆರ್/2004–05, ದಿನಾಂಕ:11ನೇ ಜನವರಿ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತಕ್ಷೀರು ಸಂಖ್ಯೆ: 7/2004–05 ದಿನಾಂಕ: 16–10–2004 ರಲ್ಲಿ ಜಪ್ತುಪಡಿಸಿರುವ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:26–4–2005 ರಂದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಕಂಟೈನರ್ ಕ್ಯಾರಿಯರ್ ಟಾಟಾ ಕಂಪೆನಿಯ ಲಾರಿ ಸಂಖ್ಯೆ:ಕೆಎಲ್–07–ವೈ–5751 ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ ಸಂಖ್ಯೆ: 1/2005 ದಿ:23–04–2005 ಕ್ಯಾಥೊಲಿಕ್ ಸಿರಿಯಾನ್ ಬ್ಯಾಂಕ್, ಒಳಂಜಮ್ಮಬಳಮ್, ಕೊಚ್ಚಿನ್ ಶಾಖೆಯ ಬ್ಯಾಂಕ್ ಇದರ ಮೌಲ್ಯದ ಮೊತ್ತ ರೂ.4,00,000/– ವನ್ನು ಸರಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ. ಈ ಆದೇಶದ ಪಾಲನೆ ಬಗ್ಗೆ ಹಾಗೂ ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನವನ್ನು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ ಇವರು ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿ:11–01–2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ: 1– ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ.

ಪ್ರಾ.ಸಾ: 2 – ಶ್ರೀ.ರಾಜ ನಾಯ್ಕ್,ಅಬಕಾರಿ ರಕ್ಷಕ, ಬಂಟ್ವಾಳ ಉಪ ವಿಭಾಗ,ಬಂಟ್ವಾಳ.

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರ್ ಪ್ರತಿ

ನಿಶಾನೆ ಪಿ–1ಎ : ಮಹಜರ್‌ನಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ–2 : ಸೊತ್ತುಗಳ ಪಟ್ಟಿ.

ನಿಶಾನೆ ಪಿ–3 : ಸರ್ಚ್ ಮೆಮೊ.

ನಿಶಾನೆ ಪಿ–4 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ–4A : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ–5 : ತನಿಖಾ ವರದಿ.

ನಿಶಾನೆ ಪಿ–6 : ಕೆಮಿಕಲ್ ವರದಿ.

ನಿಶಾನೆ ಪಿ–7 : ತನಿಖಾ ವರದಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಸಲ್ಲಿಸಿದ ಸಾಕ್ಷಿದಾರರು:

ಡಿಡಬ್ಲ್ಯೂ–1: ಶ್ರೀ.ಟೋನಿ ತಾರಕ್ಕನ್, ತಾರಕ್ಕನ್ ಹೌಸ್, ಕೊಚ್ಚಿನ್, ಕೇರಳ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು:

ನಿಶಾನೆ ಡಿ–2 : ದೃಢೀಕೃತ ದಾಖಲಾತಿಗಳು

ನಿಶಾನೆ ಡಿ–3 : ಇನ್ ವಾಯ್ಸ್ ಪ್ರತಿ ಹಾಗೂ ಆಮದು ಮಾಡಿರುವ ದಾಖಲಾತಿಗಳು.

ನಿಶಾನೆ ಡಿ–4 : ಕಸ್ಟಮ್ ಕ್ಲಿಯರಿಂಗ್ ಬಿಲ್ಲಿನ ಪ್ರತಿ.

ನಿಶಾನೆ ಡಿ–5 : ಗೇಟ್‌ಪಾಸ್

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು.

ಪಿ.ಆರ್.207

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/425/ಡಿಟಿಸಿಆರ್/2007–08, ದಿನಾಂಕ:20ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ಕೋಣಾಜೆ ಪೊಲೀಸ್ ಠಾಣೆ,
ಕೋಣಾಜೆ.

ಆರೋಪಿಗಳು:

ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:

ಶ್ರೀ.ಎಂ.ಎ.ಅಬೂಬಕ್ಕರ್, ಬಿನ್:ಎಂ.ಎ.ಮಹಮ್ಮದ್,
ಮುಂಡಾಡಿ ಹೌಸ್, 5–229(9) ಮದನಿ ನಗರ,
ಮುನ್ನೂರು ಗ್ರಾಮ, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:04-05-2008 ರಂದು ಬಂಟ್ವಾಳ ತಾಲೂಕು ನರಿಂಗಾನ ಗ್ರಾಮದ ಕಲ್ಲಾರೆಕೋಡಿ ಎಂಬಲ್ಲಿ ಕಲ್ಲಾರೆ-ನೆತ್ತಿಲಪದವು ಸಾರ್ವಜನಿಕ ಡಾಮಾರು ರಸ್ತೆಯಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಸಮಯದಲ್ಲಿ ರಾತ್ರಿ 10-30 ಗಂಟೆಗೆ ಮಂಗಳಾಂತಿ ಕಡೆಯಿಂದ ನೆತ್ತಿಲಪದವು ಕಡೆಗೆ ಆಟೋರಿಕ್ಷಾ ಸಂಖ್ಯೆ:ಕೆಎ-19-ಎ-5875 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಪೊಲೀಸರನ್ನು ಕಂಡ ಆಟೋರಿಕ್ಷಾ ಚಾಲಕ ಹಾಗೂ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿಗಳು ರಿಕ್ಷಾದಿಂದ ಇಳಿದು ಪಕ್ಕದ ಗುಡ್ಡದ ಜಾಗಕ್ಕೆ ಓಡಿ ಪರಾರಿಯಾದರು. ಸದರಿ ವ್ಯಕ್ತಿಗಳನ್ನು ಬೆನ್ನಟ್ಟಿದರೂ ಅವರು ತಪ್ಪಿಸಿಕೊಂಡಿರುತ್ತಾರೆ. ಆ ಬಳಿಕ ಸದರಿ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ, ರಿಕ್ಷಾದ ಒಳಗೆ ಹಿಂಬದಿ ಸೀಟಿನಲ್ಲಿ ಸುಮಾರು 20 ಲೀಟರ್‌ನಂತೆ 7 ರಬ್ಬರ್ ಟ್ಯೂಬ್‌ಗಳಲ್ಲಿ ಊರ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿದ ರಬ್ಬರ್ ಟ್ಯೂಬ್‌ಗಳ ಬಾಯಿಯನ್ನು ಕಟ್ಟಿರುವುದು ಕಂಡು ಬಂತು. ಪಂಚರ ಸಮಕ್ಷಮದಲ್ಲಿ ಕಳ್ಳಭಟ್ಟಿ ಸಾರಾಯಿ ತುಂಬಿದ 7 ರಬ್ಬರು ಟ್ಯೂಬ್‌ಗಳನ್ನು ಆಟೋರಿಕ್ಷಾದಿಂದ ಕೆಳಗಿಳಿಸಿ ಎಲ್ಲಾ ರಬ್ಬರು ಟ್ಯೂಬ್‌ಗಳಿಗೆ ಕೆಂಪು ಬಣ್ಣದ ಪೆನ್ನಿನಿಂದ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಡಲಾಯಿತು. ಎ ರಿಂದ ಜಿ ತನಕ ಕ್ರಮಾಂಕ ಕೊಟ್ಟ ಊರ ಕಳ್ಳಭಟ್ಟಿ ಸಾರಾಯಿಯಿಂದ ತಲಾ ಸುಮಾರು 180 ಎಂ.ಎಲ್.ನಷ್ಟು ಊರ ಕಳ್ಳಭಟ್ಟಿ ಸಾರಾಯಿಯನ್ನು ನಾಲ್ಕು ಬಾಟ್ಲಿಗಳ ಸ್ಯಾಂಪಲ್ ತೆಗೆದು ಪ್ರತ್ಯೇಕ ಪ್ರತ್ಯೇಕವಾಗಿ ಕ್ವಾರ್ಟರ್ ಬಾಟಲ್‌ಗಳಿಗೆ ತುಂಬಿಸಿ, ಸದರಿ ಬಾಟಲ್‌ಗಳ ಮುಚ್ಚಳವನ್ನು ಬಂದ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಎಸ್.ಹೆಚ್.ಓ. ಅರಗು ಸೀಲ್ ಹಾಕಿ ಪಂಚರ ಹಾಗೂ ಪೊಲೀಸ್ ಉಪ ನಿರೀಕ್ಷಕರ ಮತ್ತು ಸಿಬ್ಬಂದಿಯವರ ಸಹಿಯಿರುವ ಚೀಟಿಯನ್ನು ಅಂಟಿಸಿ, ಅವುಗಳಿಗೆ ಕ್ರಮವಾಗಿ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಟ್ಟು ಕಳ್ಳಭಟ್ಟಿ ಸಾರಾಯಿಯನ್ನು ಮುಂದಿನ ಕ್ರಮದ ಬಗ್ಗೆ ಸ್ವಾಧೀನಪಡಿಸಿಕೊಳ್ಳಲಾಯಿತು. ಸದರಿ ಆಟೋರಿಕ್ಷಾವನ್ನು ಅಜಮಾಯಿಸಿ ನೋಡಲಾಗಿ, ಇದು ಬಜಾಜ್ ಕಂಪೆನಿಯ ಆಟೋರಿಕ್ಷಾವಾಗಿದ್ದು ಇದರ ನೋಂದಣಿ ಸಂಖ್ಯೆ: ಕೆಎ-19-ಎ-5875 ಆಗಿದ್ದು, ರಿಕ್ಷಾದ ಒಳಗಡೆ ಯಾವುದೇ ದಾಖಲಾತಿಗಳು ಮತ್ತು ಅಕ್ರಮ ಕಳ್ಳಭಟ್ಟಿ ಸಾರಾಯಿಯ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ಮುಂದಿನ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ತಕ್ಷೀರು ನಡೆದ ದಿನಾಂಕ ಮತ್ತು ಸಮಯವನ್ನು ನಮೂದಿಸಿರುತ್ತಾರೆ. ಯಾವುದೇ ದಾಖಲಾತಿಗಳಿಲ್ಲದೆ ಒಟ್ಟು 140 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ರಮವಾಗಿ ಆಟೋರಿಕ್ಷಾದಲ್ಲಿ ಸಾಗಾಟ ಮಾಡಿರುವುದು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ಮತ್ತು 34 ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಓಡಿ ಹೋದ ಇಬ್ಬರು ಆರೋಪಿಗಳ ವಿರುದ್ದ ತಕ್ಷೀರು ಸಂಖ್ಯೆ: 53/2008 ದಿ:4-5-2008 ರಂತೆ ಪ್ರಕರಣವನ್ನು ನೋಂದಾಯಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಮತ್ತು ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಈ ಪ್ರಾಧಿಕಾರಕ್ಕೆ ದಿ:5-5-2008 ರಂದು ವರದಿಯನ್ನು ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂ: ಎಸ್‌ಡಿಕೆ/26/ಸಿಆರ್‌ಎಂ/2008-09 ದಿ:13-05-2008 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಮತ್ತು ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಮುಂದಿನ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ದಿ:02-06-2008 ರಂದು ಹಸ್ತಾಂತರಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: 1/2008-09 ದಿ:16-8-2009 ರ ವರದಿಯಲ್ಲಿ, ತಕ್ಷೀರಿಗೆ ಸಂಬಂಧಿಸಿದ ಕಳ್ಳಭಟ್ಟಿ ಸಾರಾಯಿಯ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪಣಂಬೂರು ಉಪ ವಿಭಾಗ, ದ.ಕ.ಜಿಲ್ಲೆ,ಮಂಗಳೂರು ಇವರು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ಕಳುಹಿಸಿ, ಅವರಿಂದ ಪತ್ರ ಸಂಖ್ಯೆ: ಇ-228-7 ದಿ:12-6-2008 ರ ವರದಿಯಲ್ಲಿ ಕಳ್ಳಭಟ್ಟಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.22 ಇರುವುದಾಗಿ ಹಾಗೂ ಕಳ್ಳಭಟ್ಟಿ ಸಾರಾಯಿಯು ಮಾನವನ ಸೇವನೆಗೆ ಯೋಗ್ಯವಲ್ಲವೆಂದು ದೃಢೀಕರಣ ಪತ್ರ ಪಡೆದಿರುತ್ತಾರೆ.

ಸದರಿ ವರದಿಯಂತೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿ ಮತ್ತು ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಕಳ್ಳಭಟ್ಟಿ ಸಾರಾಯಿಯನ್ನು ನಾಶಪಡಿಸಲು ಮತ್ತು ವಾಹನವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿದ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: 157/2007-08 ದಿ:16-8-2008 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಸಿ) ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ನಿರೀಕ್ಷಕರ ಮತ್ತು ಅಬಕಾರಿ ಉಪ ಅಧೀಕ್ಷಕರ ತನಿಖಾ ವರದಿಯನ್ನು ಆಧರಿಸಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/425/ಡಿಟಿಸಿಆರ್/2007-08 ದಿ:18-9-2008 ರ

ಆದೇಶದಲ್ಲಿ ಮೊಕದ್ದಮೆಯಲ್ಲಿ ಜಪ್ತುಪಡಿಸಿದ ವಾಹನದ ಮುಟ್ಟುಗೋಲು ನಡವಳಿ ಪ್ರಕ್ರಿಯೆಯನ್ನು ಕಾಯ್ದಿರಿಸಿ ಉಳಿದ ಕಳ್ಳಭಟ್ಟಿ ಸಾರಾಯಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಕಳ್ಳಭಟ್ಟಿ ಸಾರಾಯಿಯನ್ನು ಸರಕಾರದ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ:12–9–2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ವರದಿ ಸಂಖ್ಯೆ ದಿ:9–2–2009 ರ ವರದಿಯಲ್ಲಿ ಅಬಕಾರಿ ಉಪ ಅಧೀಕ್ಷಕರು, ವಲಯ ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ಉಪ ನಿರೀಕ್ಷಕರು ಹಾಗೂ ಸಿಬ್ಬಂದಿಯವರ ಮತ್ತು ಸಾರ್ವಜನಿಕರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಶ್ರೀ.ಎಂ.ಎ.ಅಬೂಬಕ್ಕರ್, ಬಿನ್:ಎಂ.ಎ.ಮಹಮ್ಮದ್,ಮುಂಡಾಡಿ ಹೌಸ್, ಮನೆ ನಂ: 5–229(9), ಮದನಿ ನಗರ, ಮುನ್ನೂರು ಗ್ರಾಮ, ಮಂಗಳೂರು ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:1–8–2008 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾದ ನೋಂದಣಿ ಮಾಲೀಕನಾಗಿದ್ದು, ತನ್ನ ವಾಹನವು ಕಳ್ಳಭಟ್ಟಿ ಸಾರಾಯಿ ಸಾಗಾಟದಲ್ಲಿ ಭಾಗಿಯಾಗಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ತನಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯನ್ನು ಪರಿಶೀಲಿಸುವ ಸಲುವಾಗಿ ತನಿಖಾಧಿಕಾರಿಯಾದ ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರಿಗೆ ಈ ಪ್ರಾಧಿಕಾರದಿಂದ ದಿ:16–3–2009 ರಂದು ಅರ್ಜಿಯ ಕುರಿತು ಕ್ರಮ ಜರುಗಿಸುವ ಬಗ್ಗೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ವಾಹನದ ಮೌಲ್ಯಮಾಪನ ವರದಿಯನ್ನು ಪಡೆದು ಒಪ್ಪಿಸುವಂತೆ ಸೂಚಿಸಲಾಗಿದ್ದು, ಅದರಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ದಿ:4–4–2009 ರ ಪತ್ರದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ನೀಡಿರುತ್ತಾರೆ. ಸದರಿ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ಮೂಲ ನೋಂದಣಿ ಸಂಖ್ಯೆ: ಕೆಎ–19–ಎ–5875 ಆಗಿದ್ದು, ಇದರ ಆರ್.ಸಿ. ಮಾಲೀಕ ಶ್ರೀ.ಎಂ.ಎ.ಅಬೂಬಕ್ಕರ್, ಬಿನ್:ಎಂ.ಎ.ಮಹಮ್ಮದ್,ಮುಂಡಾಡಿ ಹೌಸ್, ಮನೆ ನಂ: 5–229(9) ಮದನಿ ನಗರ, ಮುನ್ನೂರು ಗ್ರಾಮ, ಮಂಗಳೂರು ಎಂದು ದೃಢೀಕರಿಸಿ ನೀಡಿರುತ್ತಾರೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ನೀಡಿರುವ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ಮಾಲೀಕರಿಗೆ ಮತ್ತು ಇದರ ಹೆಚ್.ಪಿ.ಎ.ದಾರರಾದ ಮ್ಯಾನೇಜರ್, ಮೆ:ಸುರಕ್ಷಾ ಅಸೋಸಿಯೇಟ್ಸ್, ಉಳ್ಳಾಲ, ಮಂಗಳೂರು ಇವರುಗಳಿಗೆ ಈ ಪ್ರಾಧಿಕಾರದಿಂದ ದಿ:29–4–2009 ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಹೆಚ್.ಪಿ.ಎ.ದಾರರಿಗೆ ನೀಡಿರುವ ನೋಟೀಸು ಸ್ವೀಕೃತಿಯಾಗದೆ ಹಿಂದೆ ಬಂದಿದ್ದು, ವಾಹನ ಮಾಲೀಕರಿಗೆ ನೀಡಿದ ನೋಟೀಸು ಸ್ವೀಕೃತಿಯಾಗಿ ಸ್ವೀಕೃತಿ ಅಂಚೆ ರಶೀದಿ ಬಂದಿರುತ್ತದೆ.

ಈ ಪ್ರಾಧಿಕಾರದಿಂದ ನೀಡಿದ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ಶ್ರೀ.ಎಂ.ಎ.ಅಬೂಬಕ್ಕರ್ ಇವರು ದಿ:23–5–2009 ರಂದು ಈ ಪ್ರಾಧಿಕಾರಕ್ಕೆ ಉತ್ತರವನ್ನು ಸಲ್ಲಿಸುತ್ತಾ, ಸದರಿ ಅರ್ಜಿಯಲ್ಲಿ ತಾನು ಕಡುಬಡವನಾಗಿದ್ದು, ತನ್ನ ವಾಹನವನ್ನು ರಿಕ್ಷಾ ಡ್ರೈವರ್‌ನಾದ ಕಿರಣ್‌ಗೆ ಚಾಲನೆ ಮಾಡಲು ನೀಡಿದ್ದು, ಆತನು ತಕ್ಷೀರಿಗೆ ಸಂಬಂಧಿಸಿದ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಟ ಮಾಡಿದ ಅಪರಾಧದ ಬಗ್ಗೆ ತಾನು ವಿಚಾರಿಸಿದಾಗ ಸುಳ್ಳು ಆಪಾದನೆ ಎಂದು ತಿಳಿದು ಬಂದಿದ್ದು, ಸದರಿ ಆಪಾದನೆಯಲ್ಲಿ ತಾನು ಭಾಗಿಯಾಗಿರುವುದಿಲ್ಲ. ಈ ಕಳ್ಳಭಟ್ಟಿ ಸಾರಾಯಿಗೂ ತನಗೂ ಯಾವುದೇ ಸಂಬಂಧವಿರುವುದಿಲ್ಲ. ತಾನು ಕಡುಬಡವನಾಗಿದ್ದು, ತನಗೆ ವಕೀಲರನ್ನು ಇಟ್ಟು ವಾದ ಮಾಡುವಷ್ಟು ಆರ್ಥಿಕ ಸೌಲಭ್ಯವಿರುವುದಿಲ್ಲ ಮತ್ತು ಈ ಪ್ರಾಧಿಕಾರಕ್ಕೆ ವಾಹನದ ಮೌಲ್ಯಕ್ಕೆ ಅನುಗುಣವಾಗಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತನಗೆ ತಾತ್ಕಾಲಿಕ ನೆಲೆಯಲ್ಲಿ ಬಿಡಿಸಿಕೊಳ್ಳಲು ಸಾಮರ್ಥ್ಯವಿರುವುದಿಲ್ಲವೆಂದು ತನ್ನ ವಾಹನವನ್ನು ತನಗೆ ಶಾಶ್ವತ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಉತ್ತರವನ್ನು ಸಲ್ಲಿಸಿರುತ್ತಾರೆ.

ತದನಂತರ ವಾಹನದ ಮಾಲೀಕರಾದ ಶ್ರೀ.ಎಂ.ಎ.ಅಬೂಬಕ್ಕರ್ ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:21–8–2009 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವನ್ನು ತನಗೆ ಶಾಶ್ವತ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಪ್ರಭಾರ ಸಹಾಯಕ ಅಭಿಯೋಗ ನಿರ್ದೇಶಕರು, ಮಂಗಳೂರು ಇವರು ಪರಿಶೀಲಿಸಿ, ಈ ಬಗ್ಗೆ ಈ ಪ್ರಾಧಿಕಾರಕ್ಕೆ ದಿ:26–9–2009 ರಂದು ವರದಿಯನ್ನು ಸಲ್ಲಿಸಿ, ಸದರಿ ವರದಿಯಲ್ಲಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಸ್ವಾಧೀನಪಡಿಸಿದ ಸೊತ್ತುಗಳಾಗಿದ್ದು, ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವಂತೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಮತ್ತು ನೋಂದಣಿ ಮಾಲೀಕರಾದ ಶ್ರೀ.ಎಂ.ಎ.ಅಬೂಬಕ್ಕರ್ ಮತ್ತು ಅವರ ಪರ ವಕೀಲರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದು,

ವಾಹನದ ಮಾಲೀಕರಾಗಲಿ ಅವರ ಪರ ವಕೀಲರಾಗಲಿ ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರ ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:04-05-2008 ರಂದು ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧಕ್ಕೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ?.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಸೈಫುಲ್ಲ, ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಹಾಲಿ ಉಳ್ಳಾಲ ಪೊಲೀಸ್ ಠಾಣೆ ಇವರು ದಿ:16-09-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ದಿ:4-4-2008 ರಿಂದ ದಿ:18-9-2008 ರವರೆಗೆ ಕೋಣಾಜೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕರಾಗಿ ಕರ್ತವ್ಯನಿರ್ವಹಿಸುತ್ತಿದ್ದು, ತನಗೆ ದೊರೆತ ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂದಿಯವರು ಮತ್ತು ಪಂಚರೊಂದಿಗೆ ಕೂಡಿಕೊಂಡು ಸಂಜೆ 10-30 ಗಂಟೆಗೆ ಮಂಗಳಾಂತಿ ಕಡೆಯಿಂದ ನೆತ್ತಿಲಪದವು ಕಡೆಗೆ ಆಟೋರಿಕ್ಷಾ ಕಡೆಗೆ ಕೆಎ-19-ಎ-5875 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಪೊಲೀಸರನ್ನು ಕಂಡ ಆಟೋರಿಕ್ಷಾ ಚಾಲಕ ಹಾಗೂ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿಗಳು ರಿಕ್ಷಾದಿಂದ ಇಳಿದು ಪಕ್ಕದ ಗುಡ್ಡದ ಜಾಗಕ್ಕೆ ಓಡಿ ಪರಾರಿಯಾದರು. ಸದರಿ ವ್ಯಕ್ತಿಗಳನ್ನು ಬೆನ್ನಟ್ಟಿದರೂ ಅವರು ತಪ್ಪಿಸಿಕೊಂಡಿರುತ್ತಾರೆ. ಆ ಬಳಿಕ ಸದರಿ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-5875 ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ, ರಿಕ್ಷಾದ ಹಿಂಬದಿ ಸೀಟಿನಲ್ಲಿ ಸುಮಾರು 20 ಲೀಟರ್‌ನಂತೆ 7 ರಬ್ಬರ್ ಸೀಟುಗಳಲ್ಲಿ ಊರ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿದ ರಬ್ಬರ್ ಟ್ಯೂಬ್‌ಗಳ ಬಾಯನ್ನು ಕಟ್ಟಿರುವುದು ಕಂಡು ಬಂತು. ಪಂಚರ ಸಮಕ್ಷಮದಲ್ಲಿ ಕಳ್ಳಭಟ್ಟಿ ಸಾರಾಯಿ ತುಂಬಿದ 7 ರಬ್ಬರು ಟ್ಯೂಬ್‌ಗಳನ್ನು ಆಟೋರಿಕ್ಷಾದಿಂದ ಕೆಳಗಿಳಿಸಿ, ಎಲ್ಲಾ ರಬ್ಬರು ಟ್ಯೂಬ್‌ಗಳಿಗೆ ಕೆಂಪು ಬಣ್ಣದ ಪೆನ್ನಿನಿಂದ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಡಲಾಯಿತು. ಎ ರಿಂದ ಜಿ ತನಕ ಕ್ರಮಾಂಕ ಕೊಟ್ಟ ಊರ ಕಳ್ಳಭಟ್ಟಿ ಸಾರಾಯಿಂದ ತಲಾ ಸುಮಾರು 180 ಎಂ.ಎಲ್.ನಷ್ಟು ಊರ ಕಳ್ಳಭಟ್ಟಿ ಸಾರಾಯಿಯನ್ನು ಸ್ಯಾಂಪಲ್ ಬಗ್ಗೆ ತೆಗೆದು ಪ್ರತ್ಯೇಕ ಪ್ರತ್ಯೇಕವಾಗಿ ಕ್ವಾರ್ಟರ್ ಬಾಟಲ್‌ಗಳಿಗೆ ತುಂಬಿಸಿ, ಸದರಿ ಬಾಟಲ್‌ಗಳ ಮುಚ್ಚಳವನ್ನು ಬಂದ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಎಸ್.ಹೆಚ್.ಓ. ಅರಗು ಸೀಲ್ ಹಾಕಿ ಪಂಚರ ಹಾಗೂ ಪೊಲೀಸ್ ಉಪ ನಿರೀಕ್ಷಕರ ಮತ್ತು ಸಿಬ್ಬಂದಿಯವರ ಸಹಿಯಿರುವ ಚೀಟಿಯನ್ನು ಅಂಟಿಸಿ, ಅವುಗಳಿಗೆ ಕ್ರಮವಾಗಿ ಎ,ಬಿ,ಸಿ,ಡಿ, ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಟ್ಟು ಕಳ್ಳಭಟ್ಟಿ ಸಾರಾಯಿಯನ್ನು ಮುಂದಿನ ಕ್ರಮದ ಬಗ್ಗೆ ಸ್ವಾದೀನಪಡಿಸಿಕೊಳ್ಳಲಾಯಿತು. ಸದರಿ ಆಟೋರಿಕ್ಷಾವನ್ನು ಅಜಮಾಯಿಸಿ ನೋಡಲಾಗಿ, ಇದು ಬಜಾಜ್ ಕಂಪೆನಿಯ ಆಟೋರಿಕ್ಷಾವಾಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎ-19-ಎ-5875 ಆಗಿದ್ದು, ರಿಕ್ಷಾದ ಒಳಗಡೆ ಯಾವುದೇ ದಾಖಲಾತಿಗಳು ಮತ್ತು ಅಕ್ರಮ ಕಳ್ಳಭಟ್ಟಿ ಸಾರಾಯಿಯ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ಮುಂದಿನ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನ ಪ್ರತಿಯನ್ನು ನಿಶಾನೆ ಪಿ-1 ಎಂದು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಬಂದು ಓಡಿ ಹೋದ ಆರೋಪಿಗಳ ವಿರುದ್ದ ಪ್ರಕರಣ ಸಂಖ್ಯೆ: 53/2008 ರಂತೆ ಪ್ರಕರಣವನ್ನು ದಾಖಲಿಸಿರುತ್ತೇನೆ. ಅದನ್ನು ನಿಶಾನೆ ಪಿ-2 ಎಂದು ಗುರುತಿಸಿರುತ್ತೇನೆ. ನಂತರ ತನಿಖೆಯನ್ನು ಮುಂದುವರಿಸಿ ತಕ್ಷೀರಿಗೆ ಸಂಬಂಧಿಸಿದ ಆಟೋರಿಕ್ಷಾದ ಬಿ ಎಕ್ಸ್‌ಟ್ರ್ಯಾಕ್ಟ್ ಕುರಿತು ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸಾಕ್ಷಿಗಳ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅಮಾನತ್ತುಪಡಿಸಿದ ಮಾದರಿ ಬಾಟಲ್‌ಗಳನ್ನು ಮೇಲಾಧಿಕಾರಿಗಳ ಮುಖಾಂತರ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಕೊಟ್ಟಿರುತ್ತೇನೆ. ತಾನು ದಿ:12-6-2008

ರಂದು ಪ್ರಕರಣದಲ್ಲಿ ಅಮಾನತ್ತುಪಡಿಸಿದ ಆಟೋರಿಕ್ಷಾ ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಅಬಕಾರಿ ನಿರೀಕ್ಷಕರು, ಬಂಟ್ವಾಳ ಇವರಿಗೆ ಹಸ್ತಾಂತರಿಸಿ ಸ್ವೀಕೃತಿಯನ್ನು ಪಡೆದಿರುತ್ತೇನೆ. ದಿನಾಂಕ:5–6–2008 ರಂದು ಪ್ರಕರಣಕ್ಕೆ ಸಂಬಂಧಿಸಿದ ಆರೋಪಿ ಕಿರಣ್ ಕುಮಾರ್ ಎಂಬವನನ್ನು ಮಾನ್ಯ ಬಂಟ್ವಾಳ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಪಡೆದು ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿರುತ್ತಾನೆ. ಆಟೋರಿಕ್ಷಾದಲ್ಲಿದ್ದ ಇನ್ನೊಬ ವ್ಯಕ್ತಿಯ ಬಗ್ಗೆ ವಿಷಯ ತಿಳಿದುಕೊಳ್ಳಲಾಗಿ, ಆತನು ಎಲಿಯಾರುಪದವಿನ ಬೆಂಜಿಲ್ ಎಂಬುವುದಾಗಿ ತಿಳಿದು ಬಂದಿರುತ್ತದೆ. ತಾನು ದಿ: 15–6–2008 ರಂದು ರಿಕ್ಷಾದ ಆರ್.ಸಿ. ಮಾಲೀಕರಿಗೆ ಕಲಂ 133 ರ ಪ್ರಕಾರ ನೋಟೀಸು ಜಾರಿ ಮಾಡಿದ್ದು, ಅವರು ಠಾಣೆಯಲ್ಲಿ ಹಾಜರಾಗಿ ಆರ್.ಸಿ. ಮಾಲೀಕರಾದ ಅಬೂಬಕ್ಕರ್ ಇವರು ಸುಮಾರು 4 ತಿಂಗಳಿನಿಂದ ಕಿರಣ್ ಎಂಬವರಿಗೆ ಬಾಡಿಗೆ ರೂಪದಲ್ಲಿ ಕೊಡಿಸಿದ್ದು, ಈ ಪ್ರಕರಣದಲ್ಲಿ ಕಳ್ಳಭಟ್ಟಿ ಸರಾಯಿ ಸಾಗಾಟ ಮಾಡಿದ ಪ್ರಯುಕ್ತ ಆಟೋರಿಕ್ಷಾ ಜಪ್ತಾಗಿರುವ ವಿಷಯ ತನಗೆ ತಿಳಿದಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ. ಆರ್.ಸಿ. ಮಾಲೀಕರ ಹಾಗೂ ಇದರ ಸಾಕ್ಷಿಗಳ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ:19–7–2008 ರಂದು ಇನ್ನೊಬ್ಬ ಆರೋಪಿ ಬೆಂಜಿಲ್ ಎಂಬಾತನನ್ನು ದಸ್ತಗಿರಿ ಮಾಡಿರುತ್ತೇನೆ. ನಂತರ ಪ್ರಕರಣದ ಅಂತಿಮ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯದ ಸಿ.ಸಿ.ನಂ:53/2009 ಆಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತಾನು ಠಾಣೆಯಿಂದ ಇಬ್ಬರು ಸಿಬ್ಬಂದಿ ಹಾಗೂ ಇಬ್ಬರು ಪಂಚರನ್ನು ಒಟ್ಟಿಗೆ ಕರೆದುಕೊಂಡು ಹೋಗಿರುತ್ತೇನೆ. ತನಗೆ ಖಚಿತ ವರ್ತಮಾನ ಸಿಕ್ಕಿರುತ್ತದೆ. ತಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ. ಇದರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣಕ್ಕೆ ಸಂಬಂಧಿಸಿ ತನಿಖಾಧಿಕಾರಿಯಾದ ಶ್ರೀ.ಸಿ.ಹೆಚ್.ಸೋಮಶೇಕರ್, ಅಬಕಾರಿ ನಿರೀಕ್ಷಕರು(ಪ್ರಭಾರ), ಬಂಟ್ವಾಳ ವಲಯ, ಬಂಟ್ವಾಳ ಇವರು ದಿ:15–9–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು 2008 ನೇ ಜೂನ್ ತಿಂಗಳಿನಲ್ಲಿ ಬಂಟ್ವಾಳ ವಲಯ ಕಚೇರಿಯಲ್ಲಿ ಪ್ರಭಾರನಾಗಿ ಕರ್ತವ್ಯನಿರ್ವಹಿಸುತ್ತಿದ್ದು, ತಾನು ತಕ್ಷೀರಿಗೆ ಸಂಬಂಧಿಸಿದ ಸೊತ್ತುಗಳನ್ನು ಕೋಣಾಜೆ ಪೊಲೀಸ್ ಠಾಣೆ ಸಿಬ್ಬಂದಿಯವರ ಸುಪರ್ಧಿಯಲ್ಲಿ ದಿ:2–6–2008 ರಂದು ಪಡೆದಿರುತ್ತೇನೆ. ಸದರಿ ಮೊಕದ್ದಮೆಯಲ್ಲಿ ಜಪ್ತುಪಡಿಸಿದ ಕಳ್ಳಭಟ್ಟಿ ಸಾರಾಯಿ ಮತ್ತು ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ದಿ:16–8–2008 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ಪ್ರಕರಣದಲ್ಲಿ ಹಸ್ತಾಂತರ ಪಡೆದುಕೊಂಡ ಸೊತ್ತುಗಳಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ ಮತ್ತು ಈ ಪ್ರಾಧಿಕಾರದ ಮುಂದೆ ನಿಂತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಾ.ಸಾ: 3

ಪ್ರಾಸಿಕ್ಯೂಶನ್ ಪರ ಪ್ರಕರಣಕ್ಕೆ ಸಂಬಂಧಿಸಿ ಮಹಜರು ಸಾಕ್ಷಿದಾರರಾದ ಶ್ರೀ.ಸತೀಶ್.ಕೆ, ಪಿ.ಸಿ.ನಂ:1072, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಿ:16–9–2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ಉಪ ನಿರೀಕ್ಷಕರು ಮತ್ತು ಇತರೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಕೂಡಿಕೊಂಡು ರಾತ್ರಿ 10–30 ಗಂಟೆಗೆ ಮಂಗಳಾಂತಿ ಕಡೆಯಿಂದ ನೆತ್ತಿಲಪದವು ಕಡೆಗೆ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಪೊಲೀಸರನ್ನು ಕಂಡ ಆಟೋರಿಕ್ಷಾ ಚಾಲಕ ಹಾಗೂ ಹಿಂಬದಿ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿಗಳು ರಿಕ್ಷಾದಿಂದ ಇಳಿದು ಪಕ್ಕದ ಗುಡ್ಡದ ಜಾಗಕ್ಕೆ ಓಡಿ ಪರಾರಿಯಾದರು. ಸದರಿ ವ್ಯಕ್ತಿಗಳನ್ನು ಬೆನ್ನಟ್ಟಿದರೂ ಅವರು ತಪ್ಪಿಸಿಕೊಂಡಿರುತ್ತಾರೆ. ಆ ಬಳಿಕ ಸದರಿ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ, ರಿಕ್ಷಾದ ಹಿಂಬದಿ ಸೀಟಿನಲ್ಲಿ ಸುಮಾರು 20 ಲೀಟರ್‌ನಂತೆ 7 ರಬ್ಬರ್ ಟ್ಯೂಬ್‌ಗಳಲ್ಲಿ ಊರ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿದ ರಬ್ಬರ್ ಟ್ಯೂಬ್‌ಗಳ ಬಾಯಿಯನ್ನು ಕಟ್ಟಿರುವುದು ಕಂಡು ಬಂತು. ಪಂಚರ ಸಮಕ್ಷಮದಲ್ಲಿ ಕಳ್ಳಭಟ್ಟಿ ಸಾರಾಯಿ ತುಂಬಿದ 7 ರಬ್ಬರು ಟ್ಯೂಬ್‌ಗಳನ್ನು ಆಟೋರಿಕ್ಷಾದಿಂದ ಕೆಳಗಿಳಿಸಿ, ಎಲ್ಲಾ ರಬ್ಬರು ಟ್ಯೂಬ್‌ಗಳಿಗೆ ಕೆಂಪು ಬಣ್ಣದ ಪೆನ್ನಿನಿಂದ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಡಲಾಯಿತು. ಎ ರಿಂದ ಜಿ ತನಕ ಕ್ರಮಾಂಕ ಕೊಟ್ಟ ಊರ ಕಳ್ಳಭಟ್ಟಿ ಸಾರಾಯಿಂದ ತಲಾ ಸುಮಾರು 180 ಎಂ.ಎಲ್.ನಷ್ಟು ಊರ ಕಳ್ಳಭಟ್ಟಿ ಸಾರಾಯಿಯನ್ನು ಸ್ಯಾಂಪಲ್ ಬಗ್ಗೆ ತೆಗೆದು ಪ್ರತ್ಯೇಕ ಪ್ರತ್ಯೇಕವಾಗಿ ಕ್ವಾರ್ಟರ್ ಬಾಟಲ್‌ಗಳಿಗೆ ತುಂಬಿಸಿ, ಸದರಿ ಬಾಟಲ್‌ಗಳ ಮುಚ್ಚಳವನ್ನು ಬಂದ್ ಮಾಡಿ ಬಿಳಿ ಬಟ್ಟೆಯಲ್ಲಿ ಕಟ್ಟಿ ಎಸ್.ಹೆಚ್.ಒ. ಅರಗು ಸೀಲ್ ಹಾಕಿ ಪಂಚರ

ಹಾಗೂ ಪೊಲೀಸ್ ಉಪ ನಿರೀಕ್ಷಕರ ಮತ್ತು ತನ್ನ ಸಹಿಯಿರುವ ಚೀಟಿಯನ್ನು ಅಂಟಿಸಿ, ಅವುಗಳಿಗೆ ಕ್ರಮವಾಗಿ ಎ,ಬಿ,ಸಿ,ಡಿ,ಇ,ಎಫ್,ಜಿ ಎಂಬ ನಿಶಾನೆಯನ್ನು ಕೊಟ್ಟು ಕಳ್ಳಭಟ್ಟಿ ಸಾರಾಯಿಯನ್ನು ಮುಂದಿನ ಕ್ರಮದ ಬಗ್ಗೆ ಸ್ವಾಧೀನಪಡಿಸಿಕೊಳ್ಳಲಾಯಿತು. ಸದರಿ ಆಟೋರಿಕ್ಷಾವನ್ನು ಅಜಮಾಯಿಸಿ ನೋಡಲಾಗಿ, ಇದು ಬಜಾಜ್ ಕಂಪೆನಿಯ ಆಟೋರಿಕ್ಷಾವಾಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎ–19–ಎ–5875 ಆಗಿದ್ದು, ರಿಕ್ಷಾದ ಒಳಗಡೆ ಯಾವುದೇ ದಾಖಲಾತಿಗಳು ಮತ್ತು ಅಕ್ರಮ ಕಳ್ಳಭಟ್ಟಿ ಸಾರಾಯಿಯ ಬಗ್ಗೆ ಯಾವುದೇ ದಾಖಲೆಗಳು ಕಂಡು ಬಂದಿರುವುದಿಲ್ಲ. ಸದರಿ ಆಟೋರಿಕ್ಷಾವನ್ನು ಮುಂದಿನ ಕ್ರಮಕ್ಕಾಗಿ ಸ್ವಾಧೀನಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಪೊಲೀಸ್ ಉಪ ನಿರೀಕ್ಷಕರು ತಯಾರಿಸಿರುತ್ತಾರೆ. ಸದರಿ ಮಹಜರಿಗೆ ತಾನು ಸಹಿಯನ್ನು ಮಾಡಿರುತ್ತೇನೆ. ತನ್ನ ಸಹಿಯನ್ನು ನಿಶಾನೆ ಪಿ–1ಬಿ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತನ್ನನ್ನು ಹಾಗೂ ಪಂಚರನ್ನು ಘಟನಾ ಸ್ಥಳಕ್ಕೆ ತನ್ನ ಪೊಲೀಸ್ ಉಪ ನಿರೀಕ್ಷಕರು ಕರೆದುಕೊಂಡು ಹೋಗಿರುತ್ತಾರೆ. ತಾನು ಮೇಲಾಧಿಕಾರಿಗಳ ಒತ್ತಡಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಮತ್ತು ಮಹಜರನ್ನು ಠಾಣೆಯಲ್ಲಿಯೇ ಬರೆದು ಅದಕ್ಕೆ ತಾನು ಸಹಿ ಮಾಡಿರುತ್ತೇನೆ ಮತ್ತು ಘಟನೆ ನಡೆದೇ ಇಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರ ಪರ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಲು ಈ ಪ್ರಾಧಿಕಾರದಿಂದ ಮೂರು ಬಾರಿ ಅವಕಾಶವನ್ನು ನೀಡಲಾಗಿದ್ದು, ಆರ್.ಸಿ. ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ ಪ್ರಕರಣವು ದಾಖಲಾಗಿ ಈಗಾಗಲೇ ಒಂಭತ್ತು ತಿಂಗಳು ಕಳೆದಿದ್ದು, ಎಲ್ಲಾ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:04–05–2008 ರಂದು ಜಪ್ತುಪಡಿಸಿಕೊಂಡಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ರಲ್ಲಿ ಆರೋಪಿಗಳು ಅಕ್ರಮವಾಗಿ 140 ಲೀಟರ್ ಊರ ಕಳ್ಳಭಟ್ಟಿ ಸಾರಾಯಿಯನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದ ಮುಂದೆ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಲು ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದರೂ, ಅವರು ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸದಿರುವ ಕಾರಣದಿಂದ, ವಾಹನ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಕೇರಳ ರಾಜ್ಯಕ್ಕೆ ಸಾಗಿಸಲು ಬಳಸಿರುವುದು ಸಾಕ್ಷಿ ಹೇಳಿಕೆಗಳಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 140 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಕಳ್ಳಭಟ್ಟಿ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ಆಟೋರಿಕ್ಷಾ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38(ಎ) ರ ಅಪರಾಧಕ್ಕೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ನ್ನು ವಶಪಡಿಸಿಕೊಂಡು ಸುಮಾರು ಒಂಭತ್ತು ತಿಂಗಳು ಕಳೆದಿದ್ದು, ವಾಹನದ ಮಾಲೀಕರು ಹಾಗೂ ಅವರ ಪರ ವಕೀಲರಿಗೆ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಲು ಈ ಪ್ರಾಧಿಕಾರದಿಂದ ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದು, ಆದರೆ ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ವಾಹನದ ಮಾಲೀಕರ ಪರ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಇದರಿಂದ ಸದರಿ ಬಜಾಜ್ ಆಟೋರಿಕ್ಷಾದಲ್ಲಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿರುವುದು ಸಾಕ್ಷಿದಾರರ ಹೇಳಿಕೆ ಹಾಗೂ ದಾಖಲಾತಿಗಳಿಂದ ದೃಢಪಟ್ಟಿದ್ದು, ಆರೋಪಿಗಳು ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾದಲ್ಲಿ 140 ಲೀಟರ್ ಪ್ರಮಾಣದ ಊರ ಕಳ್ಳಭಟ್ಟಿ ಸಾರಾಯಿಯನ್ನು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ರಮವಾಗಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ.

ಆದುದರಿಂದ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ವಾಹನದ ಮಾಲೀಕರು ಈ ಪ್ರಾಧಿಕಾರದಲ್ಲಿ ಅಂತಹ ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸದಿರುವ ಕಾರಣ, ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ವಾಹನದ ಮಾಲೀಕರು ತಕ್ಷೀರು ನಡೆಸಲು ಉತ್ಸುಕರಿಲ್ಲದ ಕಾರಣ ಮತ್ತು ವಶಪಡಿಸಿಕೊಂಡ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ನ್ನು ಈಗಾಗಲೆ ಒಂಭತ್ತು ತಿಂಗಳು ಕಳೆದಿದ್ದು, ಅಕ್ರಮವಾಗಿ 140 ಲೀಟರ್ ಕಳ್ಳಭಟ್ಟಿ ಸಾರಾಯಿ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ,ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/425/ಡಿಟಿಸಿಆರ್/2008–09, ದಿನಾಂಕ:20ನೇ ಜನವರಿ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ ಇವರ ತಕ್ಷೀರು ಸಂ: 53/2008 ದಿ:4–5–2008 ರಲ್ಲಿ ಜಪ್ತುಪಡಿಸಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ–19–ಎ–5875 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:20–01–2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ
ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ಸೈಪುಲ್ಲ, ಪೊಲೀಸ್ ಉಪ ನಿರೀಕ್ಷಕರು, ಕೋಣಾಜೆ ಪೊಲೀಸ್ ಠಾಣೆ,
ಕೋಣಾಜೆ ಹಾಲಿ ಉಳ್ಳಾಲ ಪೊಲೀಸ್ ಠಾಣೆ.

ಪ್ರಾ.ಸಾ–2: ಶ್ರೀ.ಸಿ.ಹೆಚ್.ಸೋಮಶೇಕರ್, ಅಬಕಾರಿ ನಿರೀಕ್ಷಕರು(ಪ್ರಭಾರ), ಬಂಟ್ವಾಳ ವಲಯ.

ಪ್ರಾ.ಸಾ–3: ಶ್ರೀ.ಸತೀಶ್.ಕೆ, ಪಿ.ಸಿ.ನಂ:1072, ಕೋಣಾಜೆ ಪೊಲೀಸ್ ಠಾಣೆ, ಕೋಣಾಜೆ.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1: ಮಹಜರಿನ ಪ್ರತಿ.

ನಿಶಾನೆ ಪಿ–1A: ಪ್ರಾ.ಸಾ–1ರವರ ಸಹಿ.

ನಿಶಾನೆ ಪಿ–1B: ಪ್ರಾ.ಸಾ–3ರವರ ಸಹಿ

ನಿಶಾನೆ ಪಿ–2 : ಸೊತ್ತುಗಳ ಪಟ್ಟಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.208

COMMERCE AND INDUSTRIES DEPARTMENT

NOTIFICATION

No.CI 248 SGF 2005, Bangalore, Dated:20th January, 2010

Whereas it is necessary to make an order with a view to enabling M/s Indian Cane Power Ltd., Uttur Village Mudhol Taluk, Bagalkot District, to purchase the quantity of Sugar Cane required having regard to the crushing capacity of the factory, the availability of Sugarcane in the area where sugarcane is grown and the need for production of Sugar.

Now, therefore, in exercise of the powers conferred by clause 6, 7, 8 and 9 of the Sugarcane (Control) Order 1966 read with CSR 1127, Dated:16th July 1966 of the Government of India in the Ministry of Food, Agriculture, Community Development and Co-Operation (Department of Food) the Government of Karnataka hereby makes the following orders namely:

1. TITLE, COMMENCEMENT AND DURATION OF OPERATION:

i) This Order may be called the Karnataka Sugarcane (Regulation of Distribution) M/s Indian Cane Power Ltd., at Uttur Village, Mudhol Taluk, Bagalkot District, order 2010.

ii) It shall come into force at once and shall remain in force till withdrawn or repealed subject to amendments as the State Government may make from time to time.

2) Definitions: In this Order:-

a) Factory means the premises of the factory at Uttur Village, owned by M/s Indian Cane Power Ltd., Uttur Village Mudhol Taluk, Bagalkot District including the premises of such factory.

b) ‘Form’ means a form appended to this order.

c) Words and expressions used in this order but not defined shall have the meaning assigned to them in clause 2 of the Sugarcane (Control) order 1966.

3) Determination of the quantity of Sugarcane required by the factory and reservation of the area for supply of sugarcane.

i) The crushing capacity of M/s Indian Cane Power Ltd., being 2500 TCD. The quantity of Sugarcane required by the factory during a year is about 4.50 Lakh M.Ts to 5.00 Lakh M.Ts.

ii) The factory shall secure the sugarcane determined under sub clause (2) from the areas specified in schedule-I to this order which shall be the area reserved temporarily in the interest of farmers for supplying sugarcane to the factory concerned, till the new factories, likely to comp up in that area are established.

4) FIXIATION OF QUANTITY OF SUGARCANE TO BE SUPPLIED BY THE GROWER:

Every grower of sugarcane in the area reserved temporarily as specified in Schedule-I shall supply to the factory ninety five percent of the sugarcane grown by each such grower Co-operative Society operating in the reserved area, through such society.

5) AGREEMENT TO SUPPLY OR PURCHASE THE DETERMINED QUANTITY OF SUGARCANE:

Every grower of sugarcane or a sugarcane grower Co-operative Society, supplying sugarcane to the factory and the factory shall enter into agreement to supply or purchase as the case may be, the quantity of sugarcane determined under clause-4.

6) PROHIBITION OF EXPORT OF SUGARCANE FROM AREA RESERVED TEMPORARILY.

No. Sugarcane shall be exported from the area reserved temporarily except under and in accordance with the conditions of a permit issued by the Deputy Commissioner in Form-I of Schedule-II.

7) ISSUE OF PERMITS:

i) Application for the grant of a permit under clause-6 shall be made in form 2 of Schedule-II and shall be accompanied by a fee of Rs.5/- and an amount of Rs.100/- as security Deposit.

ii) If any condition of the permit is contravened, the Deputy Commissioner may after giving an opportunity to the person Concerned to show cause why the amount deposited by way of security or any

part there of may not be forfeited, pass order forfeiting the whole or part of the amount deposited as security.

By Order and in the Name of the Governor of Karnataka,

P. ANANDA KUMAR

Desk Officer (Sugar),

Commerce and Industries Department.

SCHEDULE-I

Following 13 villages of Mudhol Taluk of Bagalkot District are allocated temporarily to M/s Indian Cane Power Ltd., Uttur Village, Mudhol Taluk, Bagalkot District, for supply of Sugarcane. These 13 villages were already allotted to the following 4 sugar factories and the same were withdrawn from them.

Sl. No.	Name of the withdrawing factory	Name of the Villages	No.of Villages
1.	Sri Prabhulingeshwara Sugars, Siddapura, Jamkhandi Taluk, Bagalkote District	Uttur Jaliberi	2 Villages
2.	Raithara S.S.K., Rannanagar, Bagalkote District.	Roogi Ningapura Gulagala jambagi Jeerigala Chinchakhandi B.K. Chinchakhandi K.D. Chuncharakoppa	7 Villages
3.	Nirani Sugars Ltd., Mudhol Taluk, Bagalkote District	Mudhol	1 Village
4.	Godavari Biorefinaries Sameerwadi, Bagalkote District.	Metagudda Chennala Ranjanagi	3 Villages
	Total		**13 Villages**

P. ANANDA KUMAR

CI 248 SGF 2005

Desk Officer (Sugar),

Commerce and Industries Department.

SCHEDULE-II-FORM-I

(SEE CLAUSE 6)

The Karnataka Sugarcane (regulation of Distribution), M/s Indian Cane Power Ltd., Uttur Village, Mudhol Taluk, Bagalkote District, Order 2010.

Permit No. **Date:**

1. Full name of the permit holder :
2. Father's Name :
3. Residential Address in full :
4. Quantity of Sugarcane for which permit is granted for export :
5. Area and village from which Sugarcane is permitted to be exported. :
6. A. Place to which it is to be exported :

   B. The purpose for which export is permitted.

   i. For Sale

ii. For crushing sugar cane juice for Manufacture of Gur/Sakkare Gul/ Jaggery Rabi or Khandasari.

7. Their permit is valid up to :

8. The permit is granted subject to the following terms and conditions. :

a) Permit is not transferable. :

b) The permit shall be produced on demand by an officer authorized by the Deputy Commissioner.

c) On expiry of the validity of the permission within 48 hours of the expiry of the validity date the permit shall be surrendered to the permit issuing authority.

Place: SIGNATURE OF THE PERMIT

Date: ISSUING AUTHORITY.

SCHEDULE-II-FORM-II

(SEE CLAUSE 7)

The Karnataka Sugarcane (Regulation of Distribution), M/s Indian Cane Power Ltd., Uttur Village, Mudhol Taluk, Bagalkote District, Order 2010. Application for the grant of permit for exporting sugarcane from a reserved area.

1. Full Name of the Applicant :
2. Father's Name :
3. Residential Address in full :
4. Quantity of Sugarcane for which permit is requested for export :
5. Area and the Village from which Sugarcane is intended to be exported :
6. The purpose for which the export is intended :

i) For Sale

ii) For Crushing Sugarcane Juice or manufacture of Gur/Sakkare Gul/ Jaggery/ Rabi/ or Khandasari for sale or self consumption

I declare that, I am fully aware of the provisions of the Karnataka Sugarcane (Regulation of Distribution), M/s Indian Cane Power Ltd., Uttur Village, Mudhol Taluk, Bagalkot District, Order 2010 and the particulars furnished in the application are true to the best of my knowledge and belief and the permit to be issued will be properly used for the purpose for which it is issued. I have actually read-got read and understood the conditions of the permit given in Form No.I of the Schedule appended to the Karnataka Sugarcane (Regulation of Distribution), M/s Indian Cane Power Ltd., Uttur Village, Mudhol Taluk, Bagalkote District Order 2010 and I agree to abide by them.

Place: SIGNATURE OF THE APPLICANT.

Date:

P. ANANDA KUMAR

PR-173

Desk Officer (Sugar),

Commerce and Industries Department.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/121/ಡಿಟಿಸಿಆರ್/2008–09, ದಿನಾಂಕ:27ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	**ಆರೋಪಿಗಳು:**
ಪೊಲೀಸ್ ಉಪ ನಿರೀಕ್ಷಕರು (ಕಾ.ಸು)	ಸಂತೋಷ್, ಎನ್.ಆರ್. ಪುರ ತಾಲ್ಲೂಕು
ಉಳ್ಳಾಲ ಪೊಲೀಸ್ ಠಾಣೆ,ಉಳ್ಳಾಲ	**ವಾಹನ ಮಾಲೀಕರು**
	– ಮಾಹಿತಿ ಲಭ್ಯವಿರುವುದಿಲ್ಲ –

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28–7–2008ರಂದು ಸಂಜೆ 4–30 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಸಿಬ್ಬಂದಿಯವರೊಂದಿಗೆ ಮಂಗಳೂರು ತಾಲ್ಲೂಕು ಸೋಮೇಶ್ವರ ಗ್ರಾಮದ ಸಂಕೊಳ್ಳಿಗೆ ಎಂಬಲ್ಲಿ ಮೇಲಾಧಿಕಾರಿಗಳ ಆದೇಶದಂತೆ ಸ್ಫೋಟಕ ವಸ್ತುಗಳ ಸಾಗಾಣಿಕೆ ಕುರಿತು ವಾಹನ ತಪಾಸಣೆಯಲ್ಲಿ ನಿರತರಾಗಿರುವಾಗ ಮಂಗಳೂರು ಕಡೆಯಿಂದ ಕೇರಳ ಕಡೆಗೆ ಅತೀ ವೇಗದಲ್ಲಿ ಬರುತ್ತಿದ್ದ ಒಂದು ಕಪ್ಪು ಬಣ್ಣದ GJ-3-BA-303 ನೊಂದಾಣಿ ಸಂಖ್ಯೆ ಇರುವ ಸ್ಕಾರ್ಫಿಯೋ ಕಾರನ್ನು ಕಂಡು ಸಂಶಯಗೊಂಡು ಅದರ ಚಾಲಕರಿಗೆ ನಿಲ್ಲಿಸಲು ಸೂಚನೆ ನೀಡಿದಾಗ, ಆತನು ವಾಹನವನ್ನು ನಿಲ್ಲಿಸದೇ ತಲಪಾಡಿ ಕಡೆಗೆ ಮುಂದೋಡಿಸಿದಾಗ ಫಿರ್ಯಾದುದಾರರು ಹಾಗೂ ಸಿಬ್ಬಂಧಿಗಳು ಇಲಾಖಾ ವಾಹನದಲ್ಲಿ ಅದನ್ನು ಬೆನ್ನಟ್ಟಲಾಗಿ, ಸದ್ರಿ ಕಾರಿನ ಚಾಲಕನು ತಲಪಾಡಿ ಆರ್.ಟಿ.ಓ ಚೆಕ್ ಪೋಸ್ಟ್ ತನಕ ಓಡಿಸಿ ಸದ್ರಿ ಕಾರನ್ನು ಪೂಮಣ್ಣು ಕಡೆಗೆ ತಿರುಗಿಸಿ ಅಲ್ಲಿಂದ ಕೆ.ಸಿ ನಗರ ಮೂಲಕ ನಾಟಿಕಲ್ಲು ರಸ್ತೆ ಕಡೆಗೆ ಹೋಗಿ ಅಲ್ಲಿಂದ ತಿರುಗಿಸಿ ಬೆಳರಿಂಗೆ ರಸ್ತೆಯಲ್ಲಿ ಸುಮಾರು 5 ಕಿ.ಮಿ ದೂರ ಹೋದವನು, ತಾರು ರಸ್ತೆಯನ್ನು ಬಿಟ್ಟು ಕಜೆಎಂಬ ಸ್ಥಳದ ಮೂಲಕ ಕಲ್ಕಟ್ಟೆ ಎಂಬ ಒಳರಸ್ತೆಯಲ್ಲಿ ಪ್ರವೇಶಿಸಿದಾಗ ಫಿರ್ಯಾದುದಾರರು ಬೆನ್ನಟ್ಟುತ್ತಿರುವುದನ್ನು ಕಂಡು ಸದ್ರಿ ಕಾರಿನ ಚಾಲಕನು ಅತೀ ವೇಗದಿಂದ ವಾಹನವನ್ನು ಚಲಾಯಿಸಿದ ಕಾರಣದಿಂದಾಗಿ ಚಾಲಕನ ಹತೋಟಿ ತಪ್ಪಿ ಕಿನ್ಯಾ ಗ್ರಾಮದ ಕಜೆ ಎಂಬ ಪ್ರದೇಶದಲ್ಲಿ ವಾಹನ ರಸ್ತೆ ಎಡಭಾಗದ ಚರಂಡಿಗೆ ಬಿದ್ದು ಕಾರಿನ ಚಾಲಕ ಮತ್ತು ಅತನೊಡನೆ ಇದ್ದ ಇನ್ನೊರ್ವ ವ್ಯಕ್ತಿ ವಾಹನದಿಂದ ಜಿಗಿದು ಕಾಡು ಪ್ರದೇಶದ ಕಡೆ ಓಡಿ ಪರಾರಿಯಾಗಿರುತ್ತಾರೆ. ಓಡಿ ಹೋದ ವ್ಯಕ್ತಿಯ ಮುಖಚಹರೆಯಿಂದ ಆತನು ಸಂತೋಷ್ ಎನ್.ಅರ್.ಪುರ ಎಂದು ತಿಳಿದು ಬಂದು ನಂತರ ಚರಂಡಿಗೆ ಬಿದ್ದಿದ್ದ ವಾಹನ GJ-3-BA-303 ಕಪ್ಪು ಬಣ್ಣದ ಸ್ಕಾರ್ಫಿಯೊ ಕಾರನ್ನು ಪಂಚ ಸಾಕ್ಷಿದಾರರ ಸಮಕ್ಷಮ ಪರಿಶೀಲಿಸಿದಾಗ ವಾಹನದ ಒಳಗಡೆ 37 ರಟ್ಟಿನ ಬಾಕ್ಸ್‌ಗಳಿದ್ದು,ಪ್ರತಿ ರಟ್ಟಿನ ಬಾಕ್ಸ್‌ಗಳಲ್ಲಿ 180 ಮಿಲಿಯ ತಲಾ 48 ಬಾಟಲಿ ಗಳಂತೆ ಒಟ್ಟು 1776 ಬಾಟಲಿಗಳಲ್ಲಿ ಸೂಪರ್ ಜಾಕ್ ಕ್ಲಾಸಿಕ್ ವಿಸ್ಕಿ ಎಂಬ ಮದ್ಯ ಇರುವುದು ಪತ್ತೆಯಾಗಿ ನಂತರ ವಾಹನವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಮದ್ಯ ಸಾಗಾಟದ ಬಗ್ಗೆ ಪರವಾನಿಗೆ ಯಾ ದಾಖಲೆ ಪತ್ರಗಳು ವಾಹನದಲ್ಲಿ ಲಭ್ಯವಾಗದೇ ಇರುವುದು ಹಾಗೂ ವಾಹನದ ಚಾಲಕನು ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಿರುವುದನ್ನು ಗಮನಿಸಿದಾಗ ಸದ್ರಿ ಸ್ಕಾರ್ಫಿಯೊ ವಾಹನದಲ್ಲಿ ಅಕ್ರಮವಾಗಿ ಮದ್ಯವನ್ನು ಕೇರಳ ರಾಜ್ಯಕ್ಕೆ ಸಾಗಾಟ ಮಾಡಲು ಪ್ರಯತ್ನಿಸಿರುವುದು ಖಾತ್ರಿಯಾಗಿರುವುದರಿಂದ, ಪತ್ತೆಯಾದ ಮದ್ಯ ಹಾಗೂ ವಾಹನವನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಂಡು 37 ರಟ್ಟಿನ ಪೆಟ್ಟಿಗೆಗಳಿಂದ ತಲಾ ಒಂದೊಂದರಂತೆ ಒಟ್ಟು 37 ಬಾಟಲಿಗಳನ್ನು ರಾಸಾಯನಿಕ ಮಾದರಿಗಾಗಿ ತೆಗೆದು, ವಾಹನವನ್ನು ಪರಿಶೀಲಿಸಲಾಗಿ ಅದರ ಇಂಜಿನಿನಲ್ಲಿ B.F34M83563 ಎಂದು ಬೊನೆಟಿನ ಮೇಲೆ ಅಲ್ಯುಮೀನಿಯಂ ಪ್ಲೇಟ್ ಅಳವಡಿಸಿದ್ದು, ಅದರಲ್ಲಿ ಮಾಡೆಲ್ SCORPIO- TURBO-2,GLX 2 W-D 85,SL NO.MA-ITA-2BFC42,A-60925 ಎಂದು ನಮೂದಿಸಿರುವುದು ಕಂಡು ಬಂತು. ಮಹಜರು ಕ್ರಮ ಜರುಗಿಸಿ ಮಾದರಿ ಸೀಸೆಗಳಿಗೆ ಮತ್ತು ಸೊತ್ತುಗಳಿಗೆ ಗುರುತು ಚೀಟಿಯನ್ನು ಅಂಟಿಸಿ, ಮಹಜರು ಜರುಗಿಸಿರುತ್ತಾರೆ. ಇದು ಅಬಕಾರಿ ಕಾಯಿದೆ 13ಎ,14 ರ ಪ್ರಕಾರ ಅಪರಾಧವಾಗಿದ್ದು, 32, 34,35 ಮತ್ತು 43ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಅರೋಪಿಯಾದ ಸಂತೋಷ್ ಎನ್.ಆರ್.ಪುರ ಎಂಬವನ ವಿರುದ್ಧ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ, ಉಳ್ಳಾಲ ಠಾಣಾ ಕ್ರೈಂ ಸಂ:170/08 ದಿ:28–7–2008 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು, ಪ್ರಾದಿಕಾರದ ದಿ:30–10–2008ರ ಅದೇಶದಂತೆ ಪ್ರಕರಣದ ಸೊತ್ತು ಮತ್ತು ಕಡತವನ್ನು ಕಾರ್ಯ ವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–II ಇವರಿಗೆ ದಿನಾಂಕ: 18–8–2009ರಂದು ಹಸ್ತಾಂತರಿಸಿರುತ್ತಾರೆ .

ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಇವರು ಪ್ರಕರಣದ ಜಪ್ತು ಸೊತ್ತುಗಳ ಮುಟ್ಟುಗೋಲಿಗೆ ಸಂಬಂಧಿಸಿ ತನಿಖೆಯನ್ನು ಕೈಗೊಂಡು, ತನಿಖಾ ವರದಿ ಸಂಖ್ಯೆ: ಎಂಎಸ್‌ಆರ್–2/ ಪ್ರೊ.ಕ್ರೈಂ/16/2009–10 ದಿ: 24–8–2009ರ ವರದಿಯಲ್ಲಿ ವಶಪಡಿಸಿಕೊಂಡ ಮದ್ಯದಿಂದ ತೆಗೆದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಒಳಪಡಿಸಿ, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ:ಇ–529–37 ದಿ:6–12–2008 ರ ವರದಿಯಲ್ಲಿ ಮದ್ಯದಲ್ಲಿ ಮದ್ಯಸಾರ ಪ್ರಮಾಣ ಶೇ.36.0

ಇರುವುದಾಗಿ ಹಾಗೂ ಮಾದರಿಗಳು ಭಾರತೀಯ ಮಾನಕ ಬ್ಯುರೋದ ಮಾನಕಕ್ಕೆ ಅನುಗುಣವಾಗಿರುವುದಿಲ್ಲ ಎಂಬ ಅಭಿಪ್ರಾಯದೊಂದಿಗೆ ದೃಡೀಕರಿಸಿರುವುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ ಜಪ್ತುಪಡಿಸಿಕೊಂಡ 37 ರಟ್ಟಿನ ಪೆಟ್ಟಿಗೆಗಳಲ್ಲಿದ್ದ ಒಟ್ಟು 1776 ಬಾಟಲಿಗಳ ಪೈಕಿ ರಾಸಾಯನಿಕ ಪರೀಕ್ಷೆಗಾಗಿ ತೆಗೆಯಲಾದ 37 ಬಾಟಲಿಗಳನ್ನು ಹೊರತುಪಡಿಸಿ ಉಳಿದಂತೆ 313.020 ಲೀಟರು ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಪ್ರಾಧಿಕಾರದಿಂದ ದಿ:27–8–2009ರಂದು ಆದೇಶ ನೀಡಲಾಗಿರುತ್ತದೆ. ಜಪ್ತುಪಡಿಸಿಕೊಂಡ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ನೀಡುವ ಬಗ್ಗೆ ತನಿಖಾಧಿಕಾರಿಗಳು ಪ್ರಾ.ಸಾ.ಅ ,ಗುಜರಾತ್ ಇವರಿಗೆ ದಿ:8–9–2009ರಂದು ಬರೆದ ಪತ್ರದ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿ ಈವರೆಗೆ ಸ್ವೀಕೃತವಾಗಿರುವುದಿಲ್ಲ ಎಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿ ವಾಹನವನ್ನು ಜಪ್ತುಪಡಿಸಿಕೊಂಡು ಈಗಾಗಲೇ ಒಂದು ವರ್ಷ 6 ತಿಂಗಳುಗಳು ಮೀರಿದ್ದು,ವಾಹನದ ಬಿಡುಗಡೆ ಬಗ್ಗೆ ಯಾರೊಬ್ಬರೂ ಮುಂದೆ ಬಾರದಿರುವುದರಿಂದ ಸದ್ರಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ವರದಿ ಸಲ್ಲಿಸಿರುತ್ತಾರೆ.

ವಾಹನದ ನೊಂದಾಯಿತ ಮಾಲೀಕರ ವಿವರಗಳಿರುವ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯುವ ಬಗ್ಗೆ ಜಪ್ತು ಸಂದರ್ಭದಲ್ಲಿ ವಾಹನದ ನೊಂದಾಣಿ ಸಂಖ್ಯೆ GJ-3-BA-303 ಎಂದು ಕಂಡು ಬಂದಿರುವ ಸೂಚನಾ ಫಲಕಕ್ಕೆ ಅನುಗುಣವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಗುಜರಾತ್ ರಾಜ್ಯ ಇವರಿಗೆ ತನಿಖಾಧಿಕಾರಿಗಳು ದಿ: 8–9–2009 ರಂದು ಪತ್ರ ಬರೆದು, ತದನಂತರದಲ್ಲಿ ನೆನಪೋಲೆಗಳನ್ನು ಬರೆಯಲಾಗಿದ್ದರೂ ಸದ್ರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿ ಸ್ವೀಕೃತವಾಗದೇ ಇರುವುದರಿಂದ ವಾಹನದ ಮಾಲೀಕರ ಲಭ್ಯವಿಲ್ಲದೇ ಇರುವುದರಿಂದ ಹಾಗೂ ಪ್ರಕರಣದಲ್ಲಿ ಆರೋಪಿತನಾಗಿರುವ ವ್ಯಕ್ತಿಯ ಪರಿಪೂರ್ಣ ವಿಳಾಸವು ಕೂಡಾ ಲಭ್ಯವಿಲ್ಲದೇ ಇರುವುದರಿಂದ ಪ್ರಕರಣವನ್ನು ಅಬಕಾರಿ ಕಾಯಿದೆ 43ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಪೂರ್ವದಲ್ಲಿ ಕಲಂ 43 ಬಿ ಅಡಿ ಕಾರಣ ಕೇಳಿ ನೋಟಿಸು ನೀಡಲು ಸಾಧ್ಯವಾಗಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ 28–7–2008 ರಂದು ಕಪ್ಪು ಬಣ್ಣದ ಸ್ಕಾರ್ಪಿಯೊ ಕಾರು ಸಂ:GJ-3-BA-303 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿತರು 319.680 ಲೀಟರು ಮದ್ಯವನ್ನು ಅಕ್ರಮವಾಗಿ ಸಾಗಾಟ ಮಾಡಿರುವುದನ್ನು ಪತ್ತೆಹಚ್ಚಿ, ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆ, ಉಳ್ಳಾಲ ಕ್ರೈಂ ಸಂ:170/2008 ದಿ:28–7–2008ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯ ಆಗಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದು ಹಾಗೂ ವಾಹನದ ಮಾಲೀಕರ ಬಗ್ಗೆ ಮಾಹಿತಿಗಳನ್ನು ಪಡೆಯುವ ಏಕೈಕ ಮಾರ್ಗವಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯುವ ಬಗ್ಗೆ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳನ್ನು ಈ ಪ್ರಾಧಿಕಾರದಿಂದ ದಿ:15–6–2009ರಂದು ನೊಂದಾಣಿ ಅಂಚೆಯ ಮೂಲಕ ಪತ್ರ ಬರೆಯಲಾಗಿದ್ದು ಹಾಗೂ ತನಿಖಾಧಿಕಾರಿಗಳು ಸಹ ಸದ್ರಿ ಸಾರಿಗೆ ಅಧಿಕಾರಿಗಳಿಗೆ ಹಲವು ಬಾರಿ ಪತ್ರ ಮುಖೇನಾ ಸಂಪರ್ಕಿಸಿದ್ದರೂ, ಸದ್ರಿಯವರಿಂದ ಯಾವುದೇ ವರದಿ ಬಾರದೇ ಇರುವುದರಿಂದ ವಾಹನದ ಮಾಲೀಕರ ವಿವರ ಲಭ್ಯವಿಲ್ಲದ ಕಾರಣ ಅಬಕಾರಿ ಕಾಯಿದೆ ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟಿಸು ನೀಡಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಪ್ರಕರಣ ಸಂದರ್ಭದಲ್ಲಿ ವಾಹನದ ಸುಪರ್ಧಿ ಹೊಂದಿರುವ ಮಾಲೀಕರು ವಾಹನದ ಬಿಡುಗಡೆ ಬಗ್ಗೆ ಯಾವುದೇ ಪ್ರಯತ್ನ ಪಡದೇ ಇರುವುದು ಹಾಗೂ ಪ್ರಕರಣ ಸಂದರ್ಭದಲ್ಲಿ ಅರೋಪಿತ ವ್ಯಕ್ತಿಗಳು ವಾಹನದೊಂದಿಗೆ ಫಿರ್ಯಾದುದಾರರಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಿರುವುದನ್ನು ಗಮನಿಸಿದಾಗ ವಾಹನದ ಮಾಲೀಕರು ಹಾಗೂ ಆರೋಪಿತ ವ್ಯಕ್ತಿಗಳು ಉದ್ದೇಶಪೂರ್ವಕವಾಗಿ ಅಕ್ರಮ ಎಸಗಿರುವುದು ನಿಸ್ಸಂದೇಹವಾಗಿರುವುದರಿಂದ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗದೇ ಇದ್ದುದರಿಂದ ಪ್ರತಿ ರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಿಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ: 28–7–2008ರಂದು ಸ್ಕಾರ್ಪಿಯೊ ಕಾರು ಸಂ:GJ-3-BA-303 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ 319.680 ಲೀಟರು ಮದ್ಯವನ್ನು ಸಾಗಾಣಿಕೆ ಮಾಡಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಶ್ರೀ ಸಿ.ಹೆಚ್.ಸೋಮಶೇಖರ್, ಅಬಕಾರಿ ನಿರೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ಪ್ರಕರಣ ತನಿಖೆ ಕೈಗೊಂಡ ಬಗ್ಗೆ ಅಭಿಯೋಗದ ಪರ ದಿನಾಂಕ:19–1–2010ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡುತ್ತಾ, ನಾನು ದಿ:1–10–2008 ರಿಂದ ದಿ:23–10–2009ರವರೆಗೆ ಮಂಗಳೂರು ದಕ್ಷಿಣ ವಲಯ–2 ರಲ್ಲಿ ಪ್ರಭಾರ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಪೊಲೀಸ್ ಉಪ ನಿರೀಕ್ಷಕರು, ಉಳ್ಳಾಲ ಪೊಲೀಸ್ ಠಾಣೆ ಇವರ ಪ್ರ.ಮಾ.ವ ಸಂ:170/2008,ದಿ:28–7–2008ರಲ್ಲಿ ವಶಪಡಿಸಿಕೊಂಡ ಈ ಕೆಳಕಂಡ ಸೊತ್ತುಗಳನ್ನು ಅಧಿಕೃತ ಅಧಿಕಾರಿಗಳ ಪ್ರಾಧಿಕಾರದ ದಿ:30–10–2008ರ ಆದೇಶದಂತೆ, ನಾನು ದಿನಾಂಕ:18–8–2009ರಂದು ಪಡೆದು ಕೊಂಡಿರುತ್ತೇನೆ.

1) 37 ರಟ್ಟಿನ ಪೆಟ್ಟಿಗೆಗಳಲ್ಲಿ 47 ಬಾಟಲಿಗಳಂತೆ ಸೂಪರ್ ಚಾಕ್ ವಿಸ್ಕಿಯ ಒಟ್ಟು 1739 ಬಾಟಲಿಗಳಲ್ಲಿ ಒಟ್ಟು–313.020 ಲೀಟರು ಮದ್ಯ.

2) ಸ್ಕಾರ್ಪಿಯೋ ವಾಹನ ಸಂ:GJ-3-BA-303

ಮೇಲಿನ ಸೊತ್ತುಗಳ ಪೈಕಿ ವಾಹನವನ್ನು ಹೊರತುಪಡಿಸಿ, ಇತರೆ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಆದೇಶ ಕೋರಿ ದಿ:24–8–2009ರಂದು ರಾಸಾಯನಿಕ ವರದಿಯೊಂದಿಗೆ ಅಬಕಾರಿ ಉಪ ಅಯುಕ್ತರಿಗೆ ಶಿಫಾರಸ್ಸು ಪತ್ರ ಬರೆದಿರುತ್ತೇನೆ. ಸದ್ರಿ ಪತ್ರವನ್ನು ಈಗ ನೋಡಿ ನಿಶಾನೆ ಪಿ–1 ಎಂದು, ಅದರ ಮೇಲಿನ ಸಹಿಯನ್ನು ನಿಶಾನೆ ಪಿ–1 ಎ ಎಂದು ಗುರುತಿಸಲಾಯಿತು. ಅದರಂತೆ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ರವರ ಅದೇಶ ಸಂ: ಎಸ್‌ಡಿಕೆ:121:ಡಿಟಿಸಿಆರ್:2008–09 ದಿ:27–8–2009ರಲ್ಲಿ ವಾಹನವನ್ನು ಹೊರತು ಪಡಿಸಿ, ಮದ್ಯವನ್ನು ಮಹಜರು ಕ್ರಮ ಜರುಗಿಸಿ ನಾಶಪಡಿಸಲು ಆದೇಶಿಸಿರುತ್ತಾರೆ. ಅದರಂತೆ ಸದ್ರಿ ಮದ್ಯವನ್ನು ನಾಶಪಡಿಸಿ ವರದಿ ಸಲ್ಲಿಸಿರುತ್ತೇನೆ.

ದಿನಾಂಕ:8–9–2009ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಅಹ್ಮದಬಾದ್ , ಗುಜರಾತ್ ಇಲ್ಲಿಗೆ ಜಪ್ತು ಪಡಿಸಿದ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಗಾಗಿ ಪತ್ರ ಮತ್ತು ನೆನಪೋಲೆಗಳನ್ನು ನೀಡಲಾಗಿದ್ದರೂ, ಯಾವುದೇ ಮಾಹಿತಿ ಸದ್ರಿ ಅಧಿಕಾರಿಗಳಿಂದ ಸ್ವೀಕೃತವಾಗಿರುವುದಿಲ್ಲ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಬರೆದ ಪತ್ರದ ಪ್ರತಿಯನ್ನು ಪ್ರಾಧಿಕಾರಕ್ಕೆ ಒಪ್ಪಿಸಿದ್ದು, ಅದನ್ನು ಈಗ ನೋಡಿ ನಿಶಾನೆ ಪಿ–2 ಎಂದು, ಅದರ ಮೇಲಿನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ನಂತರದಲ್ಲಿ ದಿನಾಂಕ: 23–10–2009ರಂದು ಸದ್ರಿ ಪ್ರಕರಣಕ್ಕೆ ಸಂಬಂಧಿಸಿದ ಕಡತ ಹಾಗೂ ವಾಹನವನ್ನು ಮಂಗಳೂರು ದಕ್ಷಿಣ ವಲಯ–2ಕ್ಕೆ ಖಾಯಂ ಅಬಕಾರಿ ನಿರೀಕ್ಷಕರಾಗಿ ನಿಯೋಜಿತರಾದ ಶ್ರೀ ಕೇಶವ ಮೂರ್ತಿ ಇವರಿಗೆ ಮುಂದಿನ ಕ್ರಮಕ್ಕಾಗಿ ಹಸ್ತಾಂತರಿಸಿರುತ್ತೇನೆ. ಪ್ರಕರಣ ದಾಖಲಿಸಿಕೊಂಡು ಈಗಾಗಲೇ ಒಂದು ವರ್ಷ 6 ತಿಂಗಳು ಕಳೆದಿರುವುದರಿಂದ ಹಾಗೂ ವಾಹನದ ಬಗ್ಗೆ ಯಾರೊಬ್ಬರೂ ಬೇಡಿಕೆ ಸಲ್ಲಿಸದೇ ಇರುವುದರಿಂದ ಸದ್ರಿ ವಾಹನವನ್ನು ಸರ್ಕಾರದ ಆದಾಯದ ಹಿತ ದೃಷ್ಟಿಯಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದು ಎಂದು ತಮ್ಮ ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು:

ವಾಹನದ ಮಾಲೀಕರಾಗಲೀ, ಅವರ ಪರ ಪ್ರತಿನಿಧಿ ಅಥವಾ ವಕೀಲರಾಗಲೀ ಹಾಜರಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಪ್ರಾ.ಸಾ–2

ಶ್ರೀ ಹೆಚ್. ಶಿವಪ್ರಕಾಶ್, ಪೊಲೀಸ್ ಉಪ ನಿರೀಕ್ಷಕರು, (ಕಾ.ಸು)ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರು ಪ್ರಕರಣದ ಫಿರ್ಯಾದುದಾರರ ನೆಲೆಯಲ್ಲಿ ಅಬಿಯೋಗದ ಪರ ದಿ:19–1–2010 ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡುತ್ತಾ, ನಾನು ದಿ:26–6–2007 ರಿಂದ ದಿ:14–8–2009ವರೆಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ: 28–7–2008ರಂದು ಸಿಬ್ಬಂದಿಗಳಾದ ಹೆಚ್.ಸಿ.1206, ಹೆಚ್.ಸಿ.–773, ಪಿ.ಸಿ.370, ಪಿ.ಸಿ377, ಮತ್ತು ಪಿ.ಸಿ–1145 ಇವರ ಜೊತೆಯಲ್ಲಿ ಮಂಗಳೂರು ತಾಲೂಕು ಸೋಮೇಶ್ವರ ಗ್ರಾಮದ ಸಂಕೊಳಿಗೆ

ಎಂಬಲ್ಲಿ ವಾಹನ ತಪಾಸಣೆ ನಿರತರಾಗಿರುವಾಗ ಮಂಗಳೂರು ಕಡೆಯಿಂದ ಕೇರಳ ಕಡೆಗೆ ಅತೀ ವೇಗದಲ್ಲಿ ಬರುತ್ತಿದ್ದ ಕಪ್ಪು ಬಣ್ಣದ GJ-3-BA 303 ನಂಬರಿನ ಸ್ಕಾರ್ಪಿಯೊ ಕಾರನ್ನು ಕಂಡು ಸಂಶಯಗೊಂಡು,ಅದರ ಚಾಲಕನಿಗೆ ನಿಲ್ಲಿಸುವರೇ ಸೂಚನೆ ನೀಡಿದಾಗ ಚಾಲಕನು ವಾಹನವನ್ನು ನಿಲ್ಲಿಸದೇ ತಲಪಾಡಿ ಕಡೆಗೆ ಮುಂದಕ್ಕೆ ಓಡಿಸಿದಾಗ ಅದನ್ನು ಇಲಾಖಾ ಜೀಪಿನಲ್ಲಿ ಬೆನ್ನಟ್ಟಿದಾಗ ಕಾರಿನ ಚಾಲಕನು ತಲಪಾಡಿ.ಆರ್.ಟಿ.ಒ ಚೆಕ್‌ಪೋಸ್ಟ್ ಸಮೀಪ ಕಾರನ್ನು ಪೂವಣ್ಣು ಕಡೆಗೆ ತಿರುಗಿಸಿ, ಅಲ್ಲಿಂದ ಕೆ.ಸಿ.ನಗರ ಮೂಲಕ ನಾಟೇಕಲ್ಲು ರಸ್ತೆಗೆ ಕೊಂಡು ಹೋಗಿ, ಅಲ್ಲಿಂದ ಬೆಳರಿಂಗೆ ರಸ್ತೆಯಲ್ಲಿ ತಿರುಗಿಸಿ, ಸುಮಾರು 5 ಕಿ.ಮೀ ನಷ್ಟು ದೂರ ಹೋಗಿ, ಕಲ್ಲಟ್ಟೆ ಎಂಬ ಒಳ ರಸ್ತೆಯಲ್ಲಿ ಕೊಂಡುಹೋಗಿ, ಕಿನ್ಯಾ ಗ್ರಾಮದ ಕಜೆ ಎಂಬ ಸ್ಥಳದಲ್ಲಿ ಚಾಲಕನು ಅತೀವೇಗದಲ್ಲಿ ವಾಹನ ಚಲಾಯಿಸಿ, ಆತನಿಗೆ ವಾಹನ ಹತೋಟಿ ತಪ್ಪಿ, ರಸ್ತೆಯ ಎಡಭಾಗದ ಚರಂಡಿಯೊಂದಕ್ಕೆ ವಾಹನವು ಬಿದ್ದು, ಸದ್ರಿ ಸಮಯದಲ್ಲಿ ಕಾರಿನ ಚಾಲಕ ಮತ್ತು ಆತನೊಂದಿಗೆ ಇದ್ದ ಇನ್ನೋರ್ವ ವ್ಯಕ್ತಿಯು ವಾಹನ ಬಿಟ್ಟು, ಪಕ್ಕದ ಕಾಡು ಪ್ರದೇಶದಲ್ಲಿ ಓಡತೊಡಗಿದಾಗ ಸಿಬ್ಬಂದಿಯವರು ಹಿಡಿಯಲು ಪ್ರಯತ್ನಿಸಿದರೂ ಕಾಡಿನಲ್ಲಿ ಮರೆಯಾಗಿ ಪರಾರಿಯಾಗಿರುತ್ತಾರೆ. ಸದ್ರಿ ಓಡಿರುವ ವ್ಯಕ್ತಿಗಳ ಪೈಕಿ ಓರ್ವನ ಮುಖ ಚಹರೆಯಿಂದ ಆತನು ಎನ್.ಆರ್.ಪುರ ತಾಲ್ಲೂಕಿನ ವಾಸಿ ಸಂತೋಷ್ ಎಂಬುದಾಗಿ ತಿಳಿದು ಬಂದಿದೆ. ನಂತರ ಚರಂಡಿಯಲ್ಲಿ ಬಿದ್ದಿದ್ದ GJ-3-BA-303 ನಂಬರಿನ ಸ್ಕಾರ್ಪಿಯೊ ಕಾರನ್ನು ಪಂಚರ ಸಮಕ್ಷಮದಲ್ಲಿ ಪರಿಶೀಲಿಸಿದಾಗ ಅದರಲ್ಲಿ ಒಟ್ಟು 37 ರಟ್ಟಿನ ಪೆಟ್ಟಿಗೆಗಳು ತುಂಬಿಸಿದ್ದು, ಪ್ರತಿ ರಟ್ಟಿನ ಪೆಟ್ಟಿಗೆಗಳನ್ನು ಪರಿಶೀಲಿಸಿದಾಗ 180ಎಂ.ಎಲ್ ಸಾಮರ್ಥ್ಯದ ಪ್ರತಿ ಪೆಟ್ಟಿಗೆಯಲ್ಲಿ ತಲಾ 48 ರಂತೆ ಒಟ್ಟು 1776 ಸೂಪರ್ ಜ್ಯಾಕ್ ಕ್ಲಾಸಿಕ್ ವಿಸ್ಕಿ ಎಂಬ ಲೇಬಲ್ ಇರುವ ಮದ್ಯ ತುಂಬಿದ ಬಾಟಲಿಗಳು ಇರುವುದು ಕಂಡು ಬಂತು. ವಾಹನವನ್ನು ಕೂಲಂಕುಷವಾಗಿ ತಪಾಸಣೆ ನಡೆಸಿದಾಗ ವಾಹನದ ಚಾಲಕ ಮತ್ತು ಇನ್ನೋರ್ವ ವ್ಯಕ್ತಿ ಸದ್ರಿ ಮದ್ಯವನ್ನು ಸಾಗಾಟ ಮಾಡುವ ಬಗ್ಗೆ ಯಾವುದೇ ರಹದಾರಿ ಹೊಂದಿರುವುದು ಕಂಡು ಬರಲಿಲ್ಲ. ಕಾರಣ ಸದ್ರಿ ಮದ್ಯವನ್ನು ಅಕ್ರಮವಾಗಿ ಕೇರಳ ರಾಜ್ಯಕ್ಕೆ ಮಾರಾಟ ಮಾಡುವ ಸಲುವಾಗಿ ಸದ್ರಿ ವಾಹನದಲ್ಲಿ ಸಾಗಾಟ ಮಾಡುತ್ತಿರುವುದು ಖಚಿತಗೊಂಡು, ಇದು ಅಬಕಾರಿ ಕಾಯಿದೆಯ ಉಲ್ಲಂಘನೆ ಎಂದು ತಿಳಿದು ವಾಹನ ಮತ್ತು ಅದರಲ್ಲಿರುವ ಮದ್ಯದ ಬಾಕ್ಸ್‌ಗಳನ್ನು ಸ್ವಾಧೀನಪಡಿಸಿಕೊಳ್ಳಲಾಯಿತು. ಪ್ರತಿಯೊಂದು ಮದ್ಯದ ಪೆಟ್ಟಿಗೆಯಿಂದ ತಲಾ ಒಂದೊಂದರಂತೆ ಒಟ್ಟು 37ವಿಸ್ಕಿ ತುಂಬಿದ ಬಾಟಲಿಗಳನ್ನು ಮಾದರಿಗೆ ತೆಗೆದಿರಿಸಿ, ಅವುಗಳ ಮುಚ್ಚಳಕ್ಕೆ ಬಟ್ಟೆ ಸುತ್ತಿ, ಎಸ್.ಹೆಚ್.ಒ ಮೊಹರು ಮಾಡಿ,ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಲಾಯಿತು . ವಶಪಡಿಸಿಕೊಂಡ ಸ್ಕಾರ್ಪಿಯೊ ಇಂಜಿನನ್ನು ಪರಿಶೀಲಿಸಲಾಗಿ ಅದರ ಇಂಜಿನಿನಲ್ಲಿ B.F34M83563ಎಂದು ಬೊನೆಟಿನ ಮೇಲೆ ಅಲ್ಯುಮೀನಿಯಂ ಪ್ಲೇಟ್ ಅಳವಡಿಸಿದ್ದು, ಅದರಲ್ಲಿ ಮಾಡೆಲ್ SCORPIO- TURBO-2,GLX 2 W-D 85,SL NO.MA-ITA-2BFC42,A-60925 ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ. ಸದ್ರಿ ವಾಹನ ಹತೋಟಿ ತಪ್ಪಿ ಬಿದ್ದಿರುವ ಸ್ಥಳದ ಚೆಕ್ ಬಂದಿಯನ್ನು ನಮೂದಿಸಿ, ಸ್ಥಳದಲ್ಲಿಯೆ ಮಹಜರನ್ನು ಜರುಗಿಸಲಾಯಿತು.ಸದ್ರಿ ಮಹಜರಿಗೆ ಪಂಚ ಸಾಕ್ಷಿದಾರರ ಸಹಿಯನ್ನು ಪಡೆಯಲಾಯಿತು. ಮಹಜರನ್ನು ಈಗ ನೋಡಿ ಅದನ್ನು ನಿಶಾನೆ ಪಿ–3 ಎಂದು ಅದರ ಮೇಲಿರುವ ನನ್ನ ಸಹಿಯನ್ನು ನಿಶಾನೆಪಿ–3 ಎ ಎಂದು ಗುರುತಿಸ ಲಾಯಿತು. ವಾಹನ ಮತ್ತು ಇತರ ಸೊತ್ತುಗಳನ್ನು ಠಾಣೆಗೆ ಕೊಂಡೊಯ್ದು, ಠಾಣೆಯಲ್ಲಿ ಉಳ್ಳಾಲ ಪೊಲೀಸ್ ಠಾಣಾ ಕ್ರೈಂ ಸಂ:170/2008 ದಿ:28–7–08ರಂತೆ ಪ್ರಥಮ ಮಾಹಿತಿ ವರದಿಯನ್ನು ತಯಾರಿಸಲಾಯ್ತು. ಹಾಗೂ ಜಪ್ತುಪಡಿಸಿದ ಸೊತ್ತುಗಳ ವಿವರಗಳನ್ನು ನಮೂದಿಸಿ, ಉಳ್ಳಾಲ ಪೊಲೀಸ್ ಠಾಣಾ ಪಿ.ಎಫ್ ಸಂ: 163/08 ದಿ:28–7–08ರಂತೆ ವರದಿ ತಯಾರಿಸಿ, ಸದ್ರಿ ಸ್ವತ್ತುಗಳನ್ನು ಹಸ್ತಾಂತರಿಸುವ ಬಗ್ಗೆ ಮಾನ್ಯ ನ್ಯಾಯಾಲಯದಿಂದ ಅನುಮತಿಯನ್ನು ಪಡೆಯಲಾಯ್ತು. ಪ್ರಥಮ ಮಾಹಿತಿ ವರದಿ ಪ್ರತಿಯನ್ನು ಈಗ ನೋಡಿ,ನಿಶಾನೆ ಪಿ–4 ಎಂದು ಅದರ ಮೇಲಿನ ನನ್ನ ಸಹಿಯನ್ನು ನಿಶಾನೆ ಪಿ–4 ಎ ಎಂದು ಗುರುತಿಸಲಾಯ್ತು. ಹಾಗೂ ಪಿ.ಎಫ್ ವರದಿಯನ್ನು ನಿಶಾನೆ ಪಿ–5 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–5ಎ ಎಂದು ಗುರುತಿಸಲಾಯಿತು. ನಂತರ ಸದ್ರಿ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಎ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವರೇ ವಿನಂತಿಸಿ, ಸೊತ್ತುಗಳನ್ನು ವ್ಯಾಪ್ತಿಯ ಅಬಕಾರಿ ಅಧಿಕಾರಿಗಳಿಗೆ ಹಸ್ತಾಂತರಿಸಲು ಆದೇಶ ಕೋರಿ ದಿ:01–10–2008ರಂದು ಮಾನ್ಯ ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ಇವರಿಗೆ ಪತ್ರ ಬರೆಯಲಾಯ್ತು.ಸದ್ರಿ ಪತ್ರವನ್ನು ಈಗ ನೋಡಿ ಅದನ್ನು ನಿಶಾನೆ ಪಿ–6 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ.ಪಿ–6ಎ ಎಂದು ಗುರುತಿಸಲಾಯ್ತು. ಮಾನ್ಯ ಅಧಿಕೃತ ಅಧಿಕಾರಿಗಳ ದಿ:30–10–2008ರ ಆದೇಶದಂತೆ ದಿ:15–6–2009ರಂದು ವಾಹನ ಮತ್ತು ಸೊತ್ತುಗಳನ್ನು ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ ಇವರಿಗೆ ಹಸ್ತಾಂತರಿಸಿರುತ್ತೇನೆ. ಪ್ರಕರಣದ ಮದ್ಯದ ಮಾದರಿ ಬಾಟಲಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ, ಪಡೆಯಲಾದ ರಾಸಾಯನಿಕ ವಿಶ್ಲೇಷಣಾ ವರದಿ ಪ್ರತಿಯನ್ನು ಮತ್ತು ಪ್ರಕರಣಕ್ಕೆ ಸಂಬಂಧಿಸಿದ ಕಡತದ ಪ್ರತಿಗಳನ್ನು ದಿ:10–8–2009 ರಂದು ಸಂಬಂಧಿಸಿದ ಅಬಕಾರಿ ಅಧಿಕಾರಿಗಳಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು: ವಾಹನದ ಮಾಲೀಕರಾಗಲೀ ಮಾಲೀಕರ ಪರ ವಕೀಲರಾಗಲೀ ಈ ಪ್ರಕರಣದಲ್ಲಿ ಯಾವುದೇ ಆಸಕ್ತಿ ತೋರಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಈ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಗಳು ಪೂರಕವಾಗಿ ನೀಡಿರುವ ಸಾಕ್ಷಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ: 28–7–2008 ರಂದು ಜಪ್ತು ಪಡಿಸಿರುವ ಸ್ಕಾರ್ಪಿಯೋ ಸಂ: GJ-3-BA-303 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಬೀತುಪಡಿಸುವುದು ಅಕ್ರಮ ಸಂದರ್ಭದಲ್ಲಿ ವಾಹನದ ಸುಪರ್ಧಿ ಹೊಂದಿರುವ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಜಪ್ತಾದ ವಾಹನದ ಮಾಲೀಕತ್ವದ ಬಗ್ಗೆ ವಿವರಗಳ್ಳುಳ್ಳ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆಯುವ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಗುಜರಾತ್ ರಾಜ್ಯ ಇವರಿಗೆ ಪತ್ರ ಮುಖೇನಾ ಸಂಪರ್ಕಿಸಲಾಗಿದ್ದರೂ, ಸದ್ರಿಯವರಿಂದ ಯಾವುದೇ ಮಾಹಿತಿ ಲಭ್ಯವಿಲ್ಲದೇ ಇರುವುದರಿಂದ ವಾಹನದ ಮಾಲೀಕರಿಗೆ ಅಬಕಾರಿ ಕಾಯಿದೆ ಕಲಂ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸು ನೀಡಲು ಸಾಧ್ಯವಾಗಿರುವುದಿಲ್ಲ. ಪ್ರಕರಣ ದಾಖಲಾಗಿ ಸುಮಾರು 1 ವರ್ಷ 6 ತಿಂಗಳುಗಳು ಕಳೆದಿದ್ದರೂ, ಜಪ್ತಾದ ವಾಹನದ ಮಾಲೀಕರು ತನ್ನ ವಾಹನವನ್ನು ಪಡೆದುಕೊಳ್ಳುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಹಾಗೂ ಈ ಬಗ್ಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಸೂಕ್ತ ಸಾಕ್ಷ್ಯದಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಾಹನದ ಮಾಲೀಕರು ವಿಫಲರಾಗಿರುವುದರಿಂದ ಹಾಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಪ್ರಕರಣ ನಡೆಸಲು ಉತ್ಸುಕರಾಗದೇ ಇರುವುದನ್ನು ಗಮನಿಸಿದಾಗ ಜಪ್ತಾದ ವಾಹನ ಮಾಲೀಕರು ತನ್ನ ತಿಳುವಳಿಯಿಂದಲೇ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ.ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಸ್ಕಾರ್ಪಿಯೋ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಜ್ಯಾರಿಯಲ್ಲಿರುವ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿ ಯೋಗ್ಯ ಹಾಗೂ ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಭಾಗಶ: ಜಖಂಗೊಂಡಿರುವ ಸ್ಕಾರ್ಪಿಯೋ ಕಾರು ಸಂ: GJ-3-BA-303 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ನೇ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಗಳೂರು ಗ್ರಾಮಾಂತರ ಉಳ್ಳಾಲ ಪೋಲೀಸ್ ಠಾಣಾ ಕ್ರೈಂ ಸಂ:170/2008 ದಿ: 28–7–2008 ರಲ್ಲಿ ಜಪ್ತು ಪಡಿಸಿ ಕೊಂಡಿರುವ ವಾರಸ್ಸುದಾರರು ಯಾರೂ ಇಲ್ಲದ ಸ್ಕಾರ್ಪಿಯೋ ಕಾರು ಸಂ:GJ-3-BA-303 (ಇಂಜಿನ್ ಸಂ:B.F34M83563 ಮತ್ತು ಚಾಸೀಸ್ ಸಂ: MA-ITA-2BFC42, A-60925)ನ್ನು ನಿಯಮ 43ಸಿ ರನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:27–01–2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–I : ಶ್ರೀ ಸಿ.ಹೆಚ್.ಸೋಮಶೇಖರ್, ಅಬಕಾರಿ ನಿರೀಕ್ಷಕರು (ಪ್ರಭಾರ)
ಮಂಗಳೂರು ದಕ್ಷಿಣ ವಲಯ–2,ಮಂಗಳೂರು.

ಪ್ರಾ.ಸ–2 : ಶ್ರೀ ಹೆಚ್.ಶಿವಪ್ರಕಾಶ್, ಪೋಲೀಸ್ ಉಪ ನಿರೀಕ್ಷಕರು, (ಕಾ.ಸು) ಉಳ್ಳಾಲ ಪೋಲೀಸ್ ಠಾಣೆ, ಉಳ್ಳಾಲ.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ಇಎಕ್ಸ್ ಪಿ–I : ಅಬಕಾರಿ ಉಪ ಅಯುಕ್ತರಿಗೆ ದಿ: 24–8–09 ರಂದು ಬರೆದ ಶಿಫಾರಸ್ಸು ಪತ್ರ

ಇಎಕ್ಸ್ ಪಿ–I ಎ :ಅದರ ಮೇಲಿನ ಸಹಿ

ಇಎಕ್ಸ್ ಪಿ–2	: :ಪ್ರಾ.ಸಾ.ಅ ರವರಿಗೆ ಬರೆದ ಪತ್ರ ದಿ:8–9–2009
ಇಎಕ್ಸ್ ಪಿ–2ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ–3	: ಮಹಜರು ಪ್ರತಿ
ಇಎಕ್ಸ್ ಪಿ–3ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ–4	: ಪ್ರಥಮ ಮಾಹಿತಿ ವರದಿ
ಇಎಕ್ಸ್ ಪಿ–4ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ–5	: ಪಿ.ಎಫ್.ವರದಿ
ಇಎಕ್ಸ್ ಪಿ–5ಎ	: ಅದರ ಮೇಲಿನ ಸಹಿ
ಇಎಕ್ಸ್ ಪಿ–6	: ಪ್ರಾ.ಸಾ–2ರವರು ಅಧಿಕೃತ ಅಧಿಕಾರಿಗಳಿಗೆ ಬರೆದ ಪತ್ರ
ಇಎಕ್ಸ್ ಪಿ–6ಎ	: ಅದರ ಮೇಲಿನ ಸಹಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಅರ್ಜಿದಾರರ ಹೇಳಿಕೆ :– – ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್,

ಪಿ.ಆರ್.209

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/50/ಡಿಟಿಸಿಆರ್/2009–10, ದಿನಾಂಕ:18ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು,
ಪುತ್ತೂರು ವಲಯ, ಪುತ್ತೂರು.

ಆರೋಪಿ:

ಎಸ್. ಬಾಲಕೃಷ್ಣ ರೈ (42 ವ), ಬಿನ್ ದಿ. ತ್ಯಾಂಪಣ್ಣ ರೈ.
ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು.

ವಾಹನ ಮಾಲೀಕರು:

ಶ್ರೀ ಮಹಮ್ಮದ್ ಬಿನ್ ಮಮ್ಮುನಿ ಬ್ಯಾರಿ,
ವಾಸ:2–45 ಕೆಮ್ಮಿಂಜೆ, ಪಲ್ಲಗುಡ್ಡೆ, ದರ್ಬೆ, ಪುತ್ತೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:31–8–2009 ರಂದು ಸಂಜೆ 6–30 ಗಂಟೆ ಸಮಯಕ್ಕೆ ದೊರೆತ ಖಚಿತ ವರ್ತಮಾನದ ಮೇರೆಗೆ ಫಿರ್ಯಾದುದಾರರು ಮತ್ತು ಅಬಕಾರಿ ಉಪ ನಿರೀಕ್ಷಕರು ಸಿಬ್ಬಂದಿಯವರೊಂದಿಗೆ ಕೂಡಿಕೊಂಡು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ದೈತೋಟ ಬಸ್ಸು ನಿಲ್ದಾಣದ ಬಳಿ ಬಂದಾಗ ಒಂದು ಹಸಿರು ಬಣ್ಣದ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ನಿಂತಿದ್ದು, ಅದರ ಹತ್ತಿರ ನಿಂತಿದ್ದ ಒಬ್ಬ ಆಸಾಮಿಯು ಸಮವಸ್ತ್ರದಲ್ಲಿದ್ದ ಸಿಬ್ಬಂದಿಯವರನ್ನು ಕಂಡು ಅನುಮಾನಸ್ಪದವಾಗಿ ವರ್ತಿಸುತ್ತಿರುವುದನ್ನು ಕಂಡ ಕೂಡಲೇ ಸಿಬ್ಬಂದಿಯವರು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ, ಸದರಿ ಸ್ಕೂಟರ್‌ನಲ್ಲಿ ಮದ್ಯದ ಬಾಟಲ್‌ಗಳನ್ನು ಹೊಂದಿ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿದನು. ಸದರಿ ಸ್ಕೂಟರನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು ಕಾಲಾವಕಾಶಯಿಲ್ಲದ ಕಾರಣ ಸಿಬ್ಬಂದಿಯವರ ಸಮಕ್ಷಮ ಶೋಧನಾ ಮೆಮೊವನ್ನು ತಯಾರಿಸಿ ವಾಹನದ ಶೋಧನಾ ಕ್ರಮ ಸ್ಥಳದಲ್ಲಿಯೇ ಜರುಗಿಸಲಾಯಿತು. ಸ್ಕೂಟರಿನ ಕಾಲು ಇಡುವ ಜಾಗದಲ್ಲಿ ಮತ್ತು ಡಿಕ್ಕಿಯಲ್ಲಿ ಮದ್ಯದ ಬಾಟಲ್‌ಗಳನ್ನು ದಾಸ್ತಾನು ಹೊಂದಿರುವುದು ಪತ್ತೆಯಾಯಿತು. ಸದರಿ ಸ್ಕೂಟರ್‌ನಲ್ಲಿದ್ದ ಮದ್ಯದ ಬಾಟಲ್‌ಗಳನ್ನು ಪರಿಶೀಲಿಸಲಾಗಿ, ಕೊಡೇಸ್ 5 ಸ್ಟಾರ್ ವಿಸ್ಕಿ ಎಂಬ ಲೇಬಲ್ ಇರುವ 180 ಎಂ.ಎಲ್.ನ 30 ಮದ್ಯದ ಬಾಟಲ್‌ಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ದಾಖಲಾತಿಗಳನ್ನು ಹಾಜರುಪಡಿಸಲು ತಿಳಿಸಲಾಗಿದ್ದು, ಆತನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ, ಸದರಿ ಮದ್ಯವನ್ನು ಅಕ್ರಮ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಕೂಟರ್ ಚಾಲಕನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನ ಹೆಸರು ಬಾಲಕೃಷ್ಣ ರೈ(42 ವ), ಬಿನ್:

ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ತಾಲೂಕು ಎಂದು ತಿಳಿಸಿದನು. ರಾಸಾಯನಿಕ ವಿಶ್ಲೇಷಣೆಗಾಗಿ, ಸಿಕ್ಕಿದ ಮದ್ಯದ ಬಾಟಲ್‌ಗಳಿಂದ 180 ಎಂ.ಎಲ್.ನ 26 ಮದ್ಯದ ಬಾಟಲ್‌ಗಳನ್ನು ತೆಗೆದು ಅದರ ಬಾಯಿಗೆ ಬಟ್ಟೆದಾರಗಳನ್ನು ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿ ಸೀಲನ್ನು ತಯಾರಿಸಲಾಯಿತು. ಆರೋಪಿಯ ಗುರುತಿನ ಚೀಟಿಯನ್ನು ತಯಾರಿಸಿ, ಮಾದರಿ ಬಾಟಲ್‌ಗಳಿಗೂ ಹಾಗೂ ಉಳಿದ ಮದ್ಯದ ಬಾಟಲ್‌ಗಳಿಗೆ ಮತ್ತು ಸಾಗಾಟಕ್ಕೆ ಬಳಸಿದ ಸ್ಕೂಟರಿಗೆ ಅಂಟಿಸಲಾಯಿತು. ಆಪಾದಿತನಿಗೆ ಅಕ್ರಮ ಮದ್ಯವನ್ನು ಹೊಂದಿರುವ ಹಾಗೂ ಮಾರಾಟ ಮಾಡುವುದು ಕರ್ನಾಟಕ ಅಬಕಾರಿ ಕಾನೂನಿನಡಿ ಅಪರಾಧ ಹಾಗೂ ಶಿಕ್ಷಾರ್ಹವೆಂದು ತಿಳಿಸಿ, ಆಪಾದಿತನನ್ನು ಸೊತ್ತು ಹಾಗೂ ಸ್ಕೂಟರ್‌ಗಳೊಂದಿಗೆ ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ತಕ್ಷೀರು ನಡೆದ ದಿನಾಂಕ ಮತ್ತು ಸಮಯವನ್ನು ನಮೂದಿಸಲಾಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 38(ಎ) ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ, ಆರೋಪಿಯ ವಿರುದ್ದ ತಕ್ಷೀರು ಸಂ:2/2009–10 ದಿ:31–8–2009 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿ ಸಂಖ್ಯೆ: ಸಿಆರ್‌ಎಂ/6/2009–10 ದಿ:9–11–2009 ರ ವರದಿಯಲ್ಲಿ, ಮದ್ಯದ ರಾಸಾಯನಿಕ ವಿಶ್ಲೇಷಣಾ ಪತ್ರ ಸಂಖ್ಯೆ: ಇ–330–26 ದಿ:11–9–2009 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಮತ್ತು ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ರ ಬಿ ಎಕ್ಸ್‌ಸ್ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಬಿ ಎಕ್ಸ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ವಾಹನದ ನೋಂದಣಿ ಮಾಲೀಕ ಶ್ರೀ.ಮಹಮ್ಮದ್, ಬಿನ್: ಮಮ್ಮುನಿ ಬ್ಯಾರಿ, ವಾಸ: 2–45 ಕೆಮ್ಮಿಂಜೆ, ಪಲ್ಲಗುಡ್ಡೆ, ದರ್ಬೆ, ಪುತ್ತೂರು ಆಗಿದ್ದು, ಇದರ ಚಾಸೀಸ್ ನಂ: 06ಸಿ94ಕೆ 33537 ಮತ್ತು ಇಂಜಿನ್ ನಂ:06ಇ94ಕೆ 38306 ಆಗಿರುತ್ತದೆ. ಮತ್ತು ವಾಹನದ ಪ್ರಸ್ತುತ ಮೌಲ್ಯವನ್ನು ಮೋಟಾರು ವಾಹನ ನಿರೀಕ್ಷಕರು, ಸಾರಿಗೆ ಅಧಿಕಾರಿ, ಪುತ್ತೂರು ಇವರ ದೃಢೀಕರಣ ಪತ್ರ ದಿನಾಂಕ: 24–10–2009 ರ ವರದಿಯಲ್ಲಿ, ವಾಹನದ ಮೌಲ್ಯ ರೂ.1,200/– ಗಳಾಗಬಹುದೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಸದರಿ ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ ಬಜಾಜ್ ಚೇತಕ್ ಸ್ಕೂಟರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಹಾಗೂ ವಾಹನವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಲಯ ಅಬಕಾರಿ ನಿರೀಕ್ಷಕರ ಶಿಫಾರಸ್ಸಿನ ಮೇರೆಗೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/50/ಡಿಟಿಸಿಆರ್/2009–10 ದಿ:18–11–2009 ರ ಆದೇಶದಲ್ಲಿ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಆಯುಕ್ತರ ಸುತ್ತೋಲೆ ಮತ್ತು ಮಾರ್ಗಸೂಚಿಗಳನ್ನು ಅನುಸರಿಸಿ ನಾಶಪಡಿಸಲು ಆದೇಶಿಸಲಾಗಿರುತ್ತದೆ.

ವಾಹನದ ನೋಂದಣಿ ಮಾಲೀಕರಾದ ಶ್ರೀ.ಮಹಮ್ಮದ್, ಬಿನ್: ಮಮ್ಮುನಿ ಬ್ಯಾರಿ, ವಾಸ:2–45 ಕೆಮ್ಮಿಂಜೆ, ಪಲ್ಲಗುಡ್ಡೆ, ದರ್ಬೆ, ಪುತ್ತೂರು ಮತ್ತು ಆರೋಪಿಯಾದ ಎಸ್.ಬಾಲಕೃಷ್ಣ ರೈ(42 ವ), ಬಿನ್: ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ಇವರಿಗೆ ಕರ್ನಾಟಕ ಅಬಕಾರಿ ಕಾಯಿದೆ 1966 ರ ಕಲಂ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳು ಸ್ವೀಕೃತಿಯಾಗಿ, ಸ್ವೀಕೃತಿ ಪತ್ರ ಈ ಪ್ರಾಧಿಕಾರಕ್ಕೆ ತಲುಪಿರುತ್ತದೆ. ಆದರೆ ವಾಹನದ ಮಾಲೀಕರಾಗಲಿ, ಅವರ ಪರ ವಕೀಲರಾಗಲಿ ಮತ್ತು ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿಯಾಗಲಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನದ ಬಿಡುಗಡೆ ಪಡೆಯಲು ಯಾವುದೇ ಅರ್ಜಿಯನ್ನು ಇದುವರೆಗೂ ಸಲ್ಲಿಸಿರುವುದಿಲ್ಲ.

ಪ್ರಕರಣವು ದಾಖಲಾಗಿ ಸುಮಾರು 4 ತಿಂಗಳು ಕಳೆದರೂ ವಾಹನದ ಬಿಡುಗಡೆಗಾಗಿ ಈ ಪ್ರಾಧಿಕಾರಕ್ಕೆ ಯಾರೂ ಅರ್ಜಿಯನ್ನು ಸಲ್ಲಿಸಿರುವ ಕಾರಣಕ್ಕೆ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ತಕ್ಷೀರಿಗೆ ಸಂಬಂಧಿಸಿದ ಫಿರ್ಯಾದುದಾರರು, ತನಿಖಾಧಿಕಾರಿಯವರು ಮತ್ತು ಮಹಜರು ಸಾಕ್ಷಿದಾರರಿಗೆ ಹಾಗೂ ವಾಹನ ಮಾಲೀಕರಿಗೆ ಮತ್ತು ಆರೋಪಿಗೆ ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ವಾಹನದ ಮಾಲೀಕರಾಗಲಿ ಅಥವಾ ಆರೋಪಿಯಾಗಲಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಯಾವುದೇ ಸಾಕ್ಷಿ ವಿಚಾರಣೆಯನ್ನು ನೀಡಿರುವುದಿಲ್ಲ. ಪ್ರಕರಣದ ವಿಚಾರಣೆಯನ್ನು ಆರಂಭಿಸಿ ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ: 31–8–2009 ರಂದು ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಸಾಗಾಣೆಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು

ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ.ಶಿವ ಪ್ರಸಾದ್,ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿ:15–1–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು 2005 ರಿಂದ ಇಲ್ಲಿಯವರೆಗೆ ಪುತ್ತೂರು ವಲಯ ಕಚೇರಿಯ ಅಬಕಾರಿ ನಿರೀಕ್ಷಕರಾಗಿದ್ದು, ತಾನು ದಿ:31–8–2009 ರಂದು ಪುತ್ತೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರ ಕಚೇರಿಯ ಕಂಟ್ರೋಲ್ ರೂಮ್ ದೂರವಾಣಿ ಸಂ: 08251–231981 ಕ್ಕೆ ಬಂದ ಕರೆಯ ಮೇರೆಗೆ ತಾನು ಮತ್ತು ತನ್ನ ಅಬಕಾರಿ ಉಪ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ದೈತೋಟ ಬಸ್ಸು ನಿಲ್ದಾಣದ ಬಳಿ ಬಂದಾಗ ಒಂದು ಹಸಿರು ಬಣ್ಣದ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ನಿಂತಿದ್ದು, ಅದರ ಹತ್ತಿರ ಒಬ್ಬ ಆಸಾಮಿಯು ಸಮವಸ್ತ್ರದಲ್ಲಿದ್ದ ತಮ್ಮನ್ನು ಕಂಡು ಅನುಮಾನಸ್ಪದವಾಗಿ ವರ್ತಿಸುತ್ತಿರುವುದನ್ನು ಕಂಡ ಕೂಡಲೇ ತಮ್ಮ ಸಿಬ್ಬಂದಿಯವರಾದ ಶ್ರೀ.ಮಹಾಲಿಂಗ ನಾಯ್ಕ್, ಅಬಕಾರಿ ಮುಖ್ಯ ರಕ್ಷಕ ಮತ್ತು ಶ್ರೀ.ಗಂಗಾಧರ, ಅಬಕಾರಿ ರಕ್ಷಕರು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ, ಸದರಿ ಸ್ಕೂಟರ್‌ನಲ್ಲಿ ಮದ್ಯದ ಬಾಟಲ್‌ಗಳನ್ನು ಹೊಂದಿ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿದರು. ಸದರಿ ಸ್ಕೂಟರನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು ಕಾಲಾವಕಾಶಯಿಲ್ಲದ ಕಾರಣ, ತಮ್ಮ ಸಮಕ್ಷಮ ಶೋಧನಾ ಮೆಮೊವನ್ನು ತಯಾರಿಸಿ ವಾಹನ ಶೋಧನಾ ಕ್ರಮ ಸ್ಥಳದಲ್ಲಿಯೇ ಜರುಗಿಸಲಾಯಿತು. ಸ್ಕೂಟರಿನ ಕಾಲು ಇಡುವ ಜಾಗದ ಡಿಕ್ಕಿಯಲ್ಲಿ ಮದ್ಯದ ಬಾಟಲ್‌ಗಳು ಇದ್ದದ್ದು ಪತ್ತೆಯಾಯಿತು. ಸದರಿ ಸ್ಕೂಟರ್‌ನಲ್ಲಿದ್ದ ಮದ್ಯದ ಬಾಟಲ್‌ಗಳನ್ನು ಪರಿಶೀಲಿಸಲಾಗಿ, ಕೊಡೇಸ್ 5 ಸ್ಟಾರ್ ವಿಸ್ಕಿ ಎಂಬ ಲೇಬಲ್ ಇರುವ 180 ಎಂ.ಎಲ್.ನ 30 ಮದ್ಯದ ಬಾಟಲ್‌ಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ದಾಖಲಾತಿಗಳನ್ನು ಹಾಜರುಪಡಿಸಲು ತಿಳಿಸಲಾಗಿದ್ದು, ಆತನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಸದರಿ ಮದ್ಯವನ್ನು ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಕೂಟರ್ ಚಾಲಕನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಬಾಲಕೃಷ್ಣ ರೈ(42 ವ), ಬಿನ್: ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ತಾಲೂಕು ಎಂದು ತಿಳಿಸಿದನು. ರಾಸಾಯನಿಕ ವಿಶ್ಲೇಷಣೆಗಾಗಿ ಸಿಕ್ಕಿದ ಮದ್ಯದ ಬಾಟಲ್‌ಗಳಿಂದ 180 ಎಂ.ಎಲ್.ನ 26 ಮದ್ಯದ ಬಾಟಲ್‌ಗಳನ್ನು ತೆಗೆದು ಅದರ ಬಾಯಿಗೆ ಬಟ್ಟೆದಾರಗಳನ್ನು ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿ ಸೀಲನ್ನು ತಯಾರಿಸಲಾಯಿತು. ಆರೋಪಿಯ ಗುರುತಿನ ಚೀಟಿಯನ್ನು ತಯಾರಿಸಿ, ಮಾದರಿ ಬಾಟಲ್‌ಗಳಿಗೂ ಹಾಗೂ ಉಳಿದ ಮದ್ಯದ ಬಾಟಲ್‌ಗಳಿಗೆ ಮತ್ತು ಸಾಗಾಟಕ್ಕೆ ಬಳಸಿದ ಸ್ಕೂಟರಿಗೆ ಅಂಟಿಸಲಾಯಿತು. ಆಪಾದಿತನಿಗೆ ಅಕ್ರಮ ಮದ್ಯವನ್ನು ಹೊಂದಿರುವುದು ಹಾಗೂ ಮಾರಾಟ ಮಾಡುವುದು ಕರ್ನಾಟಕ ಅಬಕಾರಿ ಕಾನೂನಿನಡಿ ಅಪರಾಧ ಹಾಗೂ ಶಿಕ್ಷಾರ್ಹವೆಂದು ತಿಳಿಸಿ, ಆಪಾದಿತನನ್ನು ಸೊತ್ತು ಹಾಗೂ ಸ್ಕೂಟರ್‌ಗಳೊಂದಿಗೆ ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ಸಮಯವನ್ನು ನಮೂದಿಸಲಾಗಿದೆ. ಮಹಜರಿನ ಪ್ರತಿಯನ್ನು ಈ ಪ್ರಾಧಿಕಾರದ ಮುಂದೆ ನೋಡಲಾಗಿ, ಸದರಿ ವರದಿಯನ್ನು ನಿಶಾನೆ ಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಕಚೇರಿಗೆ ಬಂದು ಆಪಾದಿತ ವಿರುದ್ಧ ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಪ್ರಥಮ ಮಾಹಿತಿ ವರದಿಯ ಪ್ರತಿಯನ್ನು ಈ ಪ್ರಾಧಿಕಾರದ ಮುಂದೆ ನೋಡಲಾಗಿ, ಸದರಿ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿಯೇ ತಯಾರಿಸಿದ ಸೊತ್ತುಗಳ ಪಟ್ಟಿಯನ್ನು ನಿಶಾನೆ ಪಿ–3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತಿಸಲಾಯಿತು. ಸ್ಥಳದಲ್ಲಿಯೇ ತಯಾರಿಸಿದ ಸರ್ಚ್ ಮೆಮೊವನ್ನು ನಿಶಾನೆ ಪಿ–4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–4ಎ ಎಂದು ಗುರುತಿಸಲಾಯಿತು. ನಂತರ ತನಿಖೆಯನ್ನು ಮುಂದುವರಿಸಿ ಆಪಾದಿತನ ಗುರುತಿನ ಪಟ್ಟಿಯನ್ನು ತಯಾರಿಸಲಾಗಿ, ನಿಶಾನೆ ಪಿ–5 ಎಂದು ಗುರುತಿಸಲಾಯಿತು. ರಾಸಾಯನಿಕ ವಿಶ್ಲೇಷಣೆಗೆ ಮದ್ಯದ ಬಾಟಲ್‌ಗಳನ್ನು ಶ್ರೀ.ಮಹಾಲಿಂಗ ನಾಯ್ಕ್, ಅಬಕಾರಿ ಮುಖ್ಯ ರಕ್ಷಕ ಇವರ ಮುಖಾಂತರ ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿದ್ದು ಅವರಿಂದ ವರದಿಯನ್ನು ಪಡೆಯಲಾಗಿದ್ದು, ಅವರ ವರದಿ ಸಂ: ಇ–330–26 ದಿ:11–9–2009 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ವರದಿಯ ಪ್ರತಿಯನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು ಹಾಗೂ ವಾಹನದ ಮೌಲ್ಯ ಹಾಗೂ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಪಡೆಯಲಾಗಿದ್ದು, ಇದರ ನೋಂದಣಿ ಮಾಲೀಕ ಶ್ರೀ.ಮಹಮ್ಮದ್, ಪುತ್ತೂರು ಹಾಗೂ ವಾಹನದ ಈಗಿನ

ಮೌಲ್ಯ ರೂ.1,200/– ಗಳಾಗಬಹುದೆಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ವರದಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದ್ದು, ಅವುಗಳನ್ನು ನಿಶಾನೆ ಪಿ–7 ಮತ್ತು 8 ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಪ್ರಾಧಿಕಾರಕ್ಕೆ ತನಿಖಾ ವರದಿಯನ್ನು ದಿ:9–11–2009 ರಂದು ಸಲ್ಲಿಸಲಾಗಿದೆ. ಸದರಿ ವರದಿಯನ್ನು ಈಗ ನೋಡಲಾಗಿ, ನಿಶಾನೆ ಪಿ–9 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–9ಎ ಎಂದು ಗುರುತಿಸಲಾಯಿತು. ಈ ಪ್ರಾಧಿಕಾರದ ಮುಟ್ಟುಗೋಲು ಆದೇಶ ಸಂಖ್ಯೆ:ಎಸ್‌ಡಿಕೆ/ 50/ಡಿಟಿಸಿಆರ್ /2009–10 ದಿ:18–11–2009 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಸದರಿ ಆದೇಶದಂತೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಅಬಕಾರಿ ಆಯುಕ್ತರ ಸುತ್ತೋಲೆಯ ಅನುಸಾರ ದಿ:18–12–2009 ರಂದು ಮಹಜರು ಜರುಗಿಸಿ ನಾಶಪಡಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಪಿಡಬ್ಲ್ಯೂ–1 ಸಾಕ್ಷಿ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಮತ್ತೊಬ್ಬರು ಮಹಜರು ಸಾಕ್ಷಿದಾರರಾದ ಶ್ರೀ.ಯಾಕುಬ್‌ಖಾನ್, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿನಾಂಕ:15–1–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು 2005 ರಿಂದ ಇಲ್ಲಿಯವರೆಗೆ ಪುತ್ತೂರು ವಲಯ ಕಚೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿದ್ದು, ತಾನು ದಿ:31–8–2009 ರಂದು ತಮಗೆ ಪುತ್ತೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರ ಕಚೇರಿಯ ಕಂಟ್ರೋಲ್ ರೂಮ್ ದೂರವಾಣಿ ಸಂ: 08251–231981 ಕ್ಕೆ ಬಂದ ಕರೆಯ ಮೇರೆಗೆ ತಾನು ಮತ್ತು ತನ್ನ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ದೈತೋಟ ಬಸ್ಸು ನಿಲ್ದಾಣದ ಬಳಿಗೆ ಬಂದಾಗ, ಒಂದು ಹಸಿರು ಬಣ್ಣದ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ನಿಂತಿದ್ದು, ಅದರ ಹತ್ತಿರ ಒಬ್ಬ ಆಸಾಮಿಯು ಸಮವಸ್ತ್ರದಲ್ಲಿದ್ದ ತಮ್ಮನ್ನು ಕಂಡು ಅನುಮಾನಸ್ಪದವಾಗಿ ವರ್ತಿಸುತ್ತಿರುವುದನ್ನು ಕಂಡ ಕೂಡಲೇ ತಮ್ಮ ಸಿಬ್ಬಂದಿಯವರಾದ ಶ್ರೀ.ಮಹಾಲಿಂಗ ನಾಯ್ಕ್, ಅಬಕಾರಿ ಮುಖ್ಯ ರಕ್ಷಕ ಮತ್ತು ಶ್ರೀ.ಗಂಗಾಧರ, ಅಬಕಾರಿ ರಕ್ಷಕರು ಸದರಿ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ, ಸದರಿ ಸ್ಕೂಟರ್‌ನಲ್ಲಿ ಮದ್ಯದ ಬಾಟಲ್‌ಗಳನ್ನು ಹೊಂದಿ ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿದರು. ಸದರಿ ಸ್ಕೂಟರನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು ಕಾಲಾವಕಾಶಯಿಲ್ಲದ ಕಾರಣ ನಮ್ಮ ಸಮಕ್ಷಮ ಶೋಧನಾ ಮೆಮೊವನ್ನು ತಯಾರಿಸಿ ವಾಹನ ಶೋಧನಾ ಕ್ರಮ ಸ್ಥಳದಲ್ಲಿಯೇ ಅಬಕಾರಿ ನಿರೀಕ್ಷಕರು ಇವರು ಜರುಗಿಸಿರುತ್ತಾರೆ. ಸ್ಕೂಟರಿನ ಕಾಲು ಇಡುವ ಜಾಗದ ಡಿಕ್ಕಿಯಲ್ಲಿ ಮದ್ಯದ ಬಾಟಲ್‌ಗಳು ಇದ್ದದ್ದು ಪತ್ತೆಯಾಯಿತು. ಸದರಿ ಸ್ಕೂಟರ್‌ನಲ್ಲಿದ್ದ ಮದ್ಯದ ಬಾಟಲ್‌ಗಳನ್ನು ಪರಿಶೀಲಿಸಲಾಗಿ, ಕೊಡೇಸ್ 5 ಸ್ಟಾರ್ ವಿಸ್ಕಿ ಎಂಬ ಲೇಬಲ್ ಇರುವ 180 ಎಂ.ಎಲ್.ನ 30 ಮದ್ಯದ ಬಾಟಲ್‌ಗಳಿರುವುದು ಕಂಡು ಬಂತು. ಸದರಿ ಮದ್ಯವನ್ನು ಸಾಗಾಟ ಮಾಡಲು ದಾಖಲಾತಿಗಳನ್ನು ಹಾಜರುಪಡಿಸಲು ತಿಳಿಸಲಾಗಿದ್ದು, ಆತನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಸದರಿ ಮದ್ಯವನ್ನು ಮಾರಾಟಕ್ಕೆಂದು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ನಂತರ ಸ್ಕೂಟರ್ ಚಾಲಕನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಬಾಲಕೃಷ್ಣ ರೈ(42 ವ), ಬಿನ್: ದಿ.ತ್ಯಾಂಪಣ್ಣ ರೈ, ಸೂರಂಬೈಲ್ ಮನೆ, ಪಾಣಾಜೆ ಗ್ರಾಮ, ಪುತ್ತೂರು ತಾಲೂಕು ಎಂದು ತಿಳಿಸಿದನು. ರಾಸಾಯನಿಕ ವಿಶ್ಲೇಷಣೆಗಾಗಿ ಸಿಕ್ಕಿದ ಮದ್ಯದ ಬಾಟಲ್‌ಗಳಿಂದ 180 ಎಂ.ಎಲ್.ನ 26 ಮದ್ಯದ ಬಾಟಲ್‌ಗಳನ್ನು ತೆಗೆದು ಅದರ ಬಾಯಿಗೆ ಬಟ್ಟೆದಾರಗಳನ್ನು ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿ ಸೀಲನ್ನು ತಯಾರಿಸಲಾಯಿತು. ಆರೋಪಿಯ ಗುರುತಿನ ಚೀಟಿಯನ್ನು ತಯಾರಿಸಿ, ಮಾದರಿ ಬಾಟಲ್‌ಗಳಿಗೂ ಹಾಗೂ ಉಳಿದ ಮದ್ಯದ ಬಾಟಲ್‌ಗಳಿಗೆ ಮತ್ತು ಸಾಗಾಟಕ್ಕೆ ಬಳಸಿದ ಸ್ಕೂಟರಿಗೆ ಅಂಟಿಸಲಾಯಿತು. ಆಪಾದಿತನಿಗೆ ಅಕ್ರಮ ಮದ್ಯವನ್ನು ಹೊಂದಿರುವ ಹಾಗೂ ಮಾರಾಟ ಮಾಡುವುದು ಕರ್ನಾಟಕ ಅಬಕಾರಿ ಕಾನೂನಿನಡಿ ಅಪರಾಧ ಹಾಗೂ ಶಿಕ್ಷಾರ್ಹವೆಂದು ತಿಳಿಸಿ, ಆಪಾದಿತನನ್ನು ಸೊತ್ತು ಹಾಗೂ ಸ್ಕೂಟರ್‌ಗಳೊಂದಿಗೆ ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ ಹಾಗೂ ಸಮಯವನ್ನು ನಮೂದಿಸಲಾಗಿದೆ. ಮಹಜರಿನಲ್ಲಿ ತಾನು ಮತ್ತು ತನ್ನ ಸಿಬ್ಬಂದಿಯವರು ಸಹಿ ಮಾಡಿರುತ್ತಾರೆ. ಈಗಾಗಲೇ ಗುರುತಿಸಿರುವ ಮಹಜರಿನ ಪ್ರತಿಯನ್ನು ಈ ಪ್ರಾಧಿಕಾರದ ಮುಂದೆ ನೋಡಲಾಗಿ, ತನ್ನ ಸಹಿಯನ್ನು ನಿಶಾನೆ ಪಿ–2B ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ಕೈಗೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಪಿಡಬ್ಲ್ಯೂ–2 ನೇ ಸಾಕ್ಷಿಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿ ಮತ್ತು ಮಹಜರು ಸಾಕ್ಷಿದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ: 31–8–2009 ರಂದು ಜಪ್ತುಪಡಿಸಿಕೊಂಡಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ–30–ಇ–7239 ರಲ್ಲಿ ಅಕ್ರಮವಾಗಿ 180 ಮಿಲಿಯ 30 ಬಾಟ್ಲಿಗಳಲ್ಲಿ 5–400 ಲೀಟರ್

ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಈ ಪ್ರಾಧಿಕಾರದಿಂದ ಕಾಲಂ 43(ಬಿ) ರಡಿ ನೀಡಲಾಗಿರುವ ಕಾರಣ ಕೇಳಿ ನೋಟೀಸನ್ನು ಸ್ವೀಕರಿಸಿಕೊಂಡಿದ್ದು, ಅವರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಅವರ ತಿಳುವಳಿಕೆಗೆ ಬಾರದೆ ಸದ್ರಿ ಅಪರಾಧವೆಸಗಲಾಗಿದೆ ಎಂಬ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ಒಪ್ಪಿಸಲು ಮುಂದಾಗಿರುವುದಿಲ್ಲ. ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಯು ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನ್ನು ವಶಪಡಿಸಿಕೊಂಡು ಸುಮಾರು 4 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಪುತ್ತೂರು ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರು ಹಾಗೂ ಆರೋಪಿಯು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಈ ಪ್ರಾಧಿಕಾರದಿಂದ ವಾಹನದ ನೋಂದಣಿ ಮಾಲೀಕರಿಗೆ ಮತ್ತು ಆರೋಪಿಗೆ ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದರೂ, ಸದರಿ ನೋಟೀಸುಗಳನ್ನು ಸ್ವೀಕರಿಸಿಕೊಂಡಿದ್ದು ಯಾವುದೇ ಉತ್ತರವನ್ನು ಈ ಪ್ರಾಧಿಕಾರಕ್ಕೆ ನೀಡಿರುವುದಿಲ್ಲ ಹಾಗೂ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿದಾರರ ಪಾಟೀ ಸವಾಲು ಹಾಗೂ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ದಸ್ತಗಿರಿಯಾದ ಆರೋಪಿಯು ಇದುವರೆಗೂ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸದಿರುವ ಕಾರಣಕ್ಕೆ, ವಾಹನದಲ್ಲಿ ಮದ್ಯ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಚೇತಕ್ ಸ್ಕೂಟರ್ ಈಗಾಗಲೇ 4 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/50/ಡಿಟಿಸಿಆರ್/2009-10, ದಿನಾಂಕ:18ನೇ ಜನವರಿ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತಕ್ಷೀರು ಸಂ:2/2009-10 ದಿ:31-8-2009 ರಲ್ಲಿ ಅಕ್ರಮ ಸಾಗಾಟಕ್ಕೆ ಬಳಸಿದ ಜಪ್ತುಪಡಿಸಿಕೊಂಡಿರುವ ಬಜಾಜ್ ಚೇತಕ್ ಸ್ಕೂಟರ್ ಸಂಖ್ಯೆ: ಕೆಎ-30-ಇ-7239 ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:18-01-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ಶಿವ ಪ್ರಸಾದ್,ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಪ್ರಾ.ಸಾ–2: ಶ್ರೀ.ಯಾಕುಬ್‌ಖಾನ್, ಅಬಕಾರಿ ಉಪ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಅನುಬಂಧ–2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1 : ಮಹಜರು.

ನಿಶಾನೆ ಪಿ–1ಎ : ಮಹಜರಿನಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ–2 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ–2ಎ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ–2B : ಮಹಜರಿನಲ್ಲಿ ಪ್ರಾ.ಸಾ:2ರವರ ಸಹಿ.

ನಿಶಾನೆ ಪಿ–3 : ಸೊತ್ತುಗಳ ಪಟ್ಟಿ.

ನಿಶಾನೆ ಪಿ–3ಎ : ಅದರಲ್ಲಿರುವ ಫಿರ್ಯಾದುದಾರರ ಸಹಿ.

ನಿಶಾನೆ ಪಿ–4 : ಸರ್ಚ್ ಮೆಮೊ.

ನಿಶಾನೆ ಪಿ–4ಎ : ಅದರಲ್ಲಿರುವ ಫಿರ್ಯಾದುದಾರರ ಸಹಿ.

ನಿಶಾನೆ ಪಿ–5 : ಆಪಾದಿತನ ಗುರುತಿನ ಪಟ್ಟಿ.

ನಿಶಾನೆ ಪಿ–6 : ರಾಸಾಯನಿಕ ವಿಶ್ಲೇಷಣಾ ವರದಿ

ನಿಶಾನೆ ಪಿ–7 : ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.

ನಿಶಾನೆ ಪಿ–8 : ವಾಹನದ ಮೌಲ್ಯದ ಬಗ್ಗೆ ದೃಢೀಕರಣ ಪತ್ರ.

ನಿಶಾನೆ ಪಿ–9 : ತನಿಖಾ ವರದಿ.

ನಿಶಾನೆ ಪಿ–9ಎ : ಅದರಲ್ಲಿರುವ ಫಿರ್ಯಾದುದಾರರ ಸಹಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

–ಇಲ್ಲ–

ನೂರ್ ಮಹಮ್ಮದ್ ಹುಸೇನ್,

ಪಿ.ಆರ್.210

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/585/ಡಿಟಿಸಿಆರ್/2005–06, ದಿನಾಂಕ:22ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು (ಕಾ.ಸು.)
ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ.

ಆರೋಪಿ:

ಹೆನ್ರಿ ಡಿಸೋಜ 32 ವರ್ಷ, ಕ್ಲಿಟಸ್ ಡಿಸೋಜ
ವಾಸ:ಅನಿಲ್ ಕಂಪೌಂಡು ಒಂಭತ್ತುಕೆರೆ,
ಉಳ್ಳಾಲ ಗ್ರಾಮ, ಮಂಗಳೂರು ತಾಲ್ಲೂಕು
ಮತ್ತು ತಲೆ ಮರೆಸಿಕೊಂಡಿರುವ ಓರ್ವ ಆರೋಪಿ.

ಮಾಲೀಕರು

ಶ್ರೀ.ಮೊಹಮ್ಮದ್ ಆಶ್ರಫ್, ಬಿನ್:ಸುಲೈಮಾನ್,
ಡೋರ್ ನಂ:16–17/16, ಹೈದರ್ ಅಲಿ ರೋಡ್,
ಮುಕ್ಕಚೇರಿ, ಉಳ್ಳಾಲ, ಮಂಗಳೂರು ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ಉಪ ನಿರೀಕ್ಷಕರು(ಕಾ.ಸು) ಉಳ್ಳಾಲ ಪೊಲೀಸ್ ಠಾಣೆ, ಉಳ್ಳಾಲ ಇವರಿಗೆ ದಿನಾಂಕ: 9–2–2006 ರಂದು ದೊರೆತ ಖಚಿತ ವರ್ತಮಾನದ ಮೇರೆಗೆ ರಾತ್ರಿ 9–45 ಗಂಟೆ ಸಮಯಕ್ಕೆ ಮಂಗಳೂರು ತಾಲೂಕು ಕೋಟೆಕಾರು ಗ್ರಾಮದ ಬಗಂಬಿಲ ಎಂಬಲ್ಲಿಗೆ ತೆರಳಿ ಆಟೋ ರಿಕ್ಷಾ ಸಂ:KA-19-A-8436ನ್ನು ತಪಾಸಣೆ ಮಾಡಿದಾಗ, ರಿಕ್ಷಾದಿಂದ ಒಬ್ಬಾತನು ಹಾರಿ ಓಡಿ ಹೋಗಿದ್ದು, ಬೆನ್ನಟ್ಟಿದರೂ ಸಿಗದೇ ಇದ್ದು,ಸದ್ರಿ ರಿಕ್ಷಾ ಚಲಾಯಿಸುತ್ತಿದ್ದ ಚಾಲಕನನ್ನು ವಶಕ್ಕೆ ತೆಗೆದುಕೊಂಡು ರಿಕ್ಷಾವನ್ನು ಪರಿಶೀಲಿಸಿದಾಗ 2 ರಬ್ಬರ್ ಟ್ಯೂಬ್‌ಗಳಲ್ಲಿ ಕಂಟ್ರಿ ಶರಾಬು ಇರುವುದಾಗಿಯೂ, ಸದ್ರಿ ಪ್ರಮಾಣದಲ್ಲಿ ಕಂಟ್ರಿ ಶರಾಬನ್ನು ಆಟೋ ರಿಕ್ಷಾದಲ್ಲಿ ಸಾಗಿಸಲಾಗುತ್ತಿದ್ದ ಬಗ್ಗೆ ವಿಚಾರಿಸಲಾಗಿ ಅದು ಅಕ್ರಮವಾಗಿ ಮಾರಾಟ ಮಾಡುವರೇ ಕೊಂಡುಹೋಗುವುದಾಗಿ ತಿಳಿದುಬಂದಿದ್ದು, ಟ್ಯೂಬ್‌ಗಳಲ್ಲಿದ್ದ ಕಳ್ಳಭಟ್ಟಿ ಸಾರಾಯಿಯನ್ನು ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದುದಾಗಿ ತಿಳಿಸಿದಂತೆ ಆತನನ್ನು ವಶಕ್ಕೆ ತೆಗೆದುಕೊಂಡು ಹೆಸರು ವಿಳಾಸ ವಿಚಾರಿಸಲಾಗಿ 1) ಹೆನ್ರಿ ಡಿಸೋಜ32 ವರ್ಷ, ಬಿನ್:ಕ್ಲೀಟಸ್ ಡಿಸೋಜ ವಾಸ:ಅನಿಲ್ ಕಂಪೌಂಡು, ಒಂಭತ್ತುಕೆರೆ, ಉಳ್ಳಾಲ ಗ್ರಾಮ,ಮಂಗಳೂರು ತಾಲೂಕು ಹಾಗೂ ಓಡಿ ಹೋದವನ ಹೆಸರು ಮೆಲ್ವಿನ್ ಡಿಸೋಜ,30 ವರ್ಷ, ಬಿನ್: ಮೇಕಿ ಡಿಸೋಜ, ವಾಸ:ಅಡಂಕುದ್ರು ಮನೆ, ಜಪ್ಪಿನಮೊಗರು ಗ್ರಾಮ ಎಂಬುದಾಗಿದ್ದು, ಎರಡು ರಬ್ಬರ್ ಟ್ಯೂಬ್‌ಗಳಲ್ಲಿ 50 ಲೀ ಕಂಟ್ರಿ ಸಾರಾಯಿ ಇರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14ರಂತೆ ಅಪರಾಧವಾಗಿದ್ದು ಹಾಗೂ 32,34ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ವಾಹನ ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಜಪ್ತುಪಡಿಸಿಕೊಂಡು, ಸ್ಥಳದಲ್ಲಿಯೇ ಮಹಜರು ತಯಾರಿಸಿ, ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ:41/2006 ದಿ:9–2–2006ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಕರಣದ ಮುಂದಿನ ತನಿಖೆಗೆ ಸೊತ್ತು ಮತ್ತು ಕಡತವನ್ನು ಕಾರ್ಯವ್ಯಾಪ್ತಿಯ ಅಂದಿನ ಅಬಕಾರಿ ಉಪ ನಿರೀಕ್ಷಕರು (1), ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ ಇವರಿಗೆ ಹಸ್ತಾಂತರಿಸಲು ಈ ಪ್ರಾಧಿಕಾರದಿಂದ ಅನುಮತಿ ಕೋರಿದ್ದು, ಪ್ರಾಧಿಕಾರದಿಂದ ದಿನಾಂಕ:7–4–2006ರಂದು ಅನುಮತಿ ನೀಡಲಾಗಿರುತ್ತದೆ.

ಜಪ್ತುಪಡಿಸಿಕೊಳ್ಳಲಾದ ಸೊತ್ತುಗಳು:–

1) ಬಜಾಜ್ ಅಟೋ ರಿಕ್ಷಾ ನೊಂದಣಿ ಸಂ:KA-19A-8436

2) ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಳ್ಳಭಟ್ಟಿ ಸಾರಾಯಿ.

(ಸದ್ರಿ ಎರಡು ರಬ್ಬರ್ ಟ್ಯೂಬ್‌ಗಳಿಂದ 750 ಮಿಲಿಯದ 6 ಬಾಟಲಿಗಳಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ.

ಪ್ರಾಧಿಕಾರದ ದಿ:7–4–2006ರ ಆದೇಶದಂತೆ ಅಬಕಾರಿ ಉಪ ನಿರೀಕ್ಷಕರು(ನಂ.1) ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆರವರು ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಸೊತ್ತುಗಳ ಪೈಕಿ ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಂಟ್ರಿ ಕಳ್ಳಭಟ್ಟಿ ಸಾರಾಯಿ ಮತ್ತು ವಾಹನ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436ನ್ನು ದಿ:28–4–06 ರಂದು ಫಿರ್ಯಾದಿದಾರರಿಂದ ಹಸ್ತಾಂತರ ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ವಾಹನದ ನೊಂದಾಣಿ ಮಾಲೀಕರಾದ ಶ್ರೀ.ಮೊಹಮ್ಮದ್ ಆಶ್ರಫ್, ಬಿನ್:ಸುಲೈಮಾನ್, ಡೋರ್ ನಂ:16–17/16, ಹೈದರ್ ಅಲಿ ರೋಡ್, ಮುಕ್ಕಚೇರಿ, ಉಳ್ಳಾಲ,ಮಂಗಳೂರು ತಾಲೂಕು ಇವರು ಈ ಪ್ರಾಧಿಕಾರಕ್ಕೆ ವಾಹನದ ಆರ್.ಸಿ ಪ್ರತಿಯೊಂದಿಗೆ ದಿ:16–2–2006ರಂದು ಅವರ ವಕೀಲರ ಮೂಲಕ ಅರ್ಜಿ ಸಲ್ಲಿಸಿ, ವಾಹನದ ಮಧ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಸದ್ರಿಯವರ ಅರ್ಜಿಯನ್ನು ಪರಿಶೀಲಿಸಿದ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು,ಇಐಬಿ,ದ.ಕ ಜಿಲ್ಲೆ ಮಂಗಳೂರು ಇವರ ಪ್ರಾಧಿಕಾರದಿಂದ ದಿ:20–9–2006 ರಂದು ಹೊರಡಿಸಿದ ಆದೇಶದಲ್ಲಿ ವಾಹನದ ಮಾಲೀಕರ ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಮೊಕದ್ದಮೆಯ ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(1), ಜಾರಿ ಮತ್ತು ತನಿಖೆ, ಮಂಗಳೂರು ದಕ್ಷಿಣ ಇವರು ದಿ:15–5–2006 ರಂದು ಸಲ್ಲಿಸಿದ್ದ ತನಿಖಾ ವರದಿ ಸಂ: ಮಂ.ದ.ಜಾ.ತ/ಸಿಆರ್‌ಎಂ:86:05–06 ಇದರೊಂದಿಗೆ ಜಪ್ತುಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಮಾದರಿಗಳ ವಿಶ್ಲೇಷಣಾ ವರದಿ ಸಂ:143–6 ದಿ:14–3–2006 ಮತ್ತು ಜಪ್ತುಪಡಿಸಿದ ವಾಹನ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436ಇದಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಮಂಗಳೂರು ಇವರಿಂದ ಪಡೆಯಲಾದ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರತಿಯನ್ನು ಅಡಕಗೊಳಿಸಿ ಸಲ್ಲಿಸುತ್ತಾ, ಜಪ್ತುಪಡಿಸಿಕೊಳ್ಳಲಾದ ಕಳ್ಳಭಟ್ಟಿ ಸಾರಾಯಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಲ್ಲಿಸಿದ ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರತಿಯ ಪ್ರಕಾರ ಜಪ್ತುಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಮಾದರಿಗಳಲ್ಲಿ ಮದ್ಯಸಾರದ ಅಂಶ 25.0 % ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರು ವಶಪಡಿಸಿಕೊಂಡ ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯಂತೆ ಶ್ರೀ.ಯು. ಮೊಹಮ್ಮದ್

ಆಶ್ರಫ್, ಬಿನ್:ಸುಲೈಮಾನ್, ಡೋರ್ ನಂ:16–17/16, ಹೈದರ್ ಅಲಿ ರೋಡ್, ಮುಕ್ಕಚೇರಿ, ಉಳ್ಳಾಲ, ಮಂಗಳೂರು ತಾಲೂಕು ಇವರು ಸದ್ರಿ ವಾಹನದ ನೊಂದಣಿ ಮಾಲೀಕರಾಗಿರುವುದಾಗಿ ದೃಡೀಕೃತವಾಗಿರುತ್ತದೆ.

ತನಿಖಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಜಪ್ತುಪಡಿಸಿಕೊಂಡ ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಂಟ್ರಿ ಕಳ್ಳಭಟ್ಟಿ ಸಾರಾಯಿ (ಮಾದರಿ ಹೊರತು ಪಡಿಸಿ)ಯನ್ನು ದಿನಾಂಕ:27–2–2007ರ ಪ್ರಾಧಿಕಾರದ ಆದೇಶದಲ್ಲಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 1965ರ ಕಲಂ 43ಸಿ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಲಾಗಿರುತ್ತದೆ. ಅದರಂತೆ ಮುಟ್ಟುಗೋಲು ಹಾಕಿಕೊಳ್ಳಲಾದ ಕಳ್ಳಭಟ್ಟಿ ಸಾರಾಯಿಯನ್ನು ದಿನಾಂಕ:28–4–2007ರಂದು ಮಹಜರು ಜರುಗಿಸಿ ನಾಶಪಡಿಸಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ದ.ಕ ಜಿಲ್ಲೆ, ಮಂಗಳೂರು ಇವರಿಂದ ಪಡೆಯಲಾದ ಬಿ.ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಢಪಟ್ಟಿರುವ ವಾಹನದ ಮಾಲೀಕರಿಗೆ ಹಾಗೂ ಪ್ರಕರಣದ ಆರೋಪಿತ ವ್ಯಕ್ತಿಗಳಿಗೆ ಜಪ್ತುಪಡಿಸಿದ ವಾಹನವನ್ನು ಯಾಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬ ಬಗ್ಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ರಡಿಯಲ್ಲಿ ದಿ:10–8–2006ರಂದು ಕಾರಣ ಕೇಳಿ ನೋಟೀಸು ನೀಡಲಾಗಿದ್ದು, ಸದ್ರಿ ನೋಟೀಸು ವಾಹನದ ಮಾಲೀಕರಿಗೆ ದಿ:16–8–2006ರಂದು ಜಾರಿಯಾಗಿದ್ದು, ಸದ್ರಿಯವರು ದಿ:20–9–2006ರಂದು ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತಾ, ಕೃತ್ಯ ವಾಹನದ ಮಾಲೀಕರ ತಿಳುವಳಿಕೆ ಯಿಂದ ಆಗಿರುವುದಿಲ್ಲ ಎಂದು ತಿಳಿಸಿ, ಆರೋಪವನ್ನು ಅಲ್ಲಗಳೆದು ವಾಹನದ ಮುಟ್ಟುಗೋಲು ನಡವಳಿಕೆಯನ್ನು ಕೈಬಿಡಬೇಕಾಗಿ ಕೋರಿರುತ್ತಾರೆ. ಪ್ರಕರಣದ ಅರೋಪಿತ ವ್ಯಕ್ತಿಗಳಿಗೆ ನೀಡಲಾದ ಕಾರಣ ಕೇಳಿ ನೋಟಿಸು ಕ್ರಮವಾಗಿ ದಿ:16–8–2006 ಮತ್ತು 14–8–06ರಂದು ಜ್ಯಾರಿಯಾಗಿದ್ದು, ಅರೋಪಿತನಾದ ಹೆನ್ರಿ ಡಿಸೋಜ ಎಂಬವನು ದಿ:25–8–2006ರಂದು ಪ್ರಾದಿಕಾರಕ್ಕೆ ಉತ್ತರವನ್ನು ಸಲ್ಲಿಸಿ ಪ್ರಕರಣವನ್ನು ಅಲ್ಲಗಳೆದು ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳ ಬಾರದೆಂದು ವಿನಂತಿಸಿರುತ್ತಾರೆ. ಹಾಗೂ ಉಳಿದಂತೆ ಇನ್ನೊಬ್ಬ ಅರೋಪಿಯಿಂದ ಯಾವುದೇ ಉತ್ತರ ಸ್ವೀಕೃತವಾಗಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಪ್ರಕರಣದ ತನಿಖಾಧಿಕಾರಿಗಳಾದ ಶ್ರೀ ಕೃಷ್ಣ ನಾಯ್ಕ್, ಅಬಕಾರಿ ಉಪ ನಿರೀಕ್ಷಕರು ಮತ್ತು ಶ್ರೀ.ಎಂ.ಪಿ.ಹಾಲಯ್ಯ,ಅಬಕಾರಿ ಉಪ ನಿರೀಕ್ಷಕರು,ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ ಹಾಗೂ ಮಹಜರು ಸಾಕ್ಷಿದಾರರಾದ ಶ್ರೀ.ಧರ್ಣಪ್ಪ ಹೆಗ್ಡೆ, ಪಿಸಿ ನಂ:370, ಸಂಚಾರಿ ಪೊಲೀಸ್ ಠಾಣೆ,ಉಳ್ಳಾಲ, ಇವರುಗಳು ಪ್ರಾಸಿಕ್ಯೂಶನ್ ಸಾಕ್ಷಿಗಳಾಗಿ ಕ್ರಮವಾಗಿ ಪಿಡಬ್ಲ್ಯೂ–1, 2 ಮತ್ತು 3 ರಂತೆ ಈ ಪ್ರಾದಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ವಾಹನದ ಮಾಲೀಕರ ಹಾಗೂ ರಕ್ಷಣಾ ಪರ ವಕೀಲರ ನಿರಂತರ ಗೈರು ಹಾಜರಿನಿಂದ ಸಾಕ್ಷಿ ವಿಚಾರಣೆ ವೇಳೆಯಲ್ಲಿ ಪಾಟೀ ಸವಾಲು ನಡೆಸಲು ಸಾಧ್ಯವಾಗದೇ ಇರುವುದರಿಂದ ಅಭಿಯೋಜನ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ಸರ್ಕಾರಿ ಅಭಿಯೋಜಕರ ವಾದವನ್ನು ಅಲಿಸಿ ಅಂತಿಮ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾಧಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾದಾಂಶಗಳು

1) ದಿನಾಂಕ:9–2–2006 ರಂದು ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436 ರಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

3) ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ–1:

ಶ್ರೀ. ಕೃಷ್ಣ ನಾಯ್ಕ್, ಅಬಕಾರಿ ಉಪ ನಿರೀಕ್ಷಕರು,ಜಾರಿ ಮತ್ತು ತನಿಖೆ ಸುಳ್ಯ ಇವರು ದಿನಾಂಕ: 26–10–2006 ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ದಿನಾಂಕ:28–4–2006ರಂದು ಉಳ್ಳಾಲ ಪೊಲೀಸ್ ಠಾಣಾ ಅಧಿಕಾರಿಗಳು ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಮತ್ತು ವಶಪಡಿಸಿಕೊಂಡ ಸೊತ್ತುಗಳಾದ ಬಜಾಜ್ ಅಟೋ ರಿಕ್ಷಾ ಮತ್ತು ಕಳ್ಳಭಟ್ಟಿ ಸಾರಾಯಿ ತುಂಬಿದ 2 ಟ್ಯೂಬ್‌ಗಳು ಹಾಗೂ 6 ಮಾದರಿ ಸೀಸೆಗಳನ್ನು ನಮಗೆ ಹಸ್ತಾಂತರಿಸಿರುತ್ತಾರೆ. ವಶಪಡಿಸಿಕೊಂಡ ವಾಹನ ಆಟೋ ರಿಕ್ಷಾ ಸಂ:KA-19-A-8436 ಇದರ ಮಾಲೀಕತ್ವದ ಬಗ್ಗೆ ತಿಳಿದುಕೊಳ್ಳುವರೇ ಸಂಬಂಧಿಸಿದ ಸಾರಿಗೆ ಕಛೇರಿಗೆ ಪತ್ರ ಬರೆದೆನು. ದಿ:15–5–2006ರಂದು ಈ ಬಗ್ಗೆ ಒಂದು ವರದಿಯನ್ನು

ತಯಾರಿಸಿ ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿದೆನು. ಅದನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ಉಳ್ಳಾಲ ಠಾಣಾಧಿಕಾರಿಗಳು ಮಾದರಿ ಸೀಸೆಗಳನ್ನು ನಮಗೆ ಹಸ್ತಾಂತರಿಸುವ ಮೊದಲೇ ರಾಸಾಯನಿಕ ವಿಶ್ಲೇಷಕರಿಂದ ಪರೀಕ್ಷಿಸಿ ರಾಸಾಯನಿಕ ವಿಶ್ಲೇಷಕರ ವರದಿಯನ್ನು ಸಹಾ ನಮಗೆ ಹಸ್ತಾಂತರಿಸಿರುತ್ತಾರೆ. ಜೂನ್–2006ರಲ್ಲಿ ನನಗೆ ವರ್ಗಾವಣೆ ಆದೇಶ ಬಂದಿರುವುದರಿಂದ ಪ್ರಕರಣದ ಕಡತವನ್ನು ನನ್ನ ನಂತರದ ಅಧಿಕಾರಿ ಶ್ರೀ.ಎಂ.ಪಿ.ಹಾಲಯ್ಯ ಇವರಿಗೆ ಹಸ್ತಾಂತರಿಸಿರುತ್ತೇನೆ. ಉಳ್ಳಾಲ ಠಾಣಾ ಅಧಿಕಾರಿಗಳು ಪ್ರಕರಣದಲ್ಲಿ ತಯಾರಿಸಿದ ಪ್ರಥಮ ಮಾಹಿತಿ ವರದಿಯ ಪ್ರತಿಯನ್ನು ನೋಡಿದೆನು. ಅದನ್ನು ನಿಶಾನೆ–ಪಿ2 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಉಳ್ಳಾಲ ಠಾಣಾಧಿಕಾರಿಗಳು ತಯಾರಿಸಿದ ಮಹಜರಿನ ಛಾಯಾ ಪ್ರತಿಯನ್ನು ಈಗ ನೋಡಿದೆನು. ಸದ್ರಿ ದಾಖಲೆಯನ್ನು ಎದುರುದಾರರ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಶಾನೆ ಪಿ–3 ಎಂದು ಗುರುತಿಸಲಾಯಿತು. ರಾಸಾಯನಿಕ ವಿಶ್ಲೇಷಕರ ವರದಿಯ ಪ್ರತಿಯನ್ನು ನೋಡಿದೆನು. ಅದನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಉಳ್ಳಾಲ ಠಾಣಾಧಿಕಾರಿಗಳು ತಯಾರಿಸಿದ ಮಹಜರಿನ ಛಾಯಾ ಪ್ರತಿಯನ್ನು ಈಗ ನೋಡಿದೆನು. ಸದ್ರಿ ದಾಖಲೆಯನ್ನು ಎದುರುದಾರರ ಪರ ವಕೀಲರ ಅಕ್ಷೇಪಣೆ ಮೇರೆಗೆ ನಿಶಾನೆ ಪಿ–3 ಎಂದು ಗುರುತಿಸಲಾಯಿತು.ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಆಟೋ ರಿಕ್ಷಾ KA-19-A-8436ಕ್ಕೆ ಸಂಬಂಧಿಸಿದ ಬಿ ವರದಿಯನ್ನು ಪಡೆದುಕೊಂಡಿದ್ದು, ಅದರ ಛಾಯಾ ಪ್ರತಿಯನ್ನು ನೋಡಿದೆನು. ಸದ್ರಿ ದಾಖಲೆಯನ್ನು ಎದುರುದಾರರ ವಕೀಲರ ಅಕ್ಷೇಪಣೆ ಮೇರೆಗೆ ನಿಶಾನೆ ಪಿ–5 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ರಕ್ಷಣಾ ಪರ ವಕೀಲರಾದ ಶ್ರೀ.ವಿಜಯ ಕುಮಾರ್ ಇವರ ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸುತ್ತಾ ಈ ಪ್ರಕರಣವು ಪ್ರಥಮ ಬಾರಿಗೆ ಉಳ್ಳಾಲ ಪೊಲೀಸರಿಂದ ನನಗೆ 28–4–2006ರಂದು ಹಸ್ತಾಂತರವಾಗಿರುತ್ತದೆ. ದಿ:28–4–06ರ ಮೊದಲು ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ನಾನು ಈ ಪ್ರಕರಣದ ಬಗ್ಗೆ ದಿನಾಂಕ:15–5–2006ರಂದು ಪ್ರಥಮ ಬಾರಿಗೆ ಪೊಲೀಸರು ಮಾನ್ಯ ಅಧಿಕೃತ ಅಧಿಕಾರಿಗಳಿಗೆ ಈ ಪ್ರಕರಣದ ಬಗ್ಗೆ ವರದಿ ಸಲ್ಲಿಸಿರುತ್ತಾರೆ.

ಉಳ್ಳಾಲ ಪೊಲೀಸರು ನನಗೆ ದಿ:28–4–2006ರಂದು ಆಟೋ ರಿಕ್ಷಾ, 6 ರಾಸಾಯನಿಕ ಪರೀಕ್ಷೆಗೆ ಒಳಪಟ್ಟ ಮಾದರಿ ಸೀಸೆಗಳು ಹಾಗೂ ಕಳ್ಳಭಟ್ಟಿ ಸಾರಾಯಿಯನ್ನು ತುಂಬಿಸಿ ಸಾಗಿಸಿದ್ದಾರೆ ಎನ್ನಲಾದ ರಬ್ಬರ್ ಟ್ಯೂಬ್‌ಗಳನ್ನು ಕಳುಹಿಸಿಕೊಟ್ಟಿದ್ದರು. ಸದ್ರಿ ಟ್ಯೂಬ್‌ಗಳಲ್ಲಿ ಸುಮಾರು 50 ಲೀಟರಿನಷ್ಟು ಸಾರಾಯಿ ಇತ್ತು. ಸದ್ರಿ ಟ್ಯೂಬ್‌ಗಳಿಂದ ಮಾದರಿ ಸೀಸೆಗೆ ಯಾರು,ಯಾವಾಗ ಯಾವ ರೀತಿಯಲ್ಲಿ ಸಾರಾಯಿ ತೆಗೆದಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಮೇಲೆ ತಿಳಿಸಿದ ಸೊತ್ತುಗಳನ್ನು ಪೊಲೀಸರಿಂದ ಪಡೆದು ಸಾರಿಗೆ ಇಲಾಖೆಯಿಂದ ವಾಹನ ಮಾಲೀಕತ್ವದ ಬಗ್ಗೆ ದೃಡೀಕರಣ ಕೋರಿ ಪತ್ರ ಪಡೆದಿರುತ್ತೇನೆ. ಹಾಗೂ ಇದರ ಹೊರತಾಗಿ ಯಾವುದೇ ತನಿಖಾ ಕಾರ್ಯವನ್ನು ಮಾಡಿರುವುದಿಲ್ಲ. ನಾನು ಮಾದರಿ ಸೀಸೆಗಳನ್ನಾಗಲೀ, ರಬ್ಬರ್ ಟ್ಯೂಬ್‌ಗಳಲ್ಲಿದ್ದ ಕಳ್ಳಭಟ್ಟಿ ಸಾರಾಯಿಯನ್ನಾಗಲೀ ಸ್ವೀಕರಿಸಿಲ್ಲ ಅಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸಿರುತ್ತಾರೆ.

ಪ್ರಾ.ಸಾ–2:

ಶ್ರೀ.ಎಂ.ಪಿ.ಹಾಲಯ್ಯ, ಅಬಕಾರಿ ಉಪ ನಿರೀಕ್ಷಕರು,ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ ಇವರು ದಿ:22–3–2007 ರಂದು ಪ್ರಾದಿಕಾರದ ಮುಂದೆ ಸಾಕ್ಷಿ ನೀಡುತ್ತಾ, ದಿನಾಂಕ:2–6–2006ರಿಂದ ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪೂರ್ವದ ಅಬಕಾರಿ ಉಪ ನಿರೀಕ್ಷಕರಾದ ಶ್ರೀ.ಕೃಷ್ಣ ನಾಯ್ಕ್ ಅವರಿಂದ ಕಡತ ಹಾಗೂ ಸೊತ್ತುಗಳನ್ನು ಪಡೆದುಕೊಂಡೆನು. ಪ್ರಕರಣದಲ್ಲಿ ತನಿಖೆ ಮುಂದುವರೆದಿದ್ದು, ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲು ಬಾಕಿ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು: ಅರ್ಜಿದಾರರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಪಾಟೀಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಾ.ಸಾ–3:

ಶ್ರೀ.ಧರ್ನಪ್ಪ ಹೆಗ್ಡೆ, ಪಿ.ಸಿ–370 ,ಸಂಚಾರಿ ಪೊಲೀಸ್ ಠಾಣೆ ಇವರು ದಿ:19–1–2010 ರಂದು ಪ್ರಾದಿಕಾರದ ಮುಂದೆ ಸಾಕ್ಷಿ ನೀಡುತ್ತಾ, ನಾನು ದಿನಾಂಕ:2–6–2006ರಿಂದ ದಿ:2–7–2009 ರವರೆಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಕಾನ್ಸ್‌ಟೇಬಲ್ ಆಗಿ ಕೆಲಸ ನಿರ್ವಹಿಸುತ್ತಿದ್ದೆ. ದಿ:9–2–2006ರಂದು ನಾನು 10–00 ಗಂಟೆ ರಾತ್ರಿ ಸಮಯಕ್ಕೆ ಠಾಣೆಯಲ್ಲಿರುವಾಗ ಪಿಎಸ್‌ಐರವರಿಗೆ ಬಂದ ವರ್ತಮಾನದ ಮೇರೆಗೆ ನನ್ನನ್ನು ಮತ್ತು ಇತರ ಸಿಬ್ಬಂಧಿಯನ್ನು ಇಲಾಖಾ ಜೀಪಿನಲ್ಲಿ ಕೋಟೆಕಾರು ಗ್ರಾಮ ಬಗಂಬಿಲ ಪೆನ್ನಿ ಪ್ಯಾಕ್ಟರಿ ಬಳಿ ಕರೆದುಕೊಂಡು ಹೋಗಿ ಅಲ್ಲಿ ನಮಗೆ ಬಂದ ವರ್ತಮಾನದ ಬಗ್ಗೆ ರಸ್ತೆ ಬದಿ ಹೊಂಚು ಹಾಕುತ್ತಿರುವಾಗ ರಾತ್ರಿ 9–45 ಗಂಟೆ ಸಮಯ ಬಗಂಬಿಲ ಗುಡ್ಡೆ ಕಡೆಯಿಂದ ಬರುತ್ತಿದ್ದ ಒಂದು ಅಟೋ ರಿಕ್ಷಾವನ್ನು ಪಿಎಸ್‌ಐರವರು ತಡೆದು ನಿಲ್ಲಿಸಿದಾಗ ರಿಕ್ಷಾದಲ್ಲಿದ್ದ ಒಬ್ಬ ವ್ಯಕ್ತಿಯು ರಿಕ್ಷಾದಿಂದ ಹಾರಿ ಹೋಗಿ ತಪ್ಪಿಸಿಕೊಂಡಿದ್ದು,ರಿಕ್ಷಾ ಚಾಲಕನನ್ನು ಪಿ.ಎಸ್.ಐರವರು ವಶಪಡಿಸಿ ಆತನ ಹೆಸರು,ವಿಳಾಸ ಕೇಳಲಾಗಿ, ಹೆನ್ರಿ ಡಿಸೋಜ, ಉಳ್ಳಾಲ ಗ್ರಾಮ ಎಂದು ತಿಳಿಸಿರುತ್ತಾನೆ. ಹಾಗೂ ಓಡಿ ಹೋದವನ ಹೆಸರು ವಿಳಾಸ ವಿಚಾರಿಸಿದಾಗ ಜಪ್ಪಿನ ಮೊಗ್ರು ಗ್ರಾಮದ ಮೆಲ್ವಿನ್

ಡಿಸೋಜ ಎಂದು ತಿಳಿಸಿರುತ್ತಾನೆ. ರಿಕ್ಷಾ ಚಾಲಕನಲ್ಲಿ ರಿಕ್ಷಾದಲ್ಲಿ ಏನಿದೆ ಎಂದು ವಿಚಾರಿಸಿದಾಗ ಅವನು ಕಳ್ಳಭಟ್ಟಿ ಸಾರಾಯಿಯನ್ನು ಮಾರಾಟ ಮಾಡಲು ಕೊಂಡು ಹೋಗುತ್ತಿರುವುದಾಗಿ ತಿಳಿದ್ದು ರಿಕ್ಷಾ ಪರಿಶೀಲಿಸಿದಾಗ ಸದ್ರಿ ರಿಕ್ಷಾದಲ್ಲಿ 2 ಟಯರ್ ಟ್ಯೂಬ್‌ಗಳಲ್ಲಿ 50 ಲೀಟರುನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಪತ್ತೆಯಾಗಿ,ಸದ್ರಿ ಕಳ್ಳಭಟ್ಟಿ ಸಾರಾಯಿ ಬಗ್ಗೆ ಯಾವುದೇ ದಾಖಲಾತಿ ಅಥವಾ ಪರವಾನಗಿ ಇಲ್ಲವೆಂದು ತಿಳಿಸಿರುತ್ತಾರೆ.ಆದ್ದರಿಂದ ಸದ್ರಿ ಟ್ಯೂಬಿನಲ್ಲಿದ್ದ ಸಾರಾಯಿ ಪೈಕಿ 750ಎಂಎಲ್‌ನ 6 ಬಾಟಲಿಗಳಲ್ಲಿ ಸಾರಾಯಿಯನ್ನು ಸ್ಯಾಂಪಲ್‌ಗಾಗಿ ತೆಗೆದಿರಿಸಿ ಮೊಹರು ಕ್ರಮ ಜರುಗಿಸಿ ಅವುಗಳಿಗೆ ಎ 1 ರಿಂದ ಎ 6ವರೆಗೆ ಕ್ರ.ಸಂ ನೀಡಿ ಪಂಚರ ಸಹಿ ಇರುವ ಲೇಬಲ್ ಅಂಟಿಸಲಾಯಿತು. ಹಾಗೂ ಟಯರ್ ಟ್ಯೂಬ್‌ಗಳಿಗೆ 7 ಮತ್ತು 8 ಎಂದು ಕ್ರಮ ಸಂಖ್ಯೆ ನೀಡಲಾಯಿತು. ಸದ್ರಿ ಸಾರಾಯಿ ಸಾಗಿಸುತ್ತಿದ್ದ ರಿಕ್ಷಾ KA-19-A-8436 ಆಗಿರುತ್ತದೆ. ಸದ್ರಿ ರಿಕ್ಷಾ ಹಾಗೂ ಸೊತ್ತುಗಳನ್ನು ಜಪ್ತುಪಡಿಸಿಕೊಂಡು, ಸ್ಥಳದಲ್ಲಿ ಪಂಚರ ಸಮಕ್ಷಮ ರಾತ್ರಿ 10 ರಿಂದ 11 ಗಂಟೆ ತನಕ ಜೀಪಿನ ಹೆಡ್ ಲೈಟ್ ಬೆಳಕಿನಿಂದ ಮಹಜರು ತಯಾರಿಸಲಾಗಿರುತ್ತದೆ. ಸ್ಥಳದಲ್ಲಿ ತಯಾರಿಸಿದ ಮಹಜರನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ–3 ಎಂದು ಸಾಕ್ಷಿ ಸಹಿಯನ್ನು ನಿಶಾನೆ ಪಿ–3ಎ ಎಂದು ಗುರುತಿಸಲಾಯಿತು. ನಂತರ ಸ್ವಾಧೀನ ಪಡಿಸಿದ ಸೊತ್ತುಗಳು ಹಾಗೂ ದಸ್ತಗಿರಿಯಾದ ಆರೋಪಿ ಜೊತೆ ನಾವು ಠಾಣೆಗೆ ಹೋಗಿದ್ದು, ಪಿ.ಎಸ್.ಐರವರು ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿರುತ್ತಾರೆ. ಆ ದಿನ ನಾವು ಸ್ವಾಧೀನಪಡಿಸಿದ ರಿಕ್ಷಾ ಮತ್ತು ಇನ್ನಿತರ ಸಾರಾಯಿ ತುಂಬಿದ ಟ್ಯೂಬ್‌ಗಳು ಹಾಗೂ ಸ್ಯಾಂಪಲ್ ತಯಾರಿಸಿದ ಬಾಟಲುಗಳನ್ನು ನೋಡಿದರೆ ಗುರುತಿಸಬಲ್ಲೆ ಹಾಗೂ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ರಿಕ್ಷಾದಲ್ಲಿ ಅಕ್ರಮ ಸಾರಾಯಿ ಸಾಗಾಟ ಮಾಡಿದ ಕಾರಣ ಸದ್ರಿ ರಿಕ್ಷಾವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನಾನು ಪ್ರಾಧಿಕಾರದ ಮುಂದೆ ವಿನಂತಿಸಿಕೊಳ್ಳುತ್ತಿದ್ದೇನೆ. ತನಿಖೆ ಸಮಯ ನಾನು ಪಿಎಸ್.ಐಗೆ ಹೇಳಿಕೆ ನೀಡಿದ್ದು,ಸದ್ರಿ ಹೇಳಿಕೆಯನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಎದುರುದಾರರು ಹಾಗೂ ಅವರ ಪರ ವಕೀಲರು ಹಾಜರಿಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸ–1, 2 ಮತ್ತು 3 ರವರ ಸಾಕ್ಷಿ ವಿಚಾರಣೆಯನ್ನು ಹಾಗೂ ವಿಚಾರಣೆ ವೇಳೆಯಲ್ಲಿ ವಾಹನದ ಮಾಲೀಕರಾಗಲೀ, ಮಾಲೀಕರ ಪರ ರಕ್ಷಣಾ ವಕೀಲರಾಗಲೀ ಹಾಜರಾಗದೇ ಇರುವುದರಿಂದ ಅಭಿಯೋಗದ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿ ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿ ಮತ್ತು ಮಹಜರು ಸಾಕ್ಷಿದಾರರ ಹಾಗೂ ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಿ:9–2–2006 ರಂದು ಜಪ್ತು ಪಡಿಸಿರುವ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436ರಲ್ಲಿ ಎರಡು ರಬ್ಬರ್ ಟ್ಯೂಬ್‌ಗಳಲ್ಲಿ ತಲಾ 25 ಲೀಟರಿನಂತೆ ಒಟ್ಟು 50 ಲೀಟರು ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸಾಗಾಟ ಮಾಡಿರುವುದನ್ನು, ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ವಶಪಡಿಸಿಕೊಂಡಿದ್ದು, ಬಜಾಜ್ ಅಟೋ ರಿಕ್ಷಾ ನೊಂದಣಿ ಸಂ: KA-19A-8436ನ್ನು ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆಗೆ ಬಳಸಿರುವುದು ಪ್ರಾಧಿಕಾರದ ಮುಂದೆ ವಿಚಾರಣೆಗೆ ಒಳಪಟ್ಟಿರುವ ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಅಕ್ರಮ ಕಳ್ಳಭಟ್ಟಿ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ಉತ್ತರಿಸುತ್ತ ವಾಹನವನ್ನು ಯಾವುದೇ ಅಕ್ರಮಕ್ಕೆ ಬಳಸಿರುವುದಿಲ್ಲ ಮತ್ತು ಈ ಅಕ್ರಮ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬ ಬಗ್ಗೆ ಲಿಖಿತ ಉತ್ತರ ನೀಡಿರುವರಾದರೂ ಇದನ್ನು ಸಮರ್ಥಿಸಿಕೊಳ್ಳುವ ಬಗ್ಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಸದ್ರಿ ವಾಹನದಿಂದ ದಿ:09–02–2006ರಂದು ಜಪ್ತುಪಡಿಸಲಾಗಿರುವ 50.000ಲೀಟರ್ ಕಳ್ಳಭಟ್ಟಿ ಸಾರಾಯಿ ಹೇಗೆ ಸಾಗಿಸಲು ಕಾರಣ ಹಾಗೂ ಅದು ಅವರ ತಿಳುವಳಿಕೆಗೆ ಬಾರದೇ ನಡೆದಿರುವ ಬಗ್ಗೆ ಸೂಕ್ತ ಹಾಗೂ ಸಮಂಜಸ ಸಾಕ್ಷ್ಯಾಧಾರಗಳನ್ನು ಪ್ರಾಧಿಕಾರದ ಮುಂದೆ ಒಪ್ಪಿಸಲು ವಿಫಲರಾಗಿರುತ್ತಾರೆ. ಹಾಗೂ ಈ ಪ್ರಾಧಿಕಾರದಿಂದ ಸಾಕ್ಷಿ ವಿಚಾರಣೆಗೆ ನಿಗದಿಪಡಿಸಿದ ದಿನಾಂಕಗಳಂದು ವಾಹನದ ಮಾಲೀಕರಾಗಲೀ ಅವರ ಪರ ವಕೀಲರಾಗಲೀ ಹಾಜರಾಗದೇ ಇದ್ದು ಮಾಲೀಕರು ತಮ್ಮ ನಿರಾಪರಾಧಿತ್ವವನ್ನು ಸಾಬೀತುಪಡಿಸುವಲ್ಲಿ ಮುತುವರ್ಜಿ ವಹಿಸದೇ ಇರುವುದನ್ನು ಗಮನಿಸಿದಾಗ ಈ ಅಕ್ರಮವು ವಾಹನದ ಮಾಲೀಕರ ತಿಳುವಳಿಕೆಯಿಂದಲೇ ನಡೆದಿದೆ ಎಂಬುದು ಪ್ರಾಧಿಕಾರಕ್ಕೆ ಮನದಟ್ಟಾಗಿರುವುದರಿಂದ ಎರಡನೆಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಬಜಾಜ್ ಅಟೋ ರಿಕ್ಷಾವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರದಲ್ಲಿ ನಡೆಸಲಾದ ವಿಚಾರಣೆಯಲ್ಲಿ ಯೋಗ್ಯವೆಂದು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಬಜಾಜ್ ಆಟೋ ರಿಕ್ಷಾ ನೊಂದಣಿ ಸಂ: KA-19A-8436 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಪೊಲೀಸ್ ಉಪ ನಿರೀಕ್ಷಕರು (ಕಾ.ಸು) ಉಳ್ಳಾಲ ಪೊಲೀಸ್ ಠಾಣೆ,ಉಳ್ಳಾಲ ಇವರ ತಕ್ಷೀರು ಸಂ:41/2006 ದಿ:9–2–2006 ರಲ್ಲಿ ಜಪ್ತು ಪಡಿಸಿರುವ ಬಜಾಜ್ ಅಟೋ ರಿಕ್ಷಾ ನೊಂದಣಿ ಸಂ: KA-19A-8436 (ಚಾಸೀಸ್ ನಂ:24FBJL79503 ಮತ್ತು ಇಂಜಿನ್ ನಂ:AEMBJL 98208) ನ್ನು ನಿಯಮ 43 ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ: 22–01–2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–I : ಶ್ರೀ ಕೃಷ್ಣ ನಾಯ್ಕ್, ಅಬಕಾರಿ ಉಪ ನಿರೀಕ್ಷಕರು ಜಾರಿ ಮತ್ತು ತನಿಖೆ ಸುಳ್ಯ ತಾಲೂಕು

ಪ್ರಾ.ಸಾ–2: ಶ್ರೀ.ಎಂ.ಪಿ.ಹಾಲಯ್ಯ, ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ಜಾರಿ ಮತ್ತು ತನಿಖೆ.

ಪ್ರಾ.ಸಾ–3: ಶ್ರೀ . ಧರ್ನಪ್ಪ ಹೆಗ್ಡೆ, ಪಿ.ಸಿ–370 ಸಂಚಾರಿ ಪೊಲೀಸ್ ಠಾಣೆ, ಮಂಗಳೂರು.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ–I: ಅಧಿಕೃತ ಅಧಿಕಾರಿಗಳಿಗೆ ದಿ:15–5–2006ರಂದು ಬರೆದ ಪತ್ರ
ನಿಶಾನೆ ಪಿ–IA : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–2 : ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ–3 : ಮಹಜರು ಪ್ರತಿ
ನಿಶಾನೆ ಪಿ–3ಎ : ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–4 : ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–5 : ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ–6 : ಸಾಕ್ಷಿದಾರರ ಹೇಳಿಕೆ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

–ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.211

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/147/ಡಿಟಿಸಿಆರ್/2008–09, ದಿನಾಂಕ:20ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು,
ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ,ಪುತ್ತೂರು.

ಆರೋಪಿಗಳು:

ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:

ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:15–11–2008 ರಂದು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಕೊಂದಲಕಾನ ಎಂಬಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಕೂಡಿಕೊಂಡು ವಾಹನ ತಪಾಸಣೆ ಹಾಗೂ ಗ್ರಾಮ ಭೇಟಿ ಮಾಡುತ್ತಿರುವ ಸಮಯದಲ್ಲಿ ಸಂಜೆ ಸುಮಾರು 5–30 ಗಂಟೆಗೆ ಪುತ್ತೂರು ಕಡೆಯಿಂದ ಪಾಣಾಜೆ ಅತ್ತ ಕಡೆಗೆ ಹಾದುಹೋಗುವ ಸಾರ್ವಜನಿಕ ಡಾಮಾರು ರಸ್ತೆಯಲ್ಲಿ ಒಂದು ಕಪ್ಪು ಬಣ್ಣದ ಇಂಡಿಕಾ ಕಾರನ್ನು ಅದರ ಚಾಲಕ ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿರುವುದನ್ನು ಕಂಡು ಸಂಶಯದ ಮೇರೆಗೆ ಸದರಿ ಕಾರನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಕಾರಿನ ಚಾಲಕರು ಕಾರನ್ನು ನಿಲ್ಲಿಸದೆ ಅತೀ ವೇಗವಾಗಿ ಕೊಂದಾಲಕಾನ ಕಡೆಯಿಂದ ಹಾದುಹೋಗುವ ರಸ್ತೆಗೆ ತಿರುಗಿಸಿ ಚಲಾಯಿಸಿದರು. ವಾಹನವನ್ನು ಅತೀ ವೇಗವಾಗಿ ಚಲಾಯಿಸಿದ ಪರಿಣಾಮ ಕಾರಿನ ಹಿಂಬದಿಯ ಎಡಭಾಗದ ಇಂಡಿಕೇಟರ್‌ಗಳು ಹಾಗೂ ಮುಂಭಾಗದ ಎಡಬದಿಯ ರಸ್ತೆಯ ಬದಿಯಲ್ಲಿರುವ ಮೈಲುಕಲ್ಲಿಗೆ ಡಿಕ್ಕಿ ಹೊಡೆದ ಸಂದರ್ಭದಲ್ಲಿ ಕಾರಿನ ಚಾಲಕರು ಸದರಿ ಕಾರನ್ನು ಅಲ್ಲಿಯೇ ಬಿಟ್ಟು ಕಾಡು ಪ್ರದೇಶದಲ್ಲಿ ಓಡಿ ಪರಾರಿಯಾದರು. ಅವರನ್ನು ಬೆನ್ನಟ್ಟಿದರೂ ಹಿಡಿಯಲು ಸಾಧ್ಯವಾಗಲಿಲ್ಲ. ಸದರಿ ಕಾರನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಕಾರಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ಕಂಡು ಬರಲಿಲ್ಲ. ಕಾರಿನ ಒಳಗಡೆ ಸಾರಾಯಿ ಪ್ಯಾಕೆಟ್‌ಗಳಿರುವುದು ಕಂಡು ಬಂತು. ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ರಹದಾರಿ ಪತ್ರಗಳಿಲ್ಲದೆ ಅಕ್ರಮವಾಗಿ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಖಚಿತವಾಗಿರುವುದರಿಂದ ಸದರಿ ಸಾರಾಯಿ ಪ್ಯಾಕೆಟ್‌ಗಳನ್ನು ಹಾಗೂ ಕಾರನ್ನು ವಶಪಡಿಸಿಕೊಂಡು ಸದರಿ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ ಸಾರಾಯಿ ಸ್ಯಾಚೆಟ್‌ಗಳ ಪಾಲಿಥಿನ್ ಚೀಲಗಳನ್ನು ಹೊರಗೆ ತೆಗೆದು ನೋಡಲಾಗಿ, 13 ಬಿಳಿ ಪಾಲಿಥಿನ್ ಚೀಲಗಳಲ್ಲಿ ಸಾರಾಯಿ ತುಂಬಿದ ಸ್ಯಾಚೆಟ್‌ಗಳಿರುವುದು ಕಂಡು ಬಂತು. 12 ಪಾಲಿಥಿನ್ ಚೀಲಗಳಲ್ಲಿ ತಲಾ 500 ರಂತೆ 100 ಎಂ.ಎಲ್.ನ ಸಾರಾಯಿ ತುಂಬಿದ ಸ್ಯಾಚೆಟ್‌ಗಳು ಹಾಗೂ ಇನ್ನೊಂದು ಪಾಲಿಥಿನ್ ಚೀಲದಲ್ಲಿ 300 ರಂತೆ 100 ಎಂ.ಎಲ್.ನ ಸಾರಾಯಿ ಸ್ಯಾಚೆಟ್‌ಗಳು ಒಟ್ಟು 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳು ದಾಸ್ತಾನಿರುವುದು ಪತ್ತೆಯಾದವು. ಪ್ರತಿಯೊಂದು ಸಾರಾಯಿ ಸ್ಯಾಚೆಟ್‌ಗಳ ಮೇಲೆ 100 ಎಂ.ಎಲ್.ನ ಸಾರಾಯಿ 35 ಡಿಗ್ರಿ ಯು.ಪಿ., ಜೆ.ಪಿ.ಡಿಸ್ಟಿಲರಿ(ಪ್ರೈ) ಲಿಮಿಟೆಡ್ ತುಮಕೂರು, ಮದ್ಯಪಾನ ಆರೋಗ್ಯಕ್ಕೆ ಹಾನಿಕಾರ ಮತ್ತು ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಲ್ಪಟ್ಟಿದೆ ಎಂದು ಬರೆದಿರುತ್ತದೆ. ಪ್ರತಿಯೊಂದು ಪಾಲಿಥಿನ್ ಚೀಲದಿಂದ ತಲಾ 5 ರಂತೆ ಸಾರಾಯಿ ಸ್ಯಾಚೆಟ್‌ಗಳ ಪ್ಯಾಕೆಟ್‌ಗಳನ್ನು ಸ್ಯಾಂಪಲ್‌ಗಾಗಿ ತೆಗೆದು ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಹೊಲಿದು, ಅವುಗಳಿಗೆ ಅರಗು ಹಾಕಿ ಎಸ್.ಹೆಚ್.ಓ ಸೀಲ್ ಮಾಡಿ ಪಂಚರ ಹಾಗೂ ಸಿಬ್ಬಂದಿಯವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಅವುಗಳಿಗೆ ಕ್ರಮ ಸಂಖ್ಯೆಯನ್ನು ನೀಡಲಾಯಿತು. ನಂತರ ಸಾಗಾಟಕ್ಕೆ ಬಳಸಿದ ಇಂಡಿಕಾ ಕಂಪೆನಿಯ ಕಾರನ್ನು ಪರಿಶೀಸಿದಾಗ, ಅದರ ಹಿಂಭಾಗ ಮತ್ತು ಮುಂಭಾಗದಲ್ಲಿ ಕಪ್ಪು ಅಕ್ಷರದಲ್ಲಿ ಕೆಎ–16–ಎಂ–3313 ಎಂದು ನೋಂದಣಿ ಸಂಖ್ಯೆ ಬರೆದಿರುತ್ತದೆ. ಕಾರಿನ ಇಂಜೀನ್ ನಂ: 4755149ಇಟಿರ್ಝೆಡ್‌ಪಿ–63881 ಮತ್ತು ಚಾಸೀಸ್ ನಂ:600208ಇಟಿರ್ಝೆಡ್ ಪಿ70718 ಆಗಿದ್ದು, ಟಿವೈಪಿ475ಎಸ್‌ಐ 49 ಆಗಿರುತ್ತದೆ. ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಮತ್ತು ಸ್ಯಾಂಪಲ್‌ಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್‌ಬಂದಿ, ತಕ್ಷೀರು ನಡೆದ ಸ್ಥಳ ಮತ್ತು ದಿನಾಂಕವನ್ನು ನಮೂದಿಸಿದ್ದು ಮತ್ತು ಮಹಜರಿಗೆ ಪಂಚರ ಹಾಗೂ ಸಿಬ್ಬಂದಿಯವರ ಸಹಿಯನ್ನು ಪಡೆದುಕೊಂಡು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 15, 32, 34 ಮತ್ತು 43ಎ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಓಡಿಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ:117/2008 ದಿ:15–11–2008 ರಂತೆ ಪ್ರಕರಣವನ್ನು ನೋಂದಾಯಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಮತ್ತು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಮತ್ತು ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ಈ ಪ್ರಾಧಿಕಾರಕ್ಕೆ ದಿನಾಂಕ:17–11–2008 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/147/ಡಿಟಿಸಿಆರ್/2008–09 ದಿ:20–11–2008 ರಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಮತ್ತು ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಮುಂದಿನ ಮುಟ್ಟುಗೋಲು ನಡವಳಿ ನಡೆಸುವ ಬಗ್ಗೆ ತನಿಖೆಗಾಗಿ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ದಿ:10–2–2009 ರಂದು ಹಸ್ತಾಂತರಿಸಿರುತ್ತಾರೆ.

ಶ್ರೀ.ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:14–5–2009 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರಿನ ನೋಂದಣಿ ಮಾಲೀಕನಾಗಿದ್ದು ತನ್ನ ವಾಹನವು ಕಳ್ಳತನವಾಗಿದ್ದು, ಈ ಬಗ್ಗೆ ತಾಳಿಪರಂ ಪೊಲೀಸ್ ಠಾಣೆ, ಕಣ್ಣೂರು ಜಿಲ್ಲೆ, ಕೇರಳ ರಾಜ್ಯ ಇವರು ಪ್ರಕರಣ ಸಂಖ್ಯೆ:175/2008 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ವಾಹನದ ಆರ್.ಸಿ. ಪ್ರತಿಯೊಂದಿಗೆ ವಾಹನವನ್ನು ಮಧ್ಯಂತರ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಅರ್ಜಿಯನ್ನು ಪರಿಶೀಲಿಸುವ ಸಲುವಾಗಿ ತನಿಖಾಧಿಕಾರಿಯಾದ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ಈ ಪ್ರಾಧಿಕಾರದಿಂದ ದಿ:18–5–2009 ರಂದು ಅರ್ಜಿಯ ಕುರಿತು ಕ್ರಮ ಜರುಗಿಸುವ ಬಗ್ಗೆ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರಿಂದ ವಾಹನದ ಮೌಲ್ಯಮಾಪನ ವರದಿಯನ್ನು ಪಡೆದು ಒಪ್ಪಿಸುವಂತೆ ಸೂಚಿಸಲಾಗಿದ್ದು, ಅದರಂತೆ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ: ಆರ್‌ಸಿಆರ್/ಸಿಆರ್‌ಎಂ/44/2008–09 ದಿ:15–6–2009 ರ ವರದಿಯಲ್ಲಿ, ಮೋಟಾರು ವಾಹನ ನಿರೀಕ್ಷಕರು, ಪುತ್ತೂರು ಇವರು ಇಂಡಿಕಾ ಕಾರಿನ ಈಗಿನ ಸ್ಥಿತಿಗತಿಯ ಮಾರುಕಟ್ಟೆ ಮೌಲ್ಯ ರೂ.1,20,000/– ಗಳಾಗಬಹುದೆಂದು ದೃಢೀಕರಣ ಪತ್ರವನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನ ನಿರೀಕ್ಷಕರು, ಪುತ್ತೂರು ಇವರು ಸಲ್ಲಿಸಿದ ಮೌಲ್ಯಮಾಪನ ವರದಿಯಂತೆ ವಾಹನದ ಮಾಲೀಕರಾದ ಶ್ರೀ.ಶಬೀರ್.ಕೆ.ಪಿ ಇವರಿಗೆ ರೂ.1,20,000/– ಮೌಲ್ಯದ ಬ್ಯಾಂಕ್ ಗ್ಯಾರಂಟಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲಾಗುವುದೆಂದು ಈ ಪ್ರಾಧಿಕಾರದಿಂದ ದಿ:14–9–2009 ರಂದು ನೋಟೀಸುಗಳನ್ನು ಅರ್ಜಿದಾರರಿಗೂ ಹಾಗೂ ಅವರ ಪರ ವಕೀಲರಿಗೂ ನೀಡಲಾಗಿದ್ದು, ಆರ್.ಸಿ. ಮಾಲೀಕರಾದ ಶ್ರೀ.ಶಬೀರ್.ಕೆ.ಪಿ ಇವರು ಸದ್ರಿ ನೋಟೀಸನ್ನು ದಿ:6–10–2009 ರಂದು ಸ್ವೀಕರಿಸಿರುತ್ತಾರೆ. ಆದರೆ ಇಂದಿನವರೆಗೆ ಅವರು ಈ ಪ್ರಾಧಿಕಾರಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ನೀಡಿರುವುದಿಲ್ಲ ಹಾಗೂ ನೋಟೀಸಿಗೆ ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ.

ವಾಹನ ನೋಂದಣಿ ಮಾಲೀಕರಾದ ಶ್ರೀ.ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ ಮತ್ತು ಅವರ ಪರ ವಕೀಲರಿಗೆ ಕರ್ನಾಟಕ ಅಬಕಾರಿ ಕಾಯಿದೆ 43(ಬಿ) ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ದಿ:25–9–2009 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ನೋಟೀಸುಗಳು ಸ್ವೀಕೃತಿ ಅಂಚೆ ಮೂಲಕ ತಲುಪಿದ್ದು, ಆದರೆ ಕಾರಣ ಕೇಳಿ ನೋಟೀಸಿಗೆ ಅರ್ಜಿದಾರರಾಗಲಿ, ಅವರ ಪರ ವಕೀಲರಾಗಲಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ತನಿಖಾ ವರದಿ ಸಂಖ್ಯೆ: ಆರ್‌ಸಿಆರ್ /ಸಿಆರ್‌ಎಂ/44/2008–09 ದಿ:25–7–2009 ರ ವರದಿಯಲ್ಲಿ ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ತಕ್ಷೀರಿಗೆ ಸಂಬಂಧಿಸಿದ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ: ಇ–567 ದಿ:6–1–2009 ರಲ್ಲಿ, ಸಾರಾಯಿ ಮದ್ಯಸಾರ ಪ್ರಮಾಣ ಶೇ.26 ಇರುವುದಾಗಿ ದೃಡೀಕರಣ ಪತ್ರ ನೀಡಿರುತ್ತಾರೆ. ಸದರಿ ಸಾರಾಯಿಯನ್ನು ಮತ್ತು ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸಾರಾಯಿಯನ್ನು ನಾಶಪಡಿಸಲು ಹಾಗೂ ವಾಹನವನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಆದೇಶ ನೀಡಬೇಕೆಂದು ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ/147/ಡಿಟಿಸಿಆರ್/2008–09 ದಿ:31–7–2009 ರ ಆದೇಶದಲ್ಲಿ ಮೊಕದ್ದಮೆಯಲ್ಲಿ ಜಪ್ತುಪಡಿಸಿದ ವಾಹನದ ಮುಟ್ಟುಗೋಲು ನಡವಳಿ ಪ್ರಕ್ರಿಯೆಯನ್ನು ಕಾಯ್ದಿರಿಸಿ ಉಳಿದ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರದ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಆಯುಕ್ತರು ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ:12–9–2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ನಾಶಪಡಿಸಲು ಆದೇಶ ನೀಡಲಾಗಿದೆ. ಸದರಿ ಆದೇಶದಂತೆ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ವರದಿ ಸಂಖ್ಯೆ ದಿ:18–8–2009 ರ ವರದಿಯಲ್ಲಿ ಅಬಕಾರಿ ಉಪ ಅಧೀಕ್ಷಕರು, ವಲಯ ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ಉಪ ನಿರೀಕ್ಷಕರ ಹಾಗೂ ಕೆ.ಎಸ್.ಬಿ.ಸಿ.ಎಲ್. ಡಿಪೋ ಪುತ್ತೂರು ಮತ್ತು ಮಾಧ್ಯಮ ಪ್ರತಿನಿಧಿ ಹಾಗೂ ಸಾರ್ವಜನಿಕರ ಸಮಕ್ಷಮ ಮಹಜರು ಜರುಗಿಸಿ ನಾಶಪಡಿಸಿ ವರದಿ ಸಲ್ಲಿಸಿರುತ್ತಾರೆ.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರು ಸಂಖ್ಯೆ: ಕೆಎಲ್–13–ಕ್ಯೂ–5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ–16–ಎಂ–3313 ರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಪ್ರಕರಣದ ಫಿರ್ಯಾದುದಾರರು, ತನಿಖಾಧಿಕಾರಿ, ಮಹಜರು ಸಾಕ್ಷಿ ಹಾಗೂ ಪಂಚರಿಗೆ ಮತ್ತು ನೋಂದಣಿ ಮಾಲೀಕರಾದ ಶ್ರೀ.ಶಬೀರ್.ಕೆ.ಪಿ., ಬಿನ್:ಬಿ.ಮಹಮ್ಮದ್, ಫಾತಿಮಹಲ್, ಪರಿಯಾರಂ, ಕುಪ್ಪಮ್ ಪೋಸ್ಟ್, ತಳಿಪರಂ, ಕಣ್ಣೂರು ಜಿಲ್ಲೆ, ಕೇರಳ ಮತ್ತು ಅವರ ಪರ ವಕೀಲರಿಗೆ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದು, ವಾಹನದ ಮಾಲೀಕರಾಗಲಿ ಅವರ ಪರ ವಕೀಲರಾಗಲಿ ಹಾಜರಾಗಿ ಸಾಕ್ಷಿದಾರರ ಪಾಟೀ ಸವಾಲನ್ನು ಮತ್ತು ಯಾವುದೇ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರ ವಿಚಾರಣೆಯನ್ನು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ನಡೆಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:15–11–2008 ರಂದು ಇಂಡಿಕಾ ಕಾರು ಸಂಖ್ಯೆ: ಕೆಎಲ್–13–ಕ್ಯೂ–5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ–16–ಎಂ–3313 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧಕ್ಕೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೆ?.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ,ಪುತ್ತೂರು ಇವರು ದಿ:05–01–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ಈ ಪ್ರಾಧಿಕಾರದ ಆದೇಶ ದಿ:20–11–2008 ರಂತೆ ತಾನು ಪುತ್ತೂರು ಗ್ರಾಮಂತರ ಪೊಲೀಸ್ ಠಾಣೆಗೆ ಸಂಬಂಧಿಸಿದಂತೆ ಪ್ರಕರಣ ಸಂಖ್ಯೆ:117/2008 ರಂತೆ ವಶಪಡಿಸಿಕೊಂಡ ಇಂಡಿಕಾ ಕಾರು ಮತ್ತು ಸಾರಾಯಿ ಸ್ಯಾಚೆಟ್‌ಗಳು ಹಾಗೂ ಸ್ಟೆಪಿನ್ ಟಯರು ಮತ್ತು ಜಾಕನ್ನು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರ ಮುಖಾಂತರ ದಿ:10–2–2009 ರಂದು ತನ್ನ ವಶಕ್ಕೆ ಪಡೆದುಕೊಂಡಿದ್ದು, ಈ ಬಗ್ಗೆ ಈ ಪ್ರಾಧಿಕಾರಕ್ಕೆ ದಿ:11–2–2009 ರಂದು ಲಿಖಿತ ವರದಿಯನ್ನು ಸಲ್ಲಿಸಿರುತ್ತೇನೆ ಹಾಗೂ ದಿ:5–6–2009 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿ, ಪುತ್ತೂರು ಇವರಿಂದ ಮೌಲ್ಯಮಾಪನ ವರದಿಯನ್ನು ಪಡೆದುಕೊಂಡಿದ್ದು, ಮೌಲ್ಯಮಾಪನ ವರದಿಯ ಪ್ರಕಾರ ರೂ.1,20,000/– ಎಂದು ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸದರಿ ವರದಿಯನ್ನು ನಿಶಾನೆಪಿ–1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ದಿ:6–1–2009 ರ ರಾಸಾಯನಿಕ ಕೆಮಿಕಲ್ ವರದಿಯನ್ನು ಪೊಲೀಸ್ ಉಪ ನಿರೀಕ್ಷಕರವರಿಂದ ಪಡೆದುಕೊಂಡಿದ್ದು, ಸದರಿ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ಈ ಪ್ರಾಧಿಕಾರಕ್ಕೆ ದಿ:15–6–2009 ಮತ್ತು ದಿ:25–7–2009 ರ ತನಿಖಾ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯನ್ನು ಕ್ರಮವಾಗಿ ನಿಶಾನೆ ಪಿ–3 ಮತ್ತು 4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–3ಎ ಮತ್ತು ನಿಶಾನೆ ಪಿ–4ಎ ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಮಹಜರು ಜರುಗಿಸಿ ನಾಶಪಡಿಸಲಾಗಿದ್ದು, ಈ ಬಗ್ಗೆ ವರದಿಯನ್ನು ಈ ಪ್ರಾಧಿಕಾರಕ್ಕೆ ದಿ:18–8–2009 ರಂದು ಸಲ್ಲಿಸಲಾಗಿದ್ದು, ಸದರಿ ವರದಿಯನ್ನು ನಿಶಾನೆ ಪಿ–5 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–5ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣ ದಾಖಲಿಸಿದ ಮಹಜರು ಸಾಕ್ಷಿದಾರರಾದ ಶ್ರೀ.ದಯಾನಂದ, ಪೊಲೀಸ್ ಮುಖ್ಯ ರಕ್ಷಕ, ಸುರತ್ಕಲ್ ಪೊಲೀಸ್ ಠಾಣೆ, ಸುರತ್ಕಲ್ ಇವರು ದಿ:19–1–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಯಲ್ಲಿ ಸಾಕ್ಷಿ ಹೇಳಿಕೆ ನೀಡುತ್ತಾ, ತಾನು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 2000 ರಿಂದ 2009 ರವರೆಗೆ ಪೊಲೀಸ್ ಮುಖ್ಯ ರಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:15–11–2008 ರಂದು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಹಾಗೂ ಸಿಬ್ಬಂದಿಯವರ ಜೊತೆಗೂಡಿ ವಾಹನ ತಪಾಸಣೆಗೆಂದು ಹೊರಟು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಒಂದಾಲಕಾನ ಎಂಬಲ್ಲಿ ವಾಹನ ತಪಾಸಣೆ ಮಾಡುತ್ತಿದ್ದ ಸಂದರ್ಭದಲ್ಲಿ ಪುತ್ತೂರಿನಿಂದ ಪಾಣಾಜೆ ಕಡೆಗೆ ಹಾದುಹೋಗುವ ಸಾರ್ವಜನಿಕ ದಾಮಾರು ರಸ್ತೆಯಲ್ಲಿ ಒಂದು ಕಪ್ಪು ಬಣ್ಣದ ಇಂಡಿಕಾ ಕಾರನ್ನು ಅದರ ಚಾಲಕ ಅತೀ ವೇಗವಾಗಿ ಚಲಾಯಿಸಿಕೊಂಡು ಬರುತ್ತಿರುವುದನ್ನು ಕಂಡು ಸಂಶಯದ ಮೇರೆಗೆ ಸದರಿ ಕಾರನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಕಾರಿನ ಚಾಲಕನು ಕಾರನ್ನು ನಿಲ್ಲಿಸದೆ ಅತೀ ವೇಗವಾಗಿ ಕೊಂದಾಲಕಾನ ಕಡೆಯಿಂದ ಹಾದುಹೋಗುವ ರಸ್ತೆಗೆ ತಿರುಗಿಸಿ ಚಲಾಯಿಸಿದನು. ವಾಹನವನ್ನು ಅತೀ ವೇಗವಾಗಿ ಚಲಾಯಿಸಿದ ಪರಿಣಾಮ ಕಾರಿನ ಹಿಂಬದಿಯ ಎಡಭಾಗದ ಇಂಡಿಕೇಟರ್‌ಗಳು ಹಾಗೂ ಮುಂಭಾಗದ ಎಡಬದಿಯ ರಸ್ತೆಯ ಬದಿಯಲ್ಲಿರುವ ಮೈಲುಕಲ್ಲಿಗೆ ಡಿಕ್ಕಿ ಹೊಡೆದ ಸಂದರ್ಭದಲ್ಲಿ ಕಾರಿನ ಚಾಲಕರು ಸದರಿ ಕಾರನ್ನು ಅಲ್ಲಿಯೇ ಬಿಟ್ಟು ಕಾಡು ಪ್ರದೇಶದಲ್ಲಿ ಓಡಿ ಪರಾರಿಯಾದರು. ಅವರನ್ನು ಬೆನ್ನಟ್ಟಿದರೂ ಹಿಡಿಯಲು ಸಾಧ್ಯವಾಗಲಿಲ್ಲ. ಸದರಿ ಕಾರನ್ನು

ಕೂಲಂಕುಷವಾಗಿ ಪರಿಶೀಲಿಸಿದಾಗ, ಕಾರಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ಕಂಡು ಬರಲಿಲ್ಲ. ಕಾರಿನ ಒಳಗಡೆ ಸಾರಾಯಿ ಪ್ಯಾಕೆಟ್‌ಗಳಿರುವುದು ಕಂಡು ಬಂತು. ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ರಹದಾರಿ ಪತ್ರಗಳಿಲ್ಲದೆ ಅಕ್ರಮವಾಗಿ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡುವುದೆಂದು ಖಚಿತವಾಗಿರುವುದರಿಂದ ಸದರಿ ಸಾರಾಯಿ ಪ್ಯಾಕೆಟ್‌ಗಳನ್ನು ಹಾಗೂ ಕಾರನ್ನು ವಶಪಡಿಸಿಕೊಂಡು ಸದರಿ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಅವರುಗಳ ಸಮಕ್ಷಮ ಸಾರಾಯಿ ಸ್ಯಾಚೆಟ್‌ಗಳ ಪಾಲಿಥಿನ್ ಚೀಲಗಳನ್ನು ಹೊರಗೆ ತೆಗೆದು ನೋಡಲಾಗಿ, 13 ಬಿಳಿ ಪಾಲಿಥಿನ್ ಚೀಲಗಳಲ್ಲಿ ಸಾರಾಯಿ ತುಂಬಿದ ಸ್ಯಾಚೆಟ್‌ಗಳಿರುವುದು ಕಂಡು ಬಂತು. 12 ಪಾಲಿಥಿನ್ ಚೀಲಗಳಲ್ಲಿ ತಲಾ 500 ರಂತೆ 100 ಎಂ.ಎಲ್.ನ ಸಾರಾಯಿ ತುಂಬಿದ ಸ್ಯಾಚೆಟ್‌ಗಳು ಹಾಗೂ ಇನ್ನೊಂದು ಪಾಲಿಥಿನ್ ಚೀಲದಲ್ಲಿ 300 ರಂತೆ 100 ಎಂ.ಎಲ್.ನ ಸಾರಾಯಿ ಸ್ಯಾಚೆಟ್‌ಗಳು ಒಟ್ಟು 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳು ದಾಸ್ತಾನಿರುವುದು ಪತ್ತೆಯಾದವು. ಪ್ರತಿಯೊಂದು ಸಾರಾಯಿ ಸ್ಯಾಚೆಟ್‌ಗಳ ಮೇಲೆ 100 ಎಂ.ಎಲ್., 35 ಡಿಗ್ರಿ ಯು.ಪಿ., ಜೆ.ಪಿ.ಡಿಸ್ಟಿಲರಿ (ಪ್ರೈ) ಲಿಮಿಟೆಡ್ ತುಮಕೂರು ಎಂದು ಹಾಗೂ ಮದ್ಯಪಾನ ಆರೋಗ್ಯಕ್ಕೆ ಹಾನಿಕಾರ, ಅಬಕಾರಿ ಭದ್ರತಾ ಉಗ್ರಾಣದಲ್ಲಿ ತಯಾರಿಸಲ್ಪಟ್ಟಿದೆ ಎಂದು ಬರೆದಿರುತ್ತದೆ. ಪ್ರತಿಯೊಂದು ಪಾಲಿಥಿನ್ ಚೀಲದಿಂದ ತಲಾ 5 ರಂತೆ ಸಾರಾಯಿ ಸ್ಯಾಚೆಟ್‌ಗಳ ಪ್ಯಾಕೆಟ್‌ಗಳನ್ನು ಸ್ಯಾಂಪಲ್‌ಗಾಗಿ ತೆಗೆದು ಅವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಹೊಲಿದು, ಅವುಗಳಿಗೆ ಅರಗು ಹಾಕಿ ಎಸ್.ಹೆಚ್.ಒ ಸೀಲ್ ಮಾಡಿ ಪಂಚರ ಹಾಗೂ ಸಿಬ್ಬಂದಿಯವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಅವುಗಳಿಗೆ ಕ್ರಮ ಸಂಖ್ಯೆಯನ್ನು ನೀಡಲಾಯಿತು. ನಂತರ ಸಾಗಾಟಕ್ಕೆ ಬಳಸಿದ ಇಂಡಿಕಾ ಕಂಪೆನಿಯ ಕಾರನ್ನು ಪರಿಸೀಲಿಸಿದಾಗ, ಅದರ ಹಿಂಭಾಗ ಮತ್ತು ಮುಂಭಾಗದಲ್ಲಿ ಕಪ್ಪು ಅಕ್ಷರದಲ್ಲಿ ಕೆಎ–16–ಎಂ–3313 ಎಂದು ನೋಂದಣಿ ಸಂಖ್ಯೆ ಬರೆದಿರುತ್ತದೆ. ಕಾರಿನ ಇಂಜೀನ್ ನಂ: 4755149ಇಟಿಝೆಡ್‌ಪಿ–63881 ಮತ್ತು ಚಾಸೀಸ್ ನಂ:600208ಇಟಿಝೆಡ್ ಪಿ70718 ಆಗಿದ್ದು, ಟಿವೈಪಿ475ಎಸ್‌ಐ 49 ಆಗಿರುತ್ತದೆ. ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರನ್ನು ಮತ್ತು ಸ್ಯಾಂಪಲ್‌ಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ವೃತ್ತ ನಿರೀಕ್ಷಕರು ಸ್ಥಳದಲ್ಲಿಯೇ ಜರುಗಿಸಿರುತ್ತಾರೆ. ಮಹಜರನ್ನು ಅದೇ ದಿನ ಸಂಜೆ 6–40 ರಿಂದ 8–30 ಗಂಟೆ ತನಕ ರಸ್ತೆ ಬದಿಯ ದೀಪದ ಸಹಾಯದಿಂದ ಬರೆದಿರುತ್ತೇನೆ. ಸದರಿ ಮಹಜರಿಗೆ ತಾನು ಸಹಿ ಮಾಡಿರುತ್ತೇನೆ. ಮಹಜರನ್ನು ನಿಶಾನೆ ಪಿ–6 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–6ಎ ಎಂದು ಗುರುತಿಸಲಾಯಿತು, ಸ್ವಾಧೀನಪಡಿಸಿದ ಸೊತ್ತು ಮತ್ತು ಸಾಗಾಟಕ್ಕೆ ಬಳಸಿದ ವಾಹನ ಸಮೇತ ಠಾಣೆಗೆ ಬಂದು ಸಿ.ಬಿ.ಐ. ರವರು ನೀಡಿದ ದೂರಿನ ಬಗ್ಗೆ ತಮ್ಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮಹಜರು ನನ್ನ ಹಸ್ತಾಕ್ಷರದಲ್ಲಿದ್ದು, ಸದರಿ ದೂರನ್ನು ನಿಶಾನೆ ಪಿ–7 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ವಾಹನದ ಆರ್.ಸಿ. ಮಾಲೀಕರಾದ ಶ್ರೀ.ಶಬೀರ್.ಕೆ.ಪಿ ಮತ್ತು ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟೀಸು ಮತ್ತು ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದರೂ, ಸದರಿ ನೋಟೀಸುಗಳು ಅವರಲ್ಲಿ ಸ್ವೀಕೃತಿಯಾಗಿದ್ದರೂ ವಾಹನದ ಮಾಲೀಕರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸದ್ರಿ ವಾಹನವು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟದಲ್ಲಿ ಭಾಗಿಯಾಗದಿರುವ ಬಗ್ಗೆ ಯಾವುದೇ ರುಜುವಾತನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:15–11–2008 ರಂದು ಜಪ್ತುಪಡಿಸಿಕೊಂಡಿರುವ ಇಂಡಿಕಾ ಕಾರು ಸಂಖ್ಯೆ: ಕೆಎಲ್–13–ಕ್ಯೂ–5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ–16–ಎಂ–3313 ರಲ್ಲಿ ಅಕ್ರಮವಾಗಿ 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಅಕ್ರಮ ಸಾಗಾಣಿಕೆಗೆ ಸದರಿ ವಾಹನಕ್ಕೆ ನಕಲಿ ನಂಬರನ್ನು ಅಳವಡಿಸಿ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿದ್ದರೂ, ನಂತರ ಅವರು ಖುದ್ದಾಗಿ ಹಾಜರಾತಿ ನೋಟೀಸಿಗೆ ಪ್ರಕರಣದ ಯಾವುದೇ ಸಾಕ್ಷಿದಾರರ ಪಾಟೀ ಸವಾಲು ಮತ್ತು ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸದಿರುವ ಕಾರಣಕ್ಕೆ ಮತ್ತು ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ನೀಡಿರುವುದಿಲ್ಲ. ಆದುದರಿಂದ ವಾಹನ ಮಾಲೀಕರ ತಿಳುವಳಿಕೆಯಿಂದಲೇ ಸದರಿ ವಾಹನಕ್ಕೆ ನಕಲಿ ನಂಬರನ್ನು ಅಳವಡಿಸಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಕೇರಳ ರಾಜ್ಯಕ್ಕೆ ಸಾಗಿಸಲು ಬಳಸಿರುವುದು ಸಾಕ್ಷಿ ಹೇಳಿಕೆಗಳಿಂದ ಸಾಬೀತಾಗಿರುವ ಕಾರಣ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 100 ಎಂ.ಎಲ್.ನ 6300 ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಸಾರಾಯಿ ಎಂದು ದೃಢಪಟ್ಟಿದ್ದು, ಸಾಗಾಟಕ್ಕೆ ಬಳಸಿದ ಇಂಡಿಕಾ ಕಾರು ಸಂಖ್ಯೆ:

ಕೆಎಲ್–13–ಕ್ಯೂ–5503 ಇದಕ್ಕೆ ನಕಲಿ ನೋಂದಣಿ ಸಂಖ್ಯೆ: ಕೆಎ–16–ಎಂ–3313 ನ್ನು ಅಳವಡಿಸಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32, 34 ಮತ್ತು 38(ಎ) ರ ಅಪರಾಧಕ್ಕೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಡಿಕಾ ಕಾರು ಸಂಖ್ಯೆ: ಕೆಎಲ್–13–ಕ್ಯೂ–5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ–16–ಎಂ–3313 ನ್ನು ವಶಪಡಿಸಿಕೊಂಡು ಸುಮಾರು ಒಂದು ವರ್ಷ ಒಂದು ತಿಂಗಳು ಕಳೆದಿದ್ದು, ವಾಹನದ ಮಾಲೀಕರು ವಾಹನವು ತನ್ನದೆಂದು ತನ್ನ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಕೋರಿರುತ್ತಾರೆ. ಆದರೆ ಈ ಪ್ರಾಧಿಕಾರದಿಂದ ಮೋಟಾರು ವಾಹನ ನಿರೀಕ್ಷಕರು ನೀಡಿರುವ ವಾಹನದ ಈಗಿನ ಅಂದಾಜು ಮೌಲ್ಯ ರೂ.1,20,000/– ಮೌಲ್ಯಕ್ಕೆ ಅನುಗುಣವಾಗಿ ಬ್ಯಾಂಕ್ ಗ್ಯಾರಂಟಿಯನ್ನು ನೀಡಲು ಈ ಪ್ರಾಧಿಕಾರದಿಂದ ನೋಟೀಸನ್ನು ನೀಡಿದ್ದರೂ, ವಾಹನ ಮಾಲೀಕರು ಯಾವುದೇ ಬ್ಯಾಂಕ್ ಗ್ಯಾರಂಟಿಯನ್ನು ಮತ್ತು ಸದರಿ ನೋಟೀಸಿಗೆ ಉತ್ತರವನ್ನು ಸಲ್ಲಿಸಿರುವುದಿಲ್ಲ ಹಾಗೂ ಈ ಪ್ರಾಧಿಕಾರವು ನೀಡಿದ ಕಾರಣ ಕೇಳಿ ನೋಟೀಸುಗಳಿಗೂ ಸಹಾ ಉತ್ತರವನ್ನು ಈ ಪ್ರಾಧಿಕಾರದಲ್ಲಿ ಇದುವರೆಗೂ ಸಲ್ಲಿಸಿರುವುದಿಲ್ಲ. ತದನಂತರ ಪ್ರಕರಣದ ಯಾವುದೇ ಹಾಜರಾತಿ ನೋಟೀಸಿಗೆ ಖುದ್ದಾಗಿ ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಹಾಗೂ ಆರೋಪಿಯಾಗಲಿ ಹಾಜರಾಗಿ ಈ ಪ್ರಾಧಿಕಾರದಲ್ಲಿ ನಡೆಸಿದ ಸಾಕ್ಷಿದಾರರ ವಿಚಾರಣೆ ಹೇಳಿಕೆಗಳ ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ ಯಾವುದೇ ರಕ್ಷಣಾ ಸಾಕ್ಷಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ. ಪ್ರಕರಣವು ಈಗಾಗಲೇ ದಾಖಲಾಗಿ ಸುಮಾರು ಒಂದು ವರ್ಷ ಒಂದು ತಿಂಗಳು ಕಳೆದಿದ್ದು ಮತ್ತು ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ವಾಹನಕ್ಕೆ ನಕಲಿ ನಂಬರನ್ನು ಅಳವಡಿಸಿ ಅಕ್ರಮವಾಗಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ವಾಹನದ ಮಾಲೀಕರು ತಕ್ಷೀರು ನಡೆಸಲು ಉತ್ಸುಕರಿಲ್ಲದ ಕಾರಣ ಮತ್ತು ವಶಪಡಿಸಿಕೊಂಡ ಇಂಡಿಕಾ ಕಾರು ಸಂಖ್ಯೆ: ಕೆಎಲ್–13–ಕ್ಯೂ–5503 ಇದಕ್ಕೆ ನಕಲಿ ನೋಂದಣಿ ಸಂಖ್ಯೆ: ಕೆಎ–16–ಎಂ–3313 ನ್ನು ಬದಲಿಸಿ ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಣಿಕೆಗೆ ಉದ್ದೇಶಪೂರ್ವಕವಾಗಿ ಬಳಸಿದ್ದು, ಸದ್ರಿ ವಾಹನವನ್ನು ಜಪ್ತುಪಡಿಸಿ ಈಗಾಗಲೆ ಒಂದು ವರ್ಷ ಒಂದು ತಿಂಗಳು ಕಳೆದಿದ್ದು, ಇದು ಅಕ್ರಮ ಸಾರಾಯಿ ಸ್ಯಾಚೆಟ್‌ಗಳ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಇಂಡಿಕಾ ಕಾರು ಸಂಖ್ಯೆ: ಕೆಎಲ್–13–ಕ್ಯೂ–5503 ಇದರ ನಕಲಿ ನೋಂದಣಿ ಸಂಖ್ಯೆ: ಕೆಎ–16–ಎಂ–3313 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ:ಎಸ್‌ಡಿಕೆ/147/ಡಿಟಿಸಿಆರ್/2008–09, ದಿನಾಂಕ:20ನೇ ಜನವರಿ, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂ:117/2008 ದಿ:15–11–2008 ರಲ್ಲಿ ಜಪ್ತುಪಡಿಸಿರುವ ಇಂಡಿಕಾ ಕಾರು ಸಂಖ್ಯೆ: ಕೆಎಲ್–13–ಕ್ಯೂ–5503 ಇದರ ನಕಲಿ ನೋಂದಣಿ ಸಂ: ಕೆಎ–16–ಎಂ–3313 ನ್ನು ಮತ್ತು ಸ್ಟೆಪಿನ್ ಟಯರು ಹಾಗೂ ಜ್ಯಾಕನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:20–01–2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ–1: ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಪ್ರಾ.ಸಾ–2: ಶ್ರೀ.ದಯಾನಂದ, ಪೊಲೀಸ್ ಮುಖ್ಯ ರಕ್ಷಕ, ಸುರತ್ಕಲ್ ಪೊಲೀಸ್ ಠಾಣೆ, ಸುರತ್ಕಲ್.

ಅನುಬಂಧ–2

ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ–1: ಮೌಲ್ಯಮಾಪನ ವರದಿ.
ನಿಶಾನೆ ಪಿ–1A: ಪ್ರಾ.ಸಾ–1– ರವರ ಸಹಿ.
ನಿಶಾನೆ ಪಿ–2 : ಕೆಮಿಕಲ್ ವರದಿ.
ನಿಶಾನೆ ಪಿ–2A : ಅದರಲ್ಲಿರುವ ಪ್ರಾ.ಸಾ–1ರವರ ಸಹಿ.
ನಿಶಾನೆ ಪಿ–3 : ಪ್ರಥಮ ತನಿಖಾ ವರದಿ.
ನಿಶಾನೆ ಪಿ–3A : ಅದರಲ್ಲಿರುವ ಪ್ರಾ.ಸಾ–1ರವರ ಸಹಿ.
ನಿಶಾನೆ ಪಿ–4 : ದ್ವಿತೀಯ ತನಿಖಾ ವರದಿ.
ನಿಶಾನೆ ಪಿ–4A : ಅದರಲ್ಲಿರುವ ಪ್ರಾ.ಸಾ–1ರವರ ಸಹಿ.
ನಿಶಾನೆ ಪಿ–5 : ನಾಶಪಡಿಸಿದ ಬಗ್ಗೆ ವರದಿ.
ನಿಶಾನೆ ಪಿ–5A : ಅದರಲ್ಲಿರುವ ಪ್ರಾ.ಸಾ–1ರವರ ಸಹಿ.
ನಿಶಾನೆ ಪಿ–6 : ಮಹಜರು ಪ್ರತಿ.
ನಿಶಾನೆ ಪಿ–6A : ಅದರಲ್ಲಿರುವ ಪ್ರಾ.ಸಾ–2ರವರ ಸಹಿ.
ನಿಶಾನೆ ಪಿ–7 : ಪೊಲೀಸ್ ನಿರೀಕ್ಷಕರು ನೀಡಿದ ದೂರಿನ ಪ್ರತಿ.

ಅನುಬಂಧ–3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ–4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು : –ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.212

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/402/ಡಿಟಿಸಿಆರ್/2008–09, ದಿನಾಂಕ:22ನೇ ಜನವರಿ, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	**ಆರೋಪಿಗಳು:**
ಪೊಲೀಸ್ ಉಪ ಅಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು.	ಹನೀಫ್ ಅಲಿಯಾಸ್ ಕೊಕ್ಕಡ ಹನೀಫ್ ಬಿನ್:ಕೊಕ್ಕಡ ಮಹಮ್ಮದ್, ತಾಲಪರಿ ಭಾರತ್ ಪೆಟ್ರೋಲ್ ಬಳಿ, ಬಂಟ್ವಾಳ. ವಾಹನ ಮಾಲೀಕರು ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28–3–2009ರಂದು ರಾತ್ರಿ 11–00 ಗಂಟೆ ಸಮಯದಲ್ಲಿ ಫಿರ್ಯಾದುದಾರರು ತಮ್ಮ ಸಿಬ್ಬಂದಿಯವರೊಂದಿಗೆ ಮಂಗಳೂರು ಮೂಡಬಿದ್ರೆ ರಸ್ತೆಯ ಎಡಪದವು ಜಂಕ್ಷನ್‌ನಲ್ಲಿ ಮಂಗಳೂರು ಕಡೆಗೆ ರಸ್ತೆಯ ಎಡಬದಿಯಲ್ಲಿ ಒಂದು ಮಾರುತಿ ಒಮಿನಿ ನಿಲ್ಲಿಸಲಾಗಿದ್ದು, ಸದ್ರಿ ವಾಹನವನ್ನು ಪರಿಶೀಲಿಸಲಾಗಿ ಅದರ ನೊಂದಾಣಿ ಸಂಖ್ಯೆ :KA-19-P-5313, ನೀಲಿ ಬಣ್ಣದಾಗಿದ್ದು,ಇದರ ಇಂಜಿನ್ ಸಂ:F8BIN3571131 ಹಾಗೂ ಚಾಸೀಸ್ ಸಂ: MA3E YB11S00752815 ಆಗಿದ್ದು ಅನುಮಾನಗೊಂಡು ಸದ್ರಿ ವಾಹನದ ಒಳಗಡೆ ಪರಿಶೀಲಿಸಲಾಗಿ, 35 ಲೀ ಸಾಮರ್ಥ್ಯದ 4 ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ 140 ಲೀಟರು ಮದ್ಯಸಾರ ಪತ್ತೆಯಾಗಿ, ವಾಹನ ಚಾಲಕನನ್ನು ಈ ಬಗ್ಗೆ ವಿಚಾರಿಸಲಾಗಿ ಸದ್ರಿ ಸ್ಪಿರಿಟನ್ನು ಕೇರಳ ರಾಜ್ಯಕ್ಕೆ ಸಾಗಿಸುತ್ತಿರುವುದಾಗಿ ತಿಳಿಸಿದ್ದು, ಅವುಗಳನ್ನು ಸಾಗಾಟ ಮಾಡಲು ಯಾವುದೇ ಪರವಾನಿಗೆ ಇರುವುದಿಲ್ಲವೆಂದು ವಿಚಾರಣೆ ವೇಳೆಯಲ್ಲಿ ಆ ವ್ಯಕ್ತಿ ತಿಳಿಸಿರುವುದರಿಂದ ಸದ್ರಿ ಮದ್ಯಸಾರ ಅಕ್ರಮ ಸಾಗಾಟದ ಮದ್ಯಸಾರವೆಂದು ಖಾತ್ರಿಯಾಗಿರುವುದರಿಂದ, ವಾಹನದಲ್ಲಿ ಇರಿಸಿ ಸಾಗಿಸಲಾಗುತ್ತಿದ್ದ ನಾಲ್ಕು ಕ್ಯಾನುಗಳಿಂದ ತಲಾ ಒಂದೊಂದು ಲೀಟರಿನಂತೆ ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಕ್ಯಾನಿನಲ್ಲಿ ಮಾದರಿಗಾಗಿ ಸ್ಯಾಂಪಲ್‌ಗಳನ್ನು ತೆಗೆದು ಅವುಗಳಿಗೆ ಬಿಳಿ ಬಟ್ಟೆ ದಾರ ಸುತ್ತಿ ಅರಗು ಸೀಲು ಮಾಡಿ ಕ್ರಮಾಂಕಗಳನ್ನು ನಮೂದಿಸಿ ವಾಹನದ ಚಾಲಕನ ಹೆಸರು ಮತ್ತು ವಿಳಾಸ ಕೇಳಲಾಗಿ ಅತನು ಹನೀಫ್

ಅಲಿಯಾಸ್ ಕೊಕ್ಕಡ ಹನೀಫ್ ಬಿನ್:ಕೊಕ್ಕಡ ಮಹಮ್ಮದ್, ತಾಲಪರಿ ಭಾರತ್ ಪೆಟ್ರೋಲ್ ಬಳಿ, ಬಂಟ್ವಾಳ ಎಂದು ತಿಳಿಸಿರುತ್ತಾನೆ. ನಂತರ ಅರೋಪಿಯ ಹೆಸರು ಮತ್ತು ವಿಳಾಸ ಇರುವ ಗುರುತು ಚೀಟಿಗಳನ್ನು ತಯಾರಿಸಿ ಮಾದರಿ ಕ್ಯಾನುಗಳಿಗೆ ಮತ್ತು ಮದ್ಯಸಾರದ ಕ್ಯಾನುಗಳಿಗೆ ಅಂಟಿಸಲಾಯಿತು. ಅಕ್ರಮ ಮದ್ಯಸಾರ ಸಾಗಾಣಿಕೆ ಮಾಡುತ್ತಿರುವುದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 11 ರ ಪ್ರಕಾರ ಅಪರಾಧವಾಗಿದ್ದು, 32, 34 43ಎ ರ ಪ್ರಕಾರ ಶಿಕ್ಷಾರ್ಹವಾಗಿ ರುವುದರಿಂದ, ಅಕ್ರಮವಾಗಿ ಮದ್ಯಸಾರ ಸಾಗಾಟಕ್ಕೆ ಬಳಸಿದ ಮಾರುತಿ ಒಮಿನಿ ಕಾರು ಸಂ:KA-19-P-5313 ಹಾಗೂ ನೊಕಿಯಾ ಮೊಬೈಲ್ ಫೋನನ್ನು ವಶಪಡಿಸಿಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಆರೋಪಿಯಾದ ಹನೀಪ್ ಅಲಿಯಾಸ್ ಕೊಕ್ಕಡ ಹನೀಪ್ ಇವರ ವಿರುದ್ಧ ಬಜಪೆ ಪೊಲೀಸ್ ಠಾಣೆ ಕ್ರೈಂ ಸಂ:57/2009 ದಿ:28–3–2009 ರಂತೆ ಮೊಕದ್ದಮೆಯನ್ನು ದಾಖಲಿಸಿ ಕೊಂಡು, ಈ ಪ್ರಾದಿಕಾರದ ದಿ:8–6–2009ರ ಅದೇಶದಂತೆ ಪ್ರಕರಣದ ಸೊತ್ತುಗಳನ್ನು ಮತ್ತು ಕಡತವನ್ನು ಕಾರ್ಯವ್ಯಾಪ್ತಿಯ ಅಬಕಾರಿ ನಿರೀಕ್ಷಕರು, ಮಂಗಳೂರು ಪೂರ್ವ ವಲಯ–II ಇವರಿಗೆ ಹಸ್ತಾಂತರಿಸಿರುತ್ತಾರೆ

ಅಬಕಾರಿ ನಿರೀಕ್ಷಕರು, ಮಂಗಳೂರು ಪೂರ್ವ ವಲಯ–II ಇವರ ತನಿಖಾ ವರದಿ ಸಂಖ್ಯೆ: ಎಂಇಅರ್–2/ಪೊ.ಕ್ರೈಂ:7:2009–10 ದಿ:7–10–2009ರ ವರದಿಯಲ್ಲಿ ವಶಪಡಿಸಿಕೊಂಡ ಮದ್ಯಸಾರದ ಕ್ಯಾನುಗಳಿಂದ ತೆಗೆದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ರಾಸಾಯನಿಕ ವಿಶ್ಲೇಷಣೆ ವರದಿ ಸಂಖ್ಯೆ: ಇ–177–4 ದಿ:16–5–2009ರ ವರದಿಯಲ್ಲಿ ಮದ್ಯಸಾರದಲ್ಲಿ ಮದ್ಯಸಾರ ಪ್ರಮಾಣ ಶೇ.92.5 ಇರುವುದಾಗಿ ಹಾಗೂ ಮಾದರಿಗಳನ್ನು ಮಾದಕ ಪಾನೀಯ ತಯಾರಿಕೆಗೆ ಮತ್ತು ಇತರ ಕೈಗಾರಿಕಾ ಉದ್ದಿಮೆಗಳಿಗೆ ಬಳಸಬಹುದಾಗಿ ಅಭಿಪ್ರಾಯ ದೊಂದಿಗೆ ದೃಡೀಕರಿಸಿರುತ್ತಾರೆ. ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ ಒಮಿನಿ ಕಾರು ಸಂ :KA-19-P-5313ರ ಮಾಲೀಕತ್ವದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಿಂದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆದು, ಸದ್ರಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿ ಪ್ರಕಾರ ಸದರಿ ವಾಹನದ ನೋಂದಣಿ ಮಾಲೀಕ ಶ್ರೀ.ಬಿ.ಮುರಳೀದರ ಶೆಟ್ಟಿ, ಬಿನ್: ಬಿ.ರಾಮಣ್ಣ ಶೆಟ್ಟಿ, ಡೋರ್ ನಂ:3–35(3) ಕಲ್ಪವಕ್ಷ ಅರ್ಪಾಟ್‌ಮೆಂಟ್, ಸಂಕೈ ಗುಡ್ಡೆ, ಬಿಜೈ, ಮಂಗಳೂರವರು ವಾಹನದ ಮಾಲೀಕರಾಗಿರುವುದಾಗಿ ಹಾಗೂ ವಶಪಡಿಸಿಕೊಂಡ ವಾಹನದ ಇಂಜಿನ್ ಮತ್ತು ಚಾಸೀಸ್ ನಂಬರ್ ಬಿ ಎಕ್ಸ್‌ಟ್ರಾಕ್ಟ್ ವರದಿಗೆ ತಾಳೆಕಂಡುಬಾರದೇ ಇರುವುದರಿಂದ ವಾಹನಕ್ಕೆ ನಕಲಿ ನಂಬರ್ ಅಳವಡಿಸಿರುತ್ತಾರೆ ಎಂದು ತಿಳಿಸಿ, ಸದ್ರಿ ವಾಹನವನ್ನು ಬಿಡುಗಡೆಗೊಳಿಸುವ ಬಗ್ಗೆ ಮಾಲೀಕತ್ವವನ್ನು ಕೋರಿ ಯಾರೊಬ್ಬರೂ ಮುಂದೆ ಬಾರದೇ ಇರುವುದರಿಂದ, ಪ್ರಕರಣದಲ್ಲಿ ಜಪ್ತುಪಡಿಸಿದ ವಾಹನ ಸಮೇತ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಪಾರಸ್ಸು ಈ ಪ್ರಾಧಿಕಾರಕ್ಕೆ ದಿನಾಂಕ:7–10–2008ರಂದು ವರದಿ ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಪ್ರಕರಣದಲ್ಲಿ ಜಪ್ತು ಪಡಿಸಿದ ಸೊತ್ತುಗಳ ಪೈಕಿ ವಾಹನವನ್ನು ಹೊರತುಪಡಿಸಿ ಉಳಿದ ಸೊತ್ತುಗಳಾದ 140 ಲೀ ಮದ್ಯಸಾರ (ಮಾದರಿ ಹೊರತುಪಡಿಸಿ) ಮತ್ತು ನೊಕಿಯೋ ಮೊಬೈಲ್ ಸೆಟ್ಟನ್ನು ಪ್ರಾಧಿಕಾರದ ದಿ:7–11–2009ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ. ಮುಟ್ಟುಗೋಲು ಹಾಕಿಕೊಳ್ಳಲಾದ ಮದ್ಯಸಾರವನ್ನು ದಿ:4–1–2010ರಂದು ನಿಯಾಮಗಳನುಸಾರ ಮಹಜರು ಜರುಗಿಸಿ ನಾಶ ಪಡಿಸಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ದ.ಕ ಜಿಲ್ಲೆ ಮಂಗಳೂರು ಇವರಿಂದ ಪಡೆಯಲಾದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕರಿಸಿರುವಂತೆ ವಾಹನದ ಮಾಲೀಕರಾದ ಶ್ರೀ ಬಿ.ಮುರಳೀದರ ಶೆಟ್ಟಿ, ಬಿನ್: ಬಿ.ರಾಮಣ್ಣ ಶೆಟ್ಟಿ, ಡೋರ್ ನಂ: 3–35(3) ಕಲ್ಪವಕ್ಷ ಅರ್ಪಾಟ್‌ಮೆಂಟ್, ಸಂಕೈ ಗುಡ್ಡೆ,ಬಿಜೈ,ಮಂಗಳೂರು ಇವರಿಗೆ ಮತ್ತು ಪ್ರಕರಣದ ಅರೋಪಿತ ವ್ಯಕ್ತಿಗೆ ಪ್ರಾದಿಕಾರದಿಂದ ದಿ:24–11–2009ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43 ಬಿ ಪ್ರಕಾರ ನೀಡಲಾದ ಕಾರಣ ಕೇಳಿ ನೋಟೀಸುಗಳನ್ನು ವಾಹನದ ಮಾಲೀಕರು ಸ್ವೀಕರಿಸಿಕೊಂಡು ದಿ:9–12–2009ರಂದು ಈ ಪ್ರಾದಿಕಾರಕ್ಕೆ ಉತ್ತರ ನೀಡುತ್ತಾ ತನ್ನ ಮಾಲೀಕತ್ವದಲ್ಲಿರುವ ನೊಂದಣಿ ಸಂಖ್ಯೆ:KA19-P-5313 ಹಾಗೂ ಚಾಸಿಸ್ ಸಂ:MA3EVB11S00714565 ಮತ್ತು ಇಂಜಿನ್ ಸಂ:F8BIN2959137 ಇರುವ ಮಾರುತಿ ಒಮಿನಿ ಕಾರು ಯಾವುದೇ ಅಕ್ರಮದಲ್ಲಿ ಪಾಲ್ಗೊಂಡಿರುವುದಿಲ್ಲ ಹಾಗೂ ಯಾವುದೇ ಅಕ್ರಮಕ್ಕೆ ಸಂಬಂದಿಸಿದಂತೆ ಪ್ರಕರಣದಲ್ಲಿ ಜಪ್ತಾಗಿರದೇ ಸದ್ರಿ ಒಮ್ನಿ ವಾಹನವು ತನ್ನ ಸುಪರ್ಧಿಯಲ್ಲಿಯೇ ಇರುತ್ತದೆ. ಕಾರಣ ಪ್ರಕರಣದಲ್ಲಿ ಜಪ್ತಾದಂತಹ ನಕಲಿ ನಂಬರ್ ಅಳವಡಿಸಲಾದ KA-19-P-5313 ನೊಂದಣಿ ಸಂಖ್ಯೆ ಇರುವ ಹಾಗೂ ಚಾಸೀಸ್ ಸಂ: MA3EYB11S00752815 ಮತ್ತು ಇಂಜಿನ್ ಸಂ:F8BIN3571131 ಇರುವ ಮಾರುತಿ ಒಮಿನಿ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನ್ನಿಂದ ಯಾವುದೇ ಅಭ್ಯಂತರವಿಲ್ಲವೆಂದು ಸಮಂಜಾಯಿಷಿ ನೀಡಿ ಸ್ಪಷ್ಟ ಅಭಿಪ್ರಾಯ ನೀಡಿರುತ್ತಾರೆ.ಪ್ರಕರಣದ ಆರೋಪಿತ ವ್ಯಕ್ತಿಗೆ ನೀಡಲಾದ ಕಾರಣ ಕೇಳಿ ನೋಟಿಸು ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ವಾಪಾಸ್ಸು ಬಂದಿರುತ್ತದೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಆಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಫ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಭೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ

ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:28–3–2009 ರಂದು ಮಾರುತಿ ಒಮಿನಿ ಕಾರು ನಕಲಿ ಸಂ:KA-19-P-5313 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿಗಳು 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 140 ಲೀಟರು ಮದ್ಯಸಾರವನ್ನು ಅಕ್ರಮವಾಗಿ ಸಾಗಾಟ ಮಾಡುಲಾಗಿರುವುದು ಪತ್ತೆಹಚ್ಚಿ,ಬಜಪೆ ಪೊಲೀಸ್ ಠಾಣೆ ಕ್ರೈಂ ಸಂ: 57/2009 ದಿ:28–3–2009ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ ಮದ್ಯಸಾರವಾಗಿದ್ದು, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14ರಂತೆ ಅಪರಾಧಕ್ಕೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದು ಹಾಗೂ ವಾಹನದ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ನಮೂದಿಸಿದ ಚಾಸೀಸ್ ನಂಬರಿಗೂ, ಪ್ರಕರಣದಲ್ಲಿ ಜಪ್ತಾಗಿರುವ ನಕಲಿ ನಂಬರಿನ ಒಮ್ನಿ ವಾಹನದ ಚಾಸೀಸ್ ನಂಬರಿಗೂ, ಇಂಜಿನ್ ನಂಬರಿಗೆ ತಾಳೆಕಂಡು ಬಾರದೇ ಇರುವುದರಿಂದ ಅಕ್ರಮ ಸಂದರ್ಭದಲ್ಲಿ ಆರೋಪಿಗಳು ನಕಲಿ ಸಂಖ್ಯಾ ಫಲಕವನ್ನು ಆಳವಡಿಸಿಕೊಂಡು ಪ್ರಕರಣದಲ್ಲಿ ನುಣುಚಿ ಕೊಳ್ಳುವ ಕುಟಿಲೋಪಾಯದಿಂದ ಈ ಅಕ್ರಮ ಎಸಗಿರುವುದು ಸಾಬೀತಾಗಿರುತ್ತದೆ. ಅಲ್ಲದೇ ಬಿ ರಿಜಿಸ್ಟ್ರಾರ್ ಎಕ್ಸ್ ಟ್ರಾಕ್ಟ್ ವರದಿಯಲ್ಲಿ ನಮೂದಿತವಾದ ವಿವರಗಳ ಪ್ರಕಾರ ವಾಹನದ ಮಾಲೀಕರಿಗೆ ಪ್ರಾದಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಸದ್ರಿಯವರು ಉತ್ತರಿಸುತ್ತಾ ತನ್ನ ವಾಹನವು ಯಾವುದೇ ಅಕ್ರಮದಲ್ಲಿ ಪಾಲ್ಗೊಳ್ಳದೇ ತನ್ನ ಸುಪರ್ಧಿಯಲ್ಲಿಯೇ ಇರುವುದೆಂದು ತಿಳಿಸಿ ಪ್ರಕರಣದಲ್ಲಿ ಜಪ್ತಾದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ತನ್ನಿಂದ ಯಾವುದೇ ಅಭ್ಯಂತರವೇನಿಲ್ಲವೆಂದು ತಿಳಿಸಿರುವುದು, ಪ್ರಕರಣದಲ್ಲಿ ವಾಹನಕ್ಕೆ ನಕಲಿ ನಂಬರ್ ಪ್ಲೇಟು ಆಳವಡಿಸಿ ಅಕ್ರಮ ಎಸಗಿರುವುದು ಪುಷ್ಟಿಕರಿಸುತ್ತದೆ.ಕಾರಣ ಪ್ರಾದಿಕಾರವು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಮೇಲಿನ ವಿದ್ಯಾಮಾನಗಳ ಸಂದರ್ಭದಲ್ಲಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಬಿಸಿ ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಗಳನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗದೇ ಇದುದ್ದರಿಂದ ಪ್ರತಿ ರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷಾಧ್ಯಾರಗಳಿಂದ ಈ ಕೆಳಗಿನ ವಿವಿಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:28.03.2009ರಂದು ಮಾರುತಿ ಒಮಿನಿ ಕಾರು ಸಂ: KA-19-P-5313 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ 140 ಲೀಟರು ಮದ್ಯಸಾರವನ್ನು ಸಾಗಾಣಿಕೆ ಮಾಡಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯಸಾರ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದಾರೆಯೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳ ಬಹುದೇ?

ಒಂದನೇ ಅಂಶವನ್ನು ಗುಣತ್ಮಾಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ–1:

ಶ್ರೀ.ಚಂದ್ರಶೇಖರಯ್ಯ, ಹೆಚ್.ಸಿ–486 ಮಂಗಳೂರು ಪೂರ್ವ ಪೊಲೀಸ್ ಠಾಣೆ ಇವರು ಪ್ರಕರಣದ ಸೊತ್ತುಗಳನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲಿಸಿಕೊಂಡ ಬಗ್ಗೆ ಸಾಕ್ಷಿದಾರರಾಗಿ ಅಭಿಯೋಗದ ಪರ ದಿನಾಂಕ:19–1–2010 ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ನಾನು ದಿ:30–5–2009ರಿಂದ ಇಲ್ಲಿಯತನಕ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸುಮಾರು 2004ನೇ ಇಸವಿಯಿಂದ ಬಜಪೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿ:28–3–2009ರಂದು ರಾತ್ರಿ ಠಾಣಾ ಪ್ರಭಾರ ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ರಾತ್ರಿ ಸುಮಾರು 23–00 ಗಂಟೆಗೆ ಮಂಗಳೂರು ಅಬಕಾರಿ ಜ್ಯಾರಿ ಮತ್ತು ಲಾಟರಿ ನಿಷೇಧ ದಳ,ಮಂಗಳೂರು ವಿಭಾಗದ ಪೊಲೀಸ್ ಉಪಾಧೀಕ್ಷಕರಾದ ಶ್ರೀ.ಪಾಪಯ್ಯ ರವರೊಂದಿಗೆ ಅಬಕಾರಿ ಅಕ್ರಮ ಪತ್ತೆಹಚ್ಚಿದ ಸಾರಂಶವೇನೆಂದರೆ, ದಿ:28–3–2008 ರಂದು ಖಚಿತ ವರ್ತಮಾನದ ಮೇರೆಗೆ ಮಂಗಳೂರು–ಮೂಡಬಿದ್ರೆ ರಸ್ತೆಯ ಎಡಪದವು ಜಂಕ್ಷನ್‌ನಿಂದ ಮಂಗಳೂರು ಕಡೆಗೆ ಬರುವ ರಸ್ತೆಯ ಎಡಬದಿಯಲ್ಲಿ ಒಂದು ಮಾರುತಿ ಓಮ್ನಿ ಕಾರು ನಿಂತಿದ್ದು, ಅದನ್ನು ನಿಲ್ಲಿಸಿ ಪರಿಶೀಲಿಸಿದಾಗ ಮಾರುತಿ ಕಾರು ಸಂ: KA-19P-5313 ಆಗಿದ್ದು, ವಾಹನದ ಒಳಗಡೆ ಪರಿಶೀಲಿಸಲಾಗಿ 35 ಲೀಟರ್ ಸಾಮರ್ಥ್ಯದ 4 ಪ್ಲಾಸ್ಟಿಕ್ ಕ್ಯಾನುಗಳಿದ್ದು, 140 ಲೀಟರು ಸ್ಪಿರಿಟ್ ತುಂಬಿದ 4 ಪ್ಲಾಸ್ಟಿಕ್ ಕ್ಯಾನುಗಳು , ಅದರ ಮೌಲ್ಯ 2800/– ಮತ್ತು ಒಂದು ಮಾರುತಿ ಒಮಿನಿ ಕಾರು ಹಾಗೂ ಒಂದು ಮೊಬೈಲ್ ಸೆಟ್ಟನ್ನು ಫಿರ್ಯಾದುದಾರರು ದಿ:23–8–2008ರಂದು ಹಸ್ತಾಂತರಿಸಿರುತ್ತಾರೆ. ಅದರಂತೆ ಠಾಣಾ ಮೊಕದ್ದಮೆ ನಂ:57/2009 ಅಬಕಾರಿ ಕಾಯಿದೆ ಕಲಂ 11,32,34,43ಎ ಹಾಗೂ 38ಎ ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ

ನಿವೇದಿಸಿ ಕೊಂಡಿರುತ್ತೇನೆ. ಸ್ಥಳದಲ್ಲೆ ಮಹಜರು ಕ್ರಮ ಜರುಗಿಸಲಾಗಿ ಸದ್ರಿ ಮಹಜರನ್ನು ಈಗ ನೋಡಿ ಅದನ್ನು ನಿಶಾನೆ ಪಿ–1 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–1 ಎ ಎಂದು ಗುರುತಿಸಿರುತ್ತೇನೆ. ಹಾಗೂ ಹಸ್ತಾಂತರಿಸಿದ ಸದ್ರಿ ಮಾರುತಿ ಒಮಿನಿ ಕಾರು, ಒಂದು ಮೊಬೈಲ್, 4 ಪ್ಲಾಸ್ಟಿಕ್ ಕ್ಯಾನುಗಳಿರುವ ಸ್ಪಿರಿಟ್‌ಗಳನ್ನು ಪಿ.ಎಫ್ ಹಾಕಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ. ಕಡತವನ್ನು ಪಿ.ಎಸ್.ಐ ರವರ ಪರಾಂಭರಿಕೆಗೆ ಇಟ್ಟಿರುತ್ತೇನೆ. ಎಂದು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

ಪಾಟೀ ಸವಾಲು: ವಾಹನದ ಮಾಲೀಕರಾಗಲೀ ಮಾಲೀಕರ ಪರ ವಕೀಲರಾಗಲೀ ಈ ಪ್ರಕರಣದಲ್ಲಿ ಯಾವುದೇ ಆಸಕ್ತಿ ತೋರಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸ ಲಾಯಿತು.

ಪ್ರಾ.ಸ–2

ಶ್ರೀ.ಎಸ್.ವಿಠಲ್,ಅಬಕಾರಿ ನಿರೀಕ್ಷಕರು,ಮಂಗಳೂರು ಪೂರ್ವ ವಲಯ–2, ಮಂಗಳೂರು ಇವರು ಪ್ರಕರಣದ ಸೊತ್ತುಗಳನ್ನು ಇಲಾಖೆಯ ಪರ ಸ್ವೀಕರಿಸಿ, ತನಿಖೆ ಕೈಗೊಂಡ ಬಗ್ಗೆ ಸಾಕ್ಷಿದಾರರಾಗಿ ಅಭಿಯೋಗದ ಪರ ದಿನಾಂಕ:19–1–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ನಾನು 3–4–2008 ರಿಂದ ಇಲ್ಲಿಯತನಕ ಮಂಗಳೂರು ಪೂರ್ವ ವಲಯ–2 ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಪೊಲೀಸ್ ಉಪ ನಿರೀಕ್ಷಕರು, ಬಜಪೆ ಪೊಲೀಸ್ ಠಾಣೆ ಇವರ ಕ್ರೈಂ ಸಂ: 57/09 ದಿ:28–3–2009 ಈ ತಕ್ಷೀರಿಗೆ ಸಂಬಂಧಪಟ್ಟ ವಾಹನ ಸಂ:KA-19-P-5313 ನೀಲಿ ಬಣ್ಣದ ಮಾರುತಿ ಒಮಿನಿ ಕಾರು, 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 140 ಲೀಟರು ಸ್ಪಿರಿಟನ್ನು (ಮಾದರಿ ಹೊರತುಪಡಿಸಿ) ಮತ್ತು ನೊಕಿಯೋ ಮೊಬೈಲ್ ಸೆಟ್ ಪೋನ್ ಹಾಗೂ ಪ್ರಕರಣದ ಕಡತದ ಪ್ರತಿಗಳನ್ನು, ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ ಜಿಲ್ಲೆ ಇವರ ದಿ:8–6–2009ರ ಆದೇಶದಂತೆ 7–7–2009ರಂದು ನನ್ನ ಸುಪರ್ದಿಗೆ ಹಸ್ತಾಂತರಿಸಿರುತ್ತಾರೆ. ಸದ್ರಿ ಸೊತ್ತುಗಳನ್ನು ನನ್ನ ಸುಪರ್ದಿಗೆ ಪಡೆದುಕೊಂಡ ಬಗ್ಗೆ ಅಧಿಕೃತ ಅಧಿಕಾರಿಗಳಿಗೆ ದಿ:7–10–2009ರಂದು ವರದಿ ಸಲ್ಲಿಸಿರುತ್ತೇನೆ.

ಸದ್ರಿ ವರದಿಯನ್ನು ಈಗ ನೋಡಿ ನಿಶಾನೆ ಪಿ–2 ಎಂದು ಗುರುತಿಸಲಾಯಿತು. ವಶಪಡಿಸಿ ಕೊಳ್ಳಲಾದ ವಾಹನದ ಬಿ ರಿಜಿಸ್ಟಾರ್ ಎಕ್ಸ್ ಟ್ರಾಕ್ಟ್ ವರದಿಯನ್ನು ನೀಡುವ ಬಗ್ಗೆ ಪ್ರಾ.ಸಾ.ಅ ದ.ಕ ಜಿಲ್ಲೆ ಮಂಗಳೂರು ಇವರಿಗೆ ದಿ:1–8–2009ರಂದು ಪತ್ರ ಬರೆದು , ಅದರ ಪ್ರತಿಯನ್ನು ಈಗ ನೋಡಲಾಗಿ ನಿಶಾನೆ ಪಿ–3 ಎಂದು ಗುರುತಿಸಲಾಯಿತು. ದಿ:3–8–2009ರಂದು ಸದ್ರಿ ಪ್ರಾ.ಸಾ. ಅಧಿಕಾರಿಗಳಿಂದ ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಪಡೆದಿರುತ್ತೇನೆ. ಸದ್ರಿ ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಈಗ ನೋಡಿ ಇಎಕ್ಸ್ ಪಿ–4 ಎಂದು ಗುರುತಿಸಲಾಯಿತು. ಸದ್ರಿ ಬಿ ರಿಜಿಸ್ಟ್ರಾರ್ ವರದಿಯನ್ನು ಪರಿಶೀಲಿಸಲಾಗಿ ಅದರಲ್ಲಿದ್ದ ವಾಹನದ ಸಂ:KA-19-P-5313 ಆಗಿದ್ದರೂ, ಅದರ ಚಾಸೀಸ್ ಮತ್ತು ಚಾಸೀಸ್ ಸಂಖ್ಯೆಯನ್ನು ನೋಡಲಾಗಿ MA3EVB11 S00714565 ಹಾಗೂ ಇಂಜಿನ್ ಸಂ:F8BIN 2959137 ಆಗಿದ್ದು ಜಪ್ತು ಪಡಿಸಿಕೊಳ್ಳಲಾದ ವಾಹನದ ಚಾಸೀಸ್ ಸಂ: MA3EYB11S00752815 ಮತ್ತು ಇಂಜಿನ್ ಸಂ:F8BIN3571131 ಆಗಿದ್ದು, ಒಂದಕ್ಕೊಂದು ತಾಳೆಕಂಡುಬಂದಿರುವುದಿಲ್ಲ. ಇದರಿಂದ ಪ್ರಕರಣ ಸಂದರ್ಭದಲ್ಲಿ ಅರೋಪಿತ ವ್ಯಕ್ತಿಯು ತಪ್ಪಿಸಿಕೊಳ್ಳುವ ಉದ್ದೇಶದಿಂದ ವಾಹನಕ್ಕೆ ನಕಲಿ ನಂಬರ್ ಪ್ಲೇಟನ್ನು ಆಳವಡಿಸಿ ಅಪರಾಧ ಎಸಗಿರುವುದು ಕಂಡು ಬರುತ್ತದೆ. ಈ ಬಗ್ಗೆ ನಾನು ವರದಿಯನ್ನು ಅಧಿಕೃತ ಅಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ. ಹಾಗೂ ಸದ್ರಿ ವರದಿಯೊಂದಿಗೆ ಜಪ್ತು ಪಡಿಸಿದ ಮದ್ಯಸಾರದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಲಗತ್ತಿಸಿ ಜಪ್ತುಪಡಿಸಿಕೊಳ್ಳಲಾದ ವಾಹನ ಸಮೇತ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಶಿಫಾರಸ್ಸು ಮಾಡಿರುತ್ತೇನೆ. ಆ ಪ್ರಕಾರ ಅಧಿಕೃತ ಅಧಿಕಾರಿಗಳ ದಿನಾಂಕ:7–11–2009ರ ಆದೇಶದಲ್ಲಿ ಜಪ್ತುಪಡಿಸಿಕೊಂಡ ವಾಹನ ಹೊರತುಪಡಿಸಿ, 35 ಲೀ ಗಾತ್ರದ 4 ಪ್ಲಾಸ್ಟಿಕ್ ಕ್ಯಾನುಗಳಲಿದ್ದ (ಮಾದರಿ ಹೊರತುಪಡಿಸಿ) 136 ಲೀ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶಿಸಿರುವ ಮೇರೆಗೆ ಕೆ.ಎಸ್.ಬಿ.ಸಿ.ಎಲ್ ಅಧಿಕಾರಿಗಳು ಮತ್ತು ಸಾರ್ವಜನಿಕರ ಸಮ್ಮುಖದಲ್ಲಿ ದಿ:4–1–2010ರಂದು ಸದ್ರಿ ಮದ್ಯಸಾರವನ್ನು ನಾಶಪಡಿಸಿ, ಈ ಬಗ್ಗೆ ಅಧಿಕೃತ ಅಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿ ನಿಶಾನೆ ಪಿ–5 ಎಂದು ಗುರುತಿಸಲಾಯಿತು ಎಂದು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

ಪಾಟೀ ಸವಾಲು: ವಾಹನದ ಮಾಲೀಕರಾಗಲೀ ಮಾಲೀಕರ ಪರ ವಕೀಲರಾಗಲೀ ಈ ಪ್ರಕರಣದಲ್ಲಿ ಯಾವುದೇ ಆಸಕ್ತಿ ತೋರಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಪ್ರಾ.ಸ–3

ಶ್ರೀ ಪಾಪಯ್ಯ, ಪೊಲೀಸ್ ಉಪಾಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇದ ದಳ,ಮಂಗಳೂರು ವಿಭಾಗ, ಮಂಗಳೂರು ಇವರು ಪ್ರಕರಣದ ಫಿರ್ಯಾದುದಾರರಾಗಿ ಅಭಿಯೋಗದ ಪರ ದಿನಾಂಕ:19–1–2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿಯನ್ನು ನೀಡುತ್ತಾ, ನಾನು ದಿ:24–3–2008 ರಿಂದ ಅಬಕಾರಿ ಜಾರಿ ಮತ್ತು ಲಾಟರಿ ನಿಷೇದ ದಳ,ಮಂಗಳೂರು ವಿಭಾಗದಲ್ಲಿ ಪೊಲೀಸ್ ಉಪ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:28–3–2009 ರಂದು ಖಚಿತ ವರ್ತಮಾನದ ಮೇರೆಗೆ ಮಂಗಳೂರು–ಮೂಡಬಿದ್ರೆ ರಸ್ತೆಯ ಎಡಪದವು ಜಂಕ್ಷನ್‌ನಿಂದ ಮಂಗಳೂರು ಕಡೆಗೆ ಬರುವ

ರಸ್ತೆಯ ಎಡಬದಿಯಲ್ಲಿ ಒಂದು ಮಾರುತಿ ಓಮ್ನಿ ಕಾರು ನಿಂತಿದ್ದು, ಅದನ್ನು ಪಂಚ ಸಾಕ್ಷಿದಾರರ ಸಮಕ್ಷಮದಲ್ಲಿ ಪರಿಶೀಲಿಸಲಾಗಿ ಅದು ನೀಲಿ ಬಣ್ಣದ್ದಾಗಿದ್ದು, ಅದರ ಚಾಸಿಸ್ ನಂಬರ್ MA3EYB11S00 752815 ಮತ್ತು ಇಂಜಿನ್ ನಂಬರ್ F8BIN3571131 ಆಗಿದ್ದು, ಅದರ ನೊಂದಣಿ ಸಂಖ್ಯೆ KA-19P-5313 ಆಗಿರುತ್ತದೆ. ಮಾಹಿತಿಯಂತೆ ವಾಹನದ ಒಳಗಡೆ ಪರಿಶೀಲಿಸಲಾಗಿ ವಾಹನದಲ್ಲಿ 35 ಲೀಟರ್ ಸಾಮರ್ಥ್ಯದ 4 ಪ್ಲಾಸ್ಟಿಕ್ ಕ್ಯಾನುಗಳಿದ್ದು,ಅದರಲ್ಲಿ ನೀರಿನ ಬಣ್ಣದ ದ್ರಾವಣ ತುಂಬಿರುವುದು ಕಂಡು ಬಂದು, ಸದ್ರಿ ವಾಹನವನ್ನು ಚಲಾಯಿಸುತ್ತಿದ್ದ ವ್ಯಕ್ತಿಯು ಉಪಸ್ಥಿತನಿದ್ದು, ಸದ್ರಿ ವಸ್ತುಗಳ ಬಗ್ಗೆ ವಿಚಾರಿಸಲಾಗಿ ಅದು ಸ್ಪಿರಿಟ್ ಎಂದೂ, ಅವುಗಳನ್ನು ಕೇರಳಕ್ಕೆ ಸಾಗಿಸುತ್ತಿರುವುದಾಗಿಯೂ ತಿಳಿಸಿದನು. ಅದನ್ನು ಸಾಗಾಟ ಮಾಡಲು ರಹದಾರಿ ಏನಾದರೂ ಇದೆಯೋ? ಎಂದು ಕೇಳಲಾಗಿ ಅದು ಯಾವುದೂ ಇಲ್ಲವೆಂದು ಆ ವ್ಯಕ್ತಿ ತಿಳಿಸಿದ ಮೇರೆಗೆ ಸದ್ರಿ ಮದ್ಯಸಾರ ಅಕ್ರಮ ಸಾಗಾಟವೆಂದು ಖಾತ್ರಿಯಾದ್ದರಿಂದ ಸದ್ರಿ ಮದ್ಯಸಾರ ತುಂಬಿದ ಪ್ರತಿ ಕ್ಯಾನುಗಳಿಂದ ತಲಾ 1 ಲೀಟರಿನಂತೆ ಮದ್ಯಸಾರವನ್ನು ಸ್ಯಾಂಪಲ್ ತೆಗೆದು, ಪ್ರತ್ಯೇಕ ಪ್ರತ್ಯೇಕವಾಗಿ ಬಿಳಿ ಕ್ಯಾನುಗಳ'ಲ್ಲಿ ತುಂಬಿಸಿ, ಬಿಳಿ ಬಟ್ಟೆಯಿಂದ ಸುತ್ತಿ, ಸೀಲು ಮಾಡಿ, ಸದ್ರಿ ಸ್ಯಾಂಪಲ್‌ಗಳಿಗೆ 1–ಎ,2–ಎ, 3–ಎ ಮತ್ತು 4–ಎ ಎಂದು ಗುರುತಿಸಿ,ಸ್ಪಿರಿಟ್ ಇದ್ದ ಕ್ಯಾನುಗಳಿಗೂ ಬಿಳಿ ಬಟ್ಟೆ ಸುತ್ತಿ, ಅರಗು ಸೀಲು ಮಾಡಿ ಅವುಗಳಿಗೂ ಕ್ರಮ ಸಂಖ್ಯೆ 1,2,3 ಮತ್ತು 4 ಎಂದು ನಮೂದಿಸಿ, ಪಂಚರ ಸಹಿ ಮತ್ತು ವಿಳಾಸವಿರುವ ವಿವರದ ಗುರುತು ಚೀಟಿಯನ್ನು ಅಂಟಿಸಲಾಯಿತು. ಸದ್ರಿ ವಾಹನದಲ್ಲಿ ಸ್ಪಿರಿಟ್ ಸಾಗಿಸುತ್ತಿದ್ದ ವ್ಯಕ್ತಿಯ ಹೆಸರು, ವಿಳಾಸ ಕೇಳಲಾಗಿ ತನ್ನ ಹೆಸರು ಹನೀಫ್, ಅಲಿಯಾಸ್ ಕೊಕ್ಕಡ ಹನೀಫ್, ಬಿನ್:ಕೊಕ್ಕಡ ಮಹಮ್ಮದ್ ಭಾರತ್ ಪೆಟ್ರೋಲ್ ಬಂಕ್ ಹತ್ತಿರ,ತಲಪಾಡಿ ಎಂದು ತಿಳಿಸಿದ್ದು, ತಾನು ಸದ್ರಿ ಸ್ಪಿರಿಟನ್ನು ಯಾವುದೇ ಪರವಾನಿಗೆ ಇಲ್ಲದೇ ಕೇರಳ ಕಡೆಗೆ ಸಾಗಾಟ ಮಾಡುತ್ತಿರುವುದಾಗಿ ಆ ವ್ಯಕ್ತಿಯು ತಿಳಿಸಿರುತ್ತಾನೆ. ಸದ್ರಿ ಆಪಾದಿತನನ್ನು ವಶಕ್ಕೆ ತೆಗೆದುಕೊಂಡು, 4 ಕ್ಯಾನುಗಳಲ್ಲಿದ್ದ ಒಟ್ಟು 140 ಲೀಟರ್ ಸ್ಪಿರಿಟ್ ಮತ್ತು ಆರೋಪಿತನ ವಶದಲ್ಲಿದ್ದ ಸಿಮ್ ಸಂಖ್ಯೆ:9663949420 ಇರುವ ನೋಕಿಯೋ ಕಂಪೆನಿ ಮೊಬೈಲ್ ಸೆಟ್ಟನ್ನು ವಶಕ್ಕೆ ತೆಗೆದುಕೊಂಡು, ಸ್ಥಳದಲ್ಲೆ ಮಹಜರು ಕ್ರಮ ಜರುಗಿಸಲಾಗಿ ಸದ್ರಿ ಮಹಜರನ್ನು ಈಗ ನೋಡಿ ಅದನ್ನು ನಿಶಾನೆ ಪಿ–1 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–1 ಎ ಎಂದು ಗುರುತಿಸಿರುತ್ತೇನೆ. ಆರೋಪಿತನು ಅಬಕಾರಿ ಕಾಯಿದೆ ಕಲಂ 11,32,34,43 ಎ ಹಾಗೂ 38 ಎ ರ ಪ್ರಕಾರ ಅಪರಾಧ ಎಸಗಿರುವುದರಿಂದ ಮುಂದಿನ ಕ್ರಮಕ್ಕಾಗಿ ಬಜ್ಪೆ ಪೊಲೀಸ್ ಠಾಣೆಗೆ ಸೊತ್ತುಗಳನ್ನು ಹಾಗೂ ಆರೋಪಿತರನ್ನು ಹಸ್ತಾಂತರಿಸಿರುತ್ತೇನೆ. ಎಂದು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

ಪಾಟೀ ಸವಾಲು: ವಾಹನದ ಮಾಲೀಕರಾಗಲೀ ಮಾಲೀಕರ ಪರ ವಕೀಲರಾಗಲೀ ಈ ಪ್ರಕರಣದಲ್ಲಿ ಯಾವುದೇ ಆಸಕ್ತಿ ತೋರಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸ ಲಾಯಿತು.

ಈ ಪ್ರಕರಣದ ಫಿರ್ಯಾದುದಾರರು, ಮಹಜರು ಸಾಕ್ಷಿದಾರರು ಹಾಗೂ ತನಿಖಾಧಿಕಾರಿಗಳು ಪೂರಕವಾಗಿ ನೀಡಿರುವ ಸಾಕ್ಷಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:28–3–2009ರಂದು ಜಪ್ತು ಪಡಿಸಿರುವ ಮಾರುತಿ ಒಮಿನಿ ಕಾರು ಸಂ:KA-19-P-5313ರ ವಾಹನಕ್ಕೆ ನಕಲಿ ನೊಂದಾಣಿ ಸಂಖ್ಯೆ :KA-19-P-5313ನ್ನು ಹಾಕಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣತ್ಮಾಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯಸಾರವು ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಸಾಬೀತು ಪಡಿಸುವುದು ಅಕ್ರಮ ಸಂದರ್ಭದಲ್ಲಿ ವಾಹನದ ಸುಪರ್ಧಿ ಹೊಂದಿರುವ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಜಪ್ತಾದ ವಾಹನದ ಮಾಲೀಕತ್ವದ ಬಗ್ಗೆ ವಿವರಗಳುಳ್ಳ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಜಿಲ್ಲೆ ಮಂಗಳೂರುರವರಿಂದ ಪಡೆಯಲಾಗಿದ್ದು,ಸದ್ರಿ ಬಿ ರಿಜಿಸ್ಟ್ರಾರ್ ವರದಿಯಲ್ಲಿರುವ ವಾಹನದ ಇಂಜಿನ್ ಮತ್ತು ಚಾಸೀಸ್ ಸಂಖ್ಯೆ ಜಪ್ತಾಗಿರುವ ವಾಹನದ ಇಂಜಿನ್ ಮತ್ತು ಚಾಸೀಸ್ ಸಂಖ್ಯೆಗೆ ತಾಳೆ ಕಂಡುಬಾರದೇ ಇರುವುದರಿಂದ ಅರೋಪಿಗಳು ಅಕ್ರಮಕ್ಕೆ ಬಳಸಲಾದ ವಾಹನಕ್ಕೆ ನಕಲಿ ಸಂಖ್ಯಾ ಫಲಕವನ್ನು ಅಳವಡಿಸಿ ಅಪರಾಧ ಎಸಗಿರುವುದು ನಿಸ್ಸಂಶಯವಾಗಿರುತ್ತದೆ. ಆದಾಗ್ಯೂ ಬಿ ರಿಜಿಸ್ಟಾರ್ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ದೃಡೀಕೃತವಾಗಿರುವ ವಾಹನದ ಮಾಲೀಕರಾದ ಶ್ರೀ.ಬಿ.ಮುರಳೀಧರ್ ಶೆಟ್ಟಿ ಎಂಬವರಿಗೆ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಸದ್ರಿಯವರು ಉತ್ತರಿಸುತ್ತ ತನ್ನ ವಾಹನವು ತನ್ನ ಸುಪರ್ಧಿ ಯಲ್ಲಿಯೇ ಇದ್ದು, ಯಾವುದೇ ಪ್ರಕರಣದಲ್ಲಿ ಜಪ್ತಾಗಿರುವುದಿಲ್ಲ. ಕಾರಣ ಪ್ರಕರಣದಲ್ಲಿ ಜಪ್ತಾಗಿ ಇಲಾಖೆಯ ವಶದಲ್ಲಿರುವ KA-19-P-5313 ಎಂಬಂತೆ ನಕಲಿ ನೊಂದಣಿ ಸಂಖ್ಯೆ ಇರುವ ಮಾರುತಿ ಒಮಿನಿ ಕಾರು ಇದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಲ್ಲಿ ತನ್ನಿಂದ ಯಾವುದೇ ಅಭ್ಯಂತರವಿರುವುದಿಲ್ಲವೆಂದು ಲಿಖಿತ ಸ್ವಷ್ಟಿಕರಣ ನೀಡಿರುತ್ತಾರೆ. ಪ್ರಕರಣ ದಾಖಲಾಗಿ ಸುಮಾರು 10 ತಿಂಗಳುಗಳು ಕಳೆದಿದ್ದರೂ, ಜಪ್ತಾದ ವಾಹನದ ಮಾಲೀಕನು ತನ್ನ ವಾಹನವನ್ನು ಪಡೆದುಕೊಳ್ಳುವ ಬಗ್ಗೆ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರುವುದು ಹಾಗೂ ಈ ಬಗ್ಗೆ ಪ್ರಾಧಿಕಾರದ ಮುಂದೆ ಹಾಜರಾಗಿ ಸೂಕ್ತ ಸಾಕ್ಷದಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತು ಪಡಿಸಲು ವಾಹನದ ಮಾಲೀಕರು ವಿಫಲರಾಗಿರುವುದರಿಂದ ಹಾಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಪ್ರಕರಣ ನಡೆಸಲು

ಉತ್ಸುಕರಾಗದೇ ಇರುವುದನ್ನು ಗಮನಿಸಿದಾಗ ಜಪ್ತಾದ ವಾಹನ ಮಾಲೀಕರು ತನ್ನ ತಿಳುವಳಿ ಯಿಂದಲೇ ವಾಹನವನ್ನು ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ.ಈ ಮೇಲಿನ ಕಾರಣಗಳಿಂದ ಎರಡನೇಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಮಾರುತಿ ಒಮಿನಿ ವ್ಯಾನನ್ನು ಅರೋಪಿಗಳು ನಕಲಿ ನೊಂದಾಣಿ ಸಂಖ್ಯೆ ಬಳಿಸಿ, ವಾಹನವನ್ನು ಅಕ್ರಮ ಮದ್ಯಸಾರ ಸಾಗಿಸಿರುವುದು ಸಾಬೀತಾಗಿರುವುದರಿಂದ ಇಂತಹ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ಸಿ ಯಡಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ ಪ್ರಾಧಿಕಾರವು ತೀರ್ಮಾನಿಸಿ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ನಕಲಿ ನೊಂದಾಣಿ ಸಂಖ್ಯೆ ಬಳಸಿರುವ ಮಾರುತಿ ಒಮಿನಿ ಕಾರು ಸಂ:KA-19-P-5313ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ನೇ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಬಜಪೆ ಪೊಲೀಸ್ ಠಾಣಾ ಇವರ ಕ್ರೈಂ ಸಂ:57/2009 ದಿ: 28–3–2009ರಲ್ಲಿ ಜಪ್ತು ಪಡಿಸಿಕೊಂಡಿರುವ ನಕಲಿ ನೊಂದಾಣಿ ಸಂಖ್ಯೆಯ ಮಾರುತಿ ಒಮಿನಿ ಕಾರು ಸಂ: KA-19-P-5313 ಚಾಸೀಸ್ ಸಂ: MA3EYB11S00752815 ಮತ್ತು ಇಂಜಿನ್ ಸಂ: F8BIN3571131) ನ್ನು ನಿಯಮ 43 ಸಿ ಅನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ

ಈ ಆದೇಶವನ್ನು ದಿನಾಂಕ:22–01–2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ–I : ಶ್ರೀ.ಚಂದ್ರಶೇಖರಯ್ಯ, ಹೆಚ್.ಸಿ–486, ಮಂಗಳೂರು ಪೂರ್ವ ಪೊಲೀಸ್ ಠಾಣೆ.
ಪ್ರಾ.ಸ–2 : ಶ್ರೀ ಎಸ್.ವಿಠಲ್, ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಪೂರ್ವ ವಲಯ–2
ಪ್ರಾ.ಸಾ–3 : ಶ್ರೀ.ಪಾಪಯ್ಯ, ಪೊಲೀಸ್ ಉಪಾಧೀಕ್ಷಕರು, ಅಬಕಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ವಿಭಾಗ.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ಇಎಕ್ಸ್ ಪಿ–I	: ಮಹಜರು ಪ್ರತಿ
ಇಎಕ್ಸ್ ಪಿ– I ಎ	: ಪಿ.ಡಬ್ಲ್ಯೂ –1 ರವರ ಸಹಿ
ಇಎಕ್ಸ್ ಪಿ– I ಬಿ	: ಪಿ.ಡಬ್ಲ್ಯೂ –3 ರವರ ಸಹಿ
ಇಎಕ್ಸ್ ಪಿ–2	: ತನಿಖಾಧಿಕಾರಿಯವರ ದಿ:7–10–09ರ ವರದಿ
ಇಎಕ್ಸ್ ಪಿ–3	: ತನಿಖಾಧಿಕಾರಿಯವರು ಪಾದೇಶಿಕ ಸಾರಿಗೆ ಅಧಿಕಾರಿಯವರಿಗೆ ಬರೆದ ಪತ್ರ ದಿ:1–8–2009
ಇಎಕ್ಸ್ ಪಿ–4	: ಬಿ.ಎಕ್ಸ್‌ಟ್ರಾಕ್ಟ್ ವರದಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಅರ್ಜಿದಾರರ ಹೇಳಿಕೆ :– – ಯಾವುದು ಇಲ್ಲ–

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– – ಯಾವುದು ಇಲ್ಲ–

ನೂರ್ ಮಹಮ್ಮದ್ ಹುಸೇನ್,
ಪಿ.ಆರ್.213 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಭಾರತ ಸರ್ಕಾರ)
ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾವೇರಿ ವಿಭಾಗ, ಹಾವೇರಿ

4.1 (ಎ) ಸಾರ್ವಜನಿಕ ಪ್ರಾಧಿಕಾರಿಗಳ ಹೊಣೆಗಾರಿಕೆ ಮಾಹಿತಿ ಈ ಕೆಳಗಿನಂತಿದೆ.

1) ವಿಭಾಗದ ವ್ಯಾಪ್ತಿಯಲ್ಲಿ 5 ಲಕ್ಷದೊಳಗಿನ ಕಾಮಗಾರಿಗಳನ್ನು ಮ್ಯಾನುವಲ್ ಮೂಲಕ ಹಾಗೂ 5 ಲಕ್ಷಕ್ಕಿಂತ ಮೇಲ್ಪಟ್ಟ ಕಾಮಗಾರಿಗಳನ್ನು ಈ ಟೆಂಡರ್ (ಈ ಪ್ರೊಕ್ಯೂರ್‌ಮೆಂಟ್) ನಿರ್ವಹಿಸಲಾಗುತ್ತಿದೆ.
2) ತಾಂತ್ರಿಕ ಶಾಖೆಯ ದಾಖಲೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ.
3) ಲೆಕ್ಕಪತ್ರ ಶಾಖೆಯ ದಾಖಲೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ.
4) ಆಡಳಿತ ಶಾಖೆಯ ದಾಖಲೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲಾಗಿದೆ.
5) ಕಚೇರಿಯ ಎಲ್ಲ ದಾಖಲೆಗಳನ್ನು ವಿಷಯಸೂಚಿಗೆ ಅನುಗುಣವಾಗಿ ನಿರ್ವಹಿಸಲಾಗುತ್ತಿದೆ.
6) ಈ ಟೆಂಡರ್ (ಈ ಪ್ರೊಕ್ಯೂರ್‌ಮೆಂಟ್) ಅಡಿ ನಿರ್ವಹಿಸಲಾಗುವ ಟೆಂಡರಗಳನ್ನು ಅಂತರ್‌ಜಾಲ ವ್ಯವಸ್ಥೆಗೆ ಒಳಪಡಿಸಲಾಗಿದೆ.
7) ಅಂತರ್‌ಜಾಲ ವಿಳಾಸ : https://eproc.karnataka.gov.in

ಖಾಯಂ ಮಾಹಿತಿ

ಕೈಪಿಡಿ 1 ರಿಂದ 6

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಭಾರತ ಸರ್ಕಾರ)
ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಹಾವೇರಿ ವಿಭಾಗ, ಹಾವೇರಿ.
ಅಧಿಸೂಚನೆ
ಅನುಬಂಧ–2
4.1 (ಬಿ) 17 ವರ್ಗಗಳ ಮಾಹಿತಿ ಈ ಕೆಳಗಿನಂತಿದೆ.

ಕೈಪಿಡಿ 1 – ಸಂಸ್ಥೆಯ ವಿವರಗಳು ಮತ್ತು ಕರ್ತವ್ಯ ಮತ್ತು ವಿಧಿಗಳು:

ಹೊಸದಾಗಿ ಸೃಷ್ಟಿಸಲಾದ ಹಾವೇರಿ ಜಿಲ್ಲೆ, ಲೋಕೋಪಯೋಗಿ ಇಲಾಖೆಯ ರಸ್ತೆಗಳ ನಿರ್ಮಾಣ, ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳನ್ನು ಮತ್ತು ಎಲ್ಲಾ ಸರಕಾರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ ಕೆಲಸಗಳನ್ನು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಿರ್ವಹಿಸುವ ದೃಷ್ಠಿಯಿಂದ 11–12–98ರಲ್ಲಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಹಾವೇರಿ ವಿಭಾಗ, ಹಾವೇರಿ ಈ ಕಚೇರಿಯನ್ನು ಹೊಸದಾಗಿ ಸೃಜಿಸಲಾಗಿದ್ದು, ಈ ಇಲಾಖೆಗೆ ಸರ್ಕಾರಿ ಅಧಿಸೂಚನೆ ಕ್ರಮ ಸಂಖ್ಯೆ:ಡಿಸಿಎ/05/ಎಆರ್‌ಬಿ/2007 ದಿನಾಂಕ:24–10–2007 ರಲ್ಲಿ ಲೋಕೋಪಯೋಗಿ ಇಲಾಖೆಯ ಹೆಸರನ್ನು "ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ" ಎಂದು ಮರುನಾಮಕರಣಗೊಳಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ಕಾರ್ಯನಿರ್ವಾಹಕ ಇಂಜಿನೀಯರರು ಮೇಲ್ವಿಚಾರಕರಾಗಿರುವರು. ಇಲಾಖೆಯ ಕೆಲಸಗಳ ನಿರ್ವಹಣಾ ಕೇಂದ್ರ ವಿಭಾಗವಾಗಿದ್ದು, ಈ ವಿಭಾಗದ ಮುಖ್ಯಸ್ಥರಾದ ಕಾರ್ಯನಿರ್ವಾಹಕ ಇಂಜಿನೀಯರರು ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ದಕ್ಷತೆಯಿಂದ ನಿರ್ವಹಿಸುವ ಹೊಣೆ ಹೊತ್ತಿರುತ್ತಾರೆ. ದಿನಾಂಕ:1.4.1987 ರಂದು ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಲೋಕೋಪಯೋಗಿ ಇಲಾಖೆಯಲ್ಲಿಯ ಇತರ ಜಿಲ್ಲಾ ಮತ್ತು ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಪರಿಷತ್‌ಗಳಿಗೆ ವರ್ಗಾಯಿಸಲಾಗಿದೆ.

ಹಾವೇರಿ ವಿಭಾಗದ ಅಡಿಯಲ್ಲಿ ಹಾವೇರಿ, ಹಾನಗಲ್ಲ, ರಾಣೇಬೆನ್ನೂರ, ಹಿರೇಕೆರೂರ ಬ್ಯಾಡಗಿ, ಶಿಗ್ಗಾಂವ, ಸವಣೂರ ಒಟ್ಟು 7 ಉಪವಿಭಾಗಗಳು ಬರುತ್ತವೆ. ಈ ಜಿಲ್ಲೆಯ ಭೌಗೋಲಿಕ ವಿಸ್ತೀರ್ಣವು 4848 ಚದರ ಕಿಮೀ ಇರುತ್ತದೆ, ಮತ್ತು 2001 ರ ಜನಗಣತಿಯ ಪ್ರಕಾರ ಹಾವೇರಿ ಜಿಲ್ಲೆಯ ಒಟ್ಟು ಜನಸಂಖ್ಯೆ 14.39 ಲಕ್ಷ ಇರುತ್ತದೆ.

ಹಾವೇರಿ ವಿಭಾಗದ 30.06.2009 ಕ್ಕೆ ರಸ್ತೆ ಹಾಗೂ ಕಟ್ಟಡಗಳ ವಿವರ ಈ ಕೆಳಗಿನಂತಿರುತ್ತದೆ.

ಅ) ರಸ್ತೆಗಳು:

1. ರಸ್ತೆಗಳ ಮಾಹಿತಿ ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

ಬ) ಕಟ್ಟಡಗಳು:

1. ಕಟ್ಟಡಗಳು ನಂ. 178

ಹಾವೇರಿ ವಿಭಾಗವು ಈ ಕೆಳಕಂಡ ಉಪವಿಭಾಗಗಳ ಕಾಮಗಾರಿಗಳ ಉಸ್ತುವಾರಿ ಹಾಗೂ ನಿರ್ವಹಣೆಯನ್ನು ನೋಡಿಕೊಳ್ಳುತ್ತದೆ.

STATEMENT SHOWING THE STATE HIGHWAYS TOTAL LENGTH & LENGTH IN EACH TALUKA OF HAVERI DISTRICT As on 30-09-2008

Sl. No.	State Highway	State Highway No.	HAVERI			HANGAL			SHIGGAON			SAVANUR			RANEBENNUR			BYADGI			HIREKERUR			Total Length Road wise in Kms	Remarks
			From	to	Length	From	to	Length	From	to	Length	From	to	Length	From	to	Length	From	to	Length	From	to	Length		
1	2	3	4	5	6	7	8	9	10	11	12	13	14	15	16	17	18	19	20	21	22	23	24	25	26
1	PADUBIDRE - CHIKKALGUDD	1	-	-	0.00	256.49	288.99	32.50	288.99	321.525	32.135	-	-	0.00	-	-	0.00	-	-	0.00	-	-	0.00	64.635	0.40 km overlap on Kumata-Tadas SH in Shiggaon Taluka.
2	EKKUMBI - MOLAKALMUR	2	43.09	88.49	45.40	10.67	43.09	32.42	-	-	0.00	-	-	0.00	-	-	0.00	-	-	0.00	-	-	0.00	77.82	
3	KARWAR - ILAKAL	6	-	-	0.00	-	-	0.00	149.40	172.09	20.69	172.09	194.02	21.93	-	-	0.00	-	-	0.00	-	-	0.00	42.62	2.00 km overlap on P-C Road in Shiggaon taluka.
4	KUMATA - TADAS	69	-	-	0.00	-	-	0.00	126.10	142.00	15.90	-	-	0.00	-	-	0.00	-	-	0.00	-	-	0.00	15.90	
5	KALMALA - SHIGGAON	23	-	-	0.00	-	-	0.00	284.51	294.48	9.97	294.48	295.24	0.76	-	-	0.00	-	-	0.00	-	-	0.00	19.97	
									295.24	304.48	9.24														
											19.21														
6	HALAGERI - HULIKAL	26	-	-	0.00	-	-	0.00	-	-	0.00	-	-	0.00	0.00	18.05	18.05	-	-	0.00	18.05	28.95	10.90	28.95	

Sl. No.	State Highway	State Highway No.	HAVERI			HANGAL			SHIGGAON			SAVANUR			RANEBENNUR			BYADGI			HIREKERUR			Total Length Road wise in Kms	Remarks
			From	to	Length	From	to	Length	From	to	Length	From	to	Length	From	to	Length	From	to	Length	From	to	Length		
1	2	3	4	5	6	7	8	9	10	11	12	13	14	15	16	17	18	19	20	21	22	23	24	25	26
7	BAGALAKOTE - BILIGIRIRANGA NABETTA	57	167.89	196.72	28.83	-	-	0.00	-	-	0.00	-	-	0.00	196.72	236.83	39.11	-	-	0.00	236.83	258.03	21.20	89.14	217.81 - 218.07 = 0.26 Km 225.56 - 226.30 = 0.74 Km SH
8	HAVERI - SAGAR	62	0.00	9.63	9.63	-	-	0.00	-	-	0.00	-	-	0.00	-	-	0.00	9.63	25.10	15.47	25.10	57.20	31.54	56.64	0.56km overlap on B-S SH in Hirekerur taluka.
9	BIRUR - SAMMASAGI	76	-	-	0.00	189.00	217.19	26.01	-	-	0.00	-	-	0.00	125.01	126.35	1.34	176.30	181.35	5.05	157.48	176.30	18.82	83.40	2.18 km over lap on P-C SH in Hangal taluka.
															126.35	132.95	6.60 over lap on NH-4	185.70	188.00	2.30	181.35	185.70	4.35		
															132.95	157.48	24.53				188.00	189.00	1.00		
																	25.87			**7.35**			**24.17**		
10	GAJENDRAGAD - SORABA	136	196.90	226.10	29.20	-	-	0.00	-	-	0.00	-	-	0.00	-	-	0.00	226.10	249.87	23.77	249.87	253.62	3.75	61.02	12.39 km over lap on Haveri - Sagar SH in Hirekerur taluka.
																					266.01	270.31	4.30		
																							8.05		

Sl. No.	State Highway	State Highway No.	HAVERI From	HAVERI to	HAVERI Length	HANGAL From	HANGAL to	HANGAL Length	SHIGGAON From	SHIGGAON to	SHIGGAON Length	SAVANUR From	SAVANUR to	SAVANUR Length	RANEBENNUR From	RANEBENNUR to	RANEBENNUR Length	BYADGI From	BYADGI to	BYADGI Length	HIREKERUR From	HIREKERUR to	HIREKERUR Length	Total Length Road wise in Kms	Remarks
1	2	3	4	5	6	7	8	9	10	11	12	13	14	15	16	17	18	19	20	21	22	23	24	25	26
11	NAVALGOND-BANAVASI-MUGAVALLI	137	-	-	0.00	123.04	149.10	23.55	86.11 118.871	93.491 124.04	7.381 4.169 **11.55**	93.491	105.491	12.00	-	-	0.00	-	-	0.00	-	-	0.00	47.10	8.40 km overlap on K-I Road 4.98 km overlap on NH-4 2.51 km overlap P.C. Road
	Total length talukawise				**113.06**			**114.48**			**99.485**			**34.69**			**83.03**			**46.59**			**95.86**	**587.195**	

Technical Assistant
PW, P & IWTD Division, Haveri.

Executive Engineer,
PW, P & IWTD Division, Haveri.

ಹಾವೇರಿ ಜಿಲ್ಲೆಯ ರಾಜ್ಯ ಹೆದ್ದಾರಿ ರಸ್ತೆಗಳ ಘೋಷವಾರು (ದಿನಾಂಕ:30-09-2008 ವರೆಗೆ)

ವಿಭಾಗ: :ಹಾವೇರಿ

ಕ್ರ. ಸಂ.	ಉಪ ವಿಭಾಗದ ಹೆಸರು	ಆಯಾ ತಾಲ್ಲೂಕುಗಳಲ್ಲಿ ಹಾಯ್ದು ಹೋಗುವ ರಾಜ್ಯ ಹೆದ್ದಾರಿಗಳ ಸಂಖ್ಯೆ	ರಾಜ್ಯ ಹೆದ್ದಾರಿ ಉದ್ದ (ಕಿಮೀ)	ಷರಾ
1	2	3	4	5
1	ಹಾವೇರಿ	4	113.06	
2	ಹಾನಗಲ್	4	114.48	
3	ಹಿರೇಕೆರೂರ	5	95.86	

ಕ್ರ. ಸಂ.	ಉಪ ವಿಭಾಗದ ಹೆಸರು	ಆಯಾ ತಾಲ್ಲೂಕುಗಳಲ್ಲಿ ಹಾಯ್ದು ಹೋಗುವ ರಾಜ್ಯ ಹೆದ್ದಾರಿಗಳ ಸಂಖ್ಯೆ	ರಾಜ್ಯ ಹೆದ್ದಾರಿ ಉದ್ದ (ಕಿಮೀ)	ಷರಾ
4	ರಾಣೆಬೆನ್ನೂರು	3	83.03	
5	ಬ್ಯಾಡಗಿ	3	46.59	
6	ಶಿಗ್ಗಾಂವ್	5	99.485	
7	ಸವಣೂರು	3	34.69	
	ಹಾವೇರಿ ವಿಭಾಗದ ರಾಜ್ಯ ಹೆದ್ದಾರಿ ಒಟ್ಟು ಉದ್ದ	**11 ನಂ**	**587.195**	**ಹಾವೇರಿ ವಿಭಾಗದಲ್ಲಿರುವ ರಾಜ್ಯ ಹೆದ್ದಾರಿಗಳ ಒಟ್ಟು ಸಂಖ್ಯೆ 11**

ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ ವಿಭಾಗ ಹಾವೇರಿ.

ಹಾವೇರಿ ಜಿಲ್ಲೆಯ ಜಿಲ್ಲಾ ಮುಖ್ಯ ರಸ್ತೆಗಳ ಘೋಷವಾರು (ದಿನಾಂಕ:30-06-2009 ವರೆಗೆ)

ಕ್ರ. ಸಂ.	ಉಪ ವಿಭಾಗದ ಹೆಸರು	ದಿನಾಂಕ 05-08-2008ರ ರಂತೇ ಪೂರ್ವದಲ್ಲಿ ಇರುವ ಜಿಲ್ಲಾ ಮುಖ್ಯ ರಸ್ತೆಗಳು				ದಿನಾಂಕ 05-08-2008 ರ ನಂತರ ಮೇಲ್ದರ್ಜೆಗೇರಿಸಿದ ಜಿ. ಮು. ರಸ್ತೆಗಳು				ದಿನಾಂಕಃ 30-10-2008 ಕ್ಕೆ ಇರುವ ಒಟ್ಟು ಜಿ.ಮು.ರಸ್ತೆಗಳು				ಷರಾ
		ರಸ್ತೆಗಳ ಸಂಖ್ಯೆ	ಉದ್ದ (ಕಿಮೀ)	ಓವರಲ್ಯಾಪ್ ಉದ್ದ (ಕಿಮೀ)	ಒಟ್ಟು ಉದ್ದ (ಕಿಮೀ)	ರಸ್ತೆಗಳ ಸಂಖ್ಯೆ	ಉದ್ದ (ಕಿಮೀ)	ಓವರಲ್ಯಾಪ ಉದ್ದ (ಕಿಮೀ)	ಒಟ್ಟು ಉದ್ದ (ಕಿಮೀ)	ರಸ್ತೆಗಳ ಒಟ್ಟು ಸಂಖ್ಯೆ	ಒಟ್ಟು ಉದ್ದ (ಕಿಮೀ)	ಒಟ್ಟು ಓವರ್ ಲ್ಯಾಪ ಉದ್ದ (ಕಿಮೀ)	ಒಟ್ಟು ಉದ್ದ (ಕಿಮೀ)	
1	**2**	**3**	**4**	**5**	**6**	**7**	**8**	**9**	**10**	**11**	**12**	**13**	**14**	**15**
1	ಹಾವೇರಿ	10	96.07	4.20	100.27	37	184.39	0.00	184.39	47	280.46	4.20	284.66	
2	ಹಾನಗಲ್	24	240.25	5.83	246.08	19	129.80	0.00	129.80	43	370.05	5.83	375.88	
3	ಹಿರೇಕೆರೂರ	20	255.00	6.32	261.32	11	92.37	1.63	94.00	31	347.37	7.95	355.32	
4	ರಾಣೆಬೆನ್ನೂರು	15	144.79	0.15	144.94	6	106.35	1.20	107.55	21	251.14	1.35	252.49	
5	ಬ್ಯಾಡಗಿ	8	90.70	3.30	94.00	18	97.62	1.10	98.72	26	188.32	4.40	192.72	

ಕ್ರ. ಸಂ.	ಉಪ ವಿಭಾಗದ ಹೆಸರು	ದಿನಾಂಕ 05-08-2008ರ ರಂತೇ ಪೂರ್ವದಲ್ಲಿ ಇರುವ ಜಿಲ್ಲಾ ಮುಖ್ಯ ರಸ್ತೆಗಳು				ದಿನಾಂಕ 05-08-2008 ರ ನಂತರ ಮೇಲ್ದರ್ಜೆಗೇರಿಸಿದ ಜಿ. ಮು. ರಸ್ತೆಗಳು				ದಿನಾಂಕಃ 30-10-2008 ಕ್ಕೆ ಇರುವ ಒಟ್ಟು ಜಿ.ಮು.ರಸ್ತೆಗಳು				ಷರಾ
		ರಸ್ತೆಗಳ ಸಂಖ್ಯೆ	ಉದ್ದ (ಕಿಮೀ)	ಓವರಲ್ಯಾಪ್ ಉದ್ದ (ಕಿಮೀ)	ಒಟ್ಟು ಉದ್ದ (ಕಿಮೀ)	ರಸ್ತೆಗಳ ಸಂಖ್ಯೆ	ಉದ್ದ (ಕಿಮೀ)	ಓವರಲ್ಯಾಪ ಉದ್ದ (ಕಿಮೀ)	ಒಟ್ಟು ಉದ್ದ (ಕಿಮೀ)	ರಸ್ತೆಗಳ ಒಟ್ಟು ಸಂಖ್ಯೆ	ಒಟ್ಟು ಉದ್ದ (ಕಿಮೀ)	ಒಟ್ಟು ಓವರ್ ಲ್ಯಾಪ ಉದ್ದ (ಕಿಮೀ)	ಒಟ್ಟು ಉದ್ದ (ಕಿಮೀ)	
1	2	3	4	5	6	7	8	9	10	11	12	13	14	15
6	ಶಿಗ್ಗಾಂವ್	12	62.51	2.08	64.59	16	122.44	0.00	122.44	28	184.95	2.08	187.03	
7	ಸವಣೂರು	2	14.10	0.80	14.90	26	221.91	0.00	221.91	28	236.01	0.80	236.81	
